ಜೂನ್, ೧೯೫೬

ಜೂನ್,

ದೂರವಾಣಿ : 27866 ಸ್ಥಾಪನೆ: 1943

ದಿ ವೀರಶೈವ ಸಹಕಾರ ಸಂಘ, ನಿ.,

ಸೆಂಟ್ರಲ್ ಕೋ-ಆಪರೇಟಿವ್ ಹೋಲ್‌ಸೇಲ್ ಸ್ಟೋರ್ಸ್)

" ಅಪರ್ಣ ಕಾಂಪ್ಲೆಕ್ಸ್ " ಸುಬೇದಾರ್ ಛತ್ರಂ ರಸ್ತೆ

ಬೆಂಗಳೂರು-560009.

- ವ್ಯವಹಾರ— ಸಗಟು ಬಳಕೆದಾರರ ಸಂಘ ಮತ್ತು ಶಾಖೆಗಳ ಮೂಲಕ ದಿನ ನಿತ್ಯ ಬಳಕೆ ಪದಾರ್ಥಗಳನ್ನು ಕಡಿಮೆ ದರದಲ್ಲಿ ಸಗಟು ಮಾರಾಟ ಶಾಖೆ ಮತ್ತು ಚಿಲ್ಲರೆ ಮಾರಾಟ ಶಾಖೆಗಳ ಮೂಲಕ ವಿತರಣೆ.
  — ಗ್ರಾಹಕರ ಮನೆಗಳಿಗೆ ಸರಬರಾಜು ವ್ಯವಸ್ಥೆ ಮಾಡಲಾಗುವುದು.
- 1983-84ನೇ ಸಾಲಿನಲ್ಲಿ ಷೇರು ಬಂಡವಾಳ—
  ಸದಸ್ಯರಿಂದ ರೂ. 3,90,810
  ಸರ್ಕಾರದಿಂದ ರೂ. 3,47,800
- ಸದಸ್ಯರ ಸಂಖ್ಯೆ : 5414.
- ಸಗಟು ಮತ್ತು ಚಿಲ್ಲರೆ ಮಾರಾಟ (1983-84) ರೂ. 4.47 ಕೋಟಿ.
- ಆಪದ್ಧನ ರೂ. 1,61,595.
- ಇತರೆ ನಿಧಿ ರೂ. 5,33,812.
- 1983-84 ರಲ್ಲಿ ನಿವ್ವಳ ಲಾಭ ರೂ. 1.32 ಲಕ್ಷ.
- ಸದಸ್ಯರಿಗೆ ಸೌಲಭ್ಯಗಳು :
  1) ಕೊಳ್ಳುವ ಪದಾರ್ಥದ ಮೇಲೆ ಶೇ. 2 ರಿಯಾಯಿತಿ.
  2) ಷೇರಿನ ಮೇಲೆ ಶೇ. 6½ ಡಿವಿಡೆಂಡ್.

ಮಾನ್ಯ ಸದಸ್ಯರು ಮತ್ತು ಮಾನ್ಯ ಗ್ರಾಹಕರ ಅನುಕೂಲಕ್ಕಾಗಿ ಬೆಂಗಳೂರು ನಗರದ ವಿವಿಧ ಬಡಾವಣೆಗಳಲ್ಲಿ 21 ಶಾಖೆಗಳು ಮತ್ತು ವಿಜಯನಗರದ ಬಡಾವಣೆಯಲ್ಲಿ ಒಂದು ಡಿಪಾರ್ಟ್‌ಮೆಂಟ್ ಸ್ಟೋರ್.

ಬಿ. ಎಸ್. ಪರಮಶಿವಯ್ಯ, ಎಂ.ಎ.
ಅಧ್ಯಕ್ಷರು

ಎಸ್. ಎಂ. ಷಣ್ಮುಖಾಚಾರ್ಯ, ಬಿ.ಎ.
ಪ್ರಧಾನ ವ್ಯವಸ್ಥಾಪಕರು

ಸಿದ್ಧಗಂಗಾ

ಸಂಪುಟ-೨೨ ಸಂಚಿಕೆ-೯ ಜೂನ್ ೧೯೮೬

ಶ್ರೀ ಸಿದ್ಧಗಂಗಾ ಗುರುಕರಣ ತ್ರಿವಿಧಿ

ವೀರಶೈವ ಧರ್ಮ ವಿಶ್ವಕ್ಕೆ ಮಾದರಿ
ಅರಿತು ಆಚರಿಸು ನೀನದನು ! ಎಂದ
ಸಿದ್ಧಗಂಗಾ ಗುರುವೇ ಕೃಪೆಯಾಗು ॥

* * *

ಆಗಸದಗಲಕ್ಕೆ ಹಬ್ಬಿಹುದು ನಿನ್ನರೂಪ
ಭೂಮಿಯಗಲಕ್ಕೆ ನಿನ್ನ ಭಾವ ಬೆಳೆದಿಹುದು । ನನ್ನ ತಂದೆ
ಸಿದ್ಧಗಂಗಾ ಗುರುವೆ ಕೃಪೆಯಾಗು ॥

* * *

ನಿತ್ಯ ದಾಸೋಹ ನಡೆದಲ್ಲಿ ನಡೆಸಿರುವೆ
ಸತ್ಯ ಶರಣರ ಪಥಕೆ ಜಗವನ್ನು । ಹಚ್ಚಿರುವೆ
ಸಿದ್ಧಗಂಗಾ ಗುರುವೆ ಕೃಪೆಯಾಗು

—ಹೆಚ್. ವಿ. ವೀರಭದ್ರಯ್ಯ

ಸಿದ್ಧಗಂಗಾಂತರಂಗ

ಲೇಖನದ ಹೆಸರು	ಲೇಖಕರ ಹೆಸರು	ಪುಟ
* ಶ್ರೀವಾಣಿ		5
* ಸಂಪಾದಕೀಯ		7
* ಮಾಣಿಕ್ಯ ದೀಪ್ತಿ	—ಟಿ. ಆರ್. ಮಹದೇವಯ್ಯ	9
* ಬಸವ ಪ್ರತಿಜ್ಞಾ	—ಟಿ. ಎಸ್. ಮಹದೇವಯ್ಯ	11
* ವಿಜ್ಞಾನ ಮತ್ತು ಆತ್ಮಜ್ಞಾನ	—ಮೋಟಗಿ ಮಲ್ಲಿಕಾರ್ಜುನ	13
* ಕೋಳೂರ ಕೊಡಗೂಸು	—ಎಂ. ಎಸ್. ಆರಾಧ್ಯ	15
* ವೃದ್ಧಾಪ್ಯದ ಕಾಯಿಲೆಗಳು	—ಡಾ|| ಹೆಚ್. ಡಿ. ಚಂದ್ರಪ್ಪಗೌಡ	27
* ಶುಂಠಿ : ಪ್ರಾಚೀನ ಸಂಬಾರ	—ಪ. ರಾಮಕೃಷ್ಣ ಶಾಸ್ತ್ರಿ	31
* ದೇವತೆಗಳ ಆಗಮನ	—ಮೋಟಗಿ ಮಲ್ಲಿಕಾರ್ಜುನ	34
* ಶ್ರೀಮೂರ್ತಿಗಳ ಆಳಿಕೆ ವೀರಭದ್ರೇಶ್ವರನ ಅವತಾರ	—ಕನ್ನಡ ಕವಿ ಕಾಳಿದಾಸ	35
* ಭುವಿಗಿಳಿದ ಶಿವತಾನು : ಇವರಿಗೊಲಿದು	—ಹೆಚ್. ಜಿ. ರಾಧಾದೇವಿ	37
* ಷಡಕ್ಷರಿಯ ರಾಜಶೇಖರ ವಿಳಾಸ	—ಡಾ|| ಎಲ್. ಆರ್. ಹೆಗಡೆ	39
* ಗ್ರಾಮಾಂತರ ಬಸವಜಯಂತಿ	—ಹೆಚ್. ವಿ. ವೀರಭದ್ರಯ್ಯ	47
* ತಳಿರು–ತೋರಣ ಧಾರವಾಹಿ–9	—ಎನ್. ಎಸ್. ಗದಗಕರ	49

ಶ್ರೀವಾಣಿ

ಧರ್ಮದ ತಳಹದಿಯ ಮೇಲೆ ಕಟ್ಟಲ್ಪಡುವ ನಾಗರೀಕತೆ ಸುಸಂಸ್ಕೃತವಾದದ್ದು. ನಮ್ಮ ಸಮಸ್ತ ಕ್ರಿಯಾಮುಖದಲ್ಲೂ ಧರ್ಮಬುದ್ಧಿ ಬರದಿದ್ದರೆ ನಾವು ಎಷ್ಟೇ ನಾಗರಿಕರೆನಿಸಿದರೂ ಸುಸಂಸ್ಕೃತರೆನಿಸಲಾರೆವು. ನಮಗೆ ಗಳಿಕೆ ಬಳಕೆಗಳೆರಡರ ಅರ್ಥವು ಆಗಬೇಕು. ಸಂಪಾದಿಸುವುದನ್ನೆಲ್ಲ ಧರ್ಮಬುದ್ಧಿಯಿಂದಲೇ ಅರಿತ ಬಳಕೆ ಮಾಡಬೇಕು. ಇದನ್ನು ಶರಣರು "ದಾಸೋಹಂಭಾವ" ವೆಂದು ಕರೆದಿದ್ದಾರೆ. ಪಾಪದಿಂದ ಗಳಿಸಿದ ಅರ್ಥ ಪ್ರಾಯಶ್ಚಿತ್ತಕ್ಕೆ ವ್ಯಯವಾಗುತ್ತದೆಂಬುದರ ಅರಿವು ಎಲ್ಲರಿಗೂ ಮೂಡಿ ಬರಬೇಕು. ಪಾಪಬುದ್ಧಿಯಿಂದ ಏನನ್ನೂ ಸಂಗ್ರಹಿಸಬಾರದು. ಇಂದು ಯಾಂತ್ರಿಕ ಯುಗದ ಪರಿಣಾಮವಾಗಿ ಜನತೆಯಲ್ಲಿ ಪಾಪಭೀತಿ ಮಾಯವಾಗುತ್ತಿದೆ. ಶ್ರೀಮಂತರು, ಬುದ್ಧಿವಂತರು, ಶ್ರೀಮಂತರಾಗಿಯೇ ನಡೆದಿದ್ದಾರೆ. ಅವರಿಗೆ ಸಂಗ್ರಹಬುದ್ಧಿ ಮಮಕರಿಸಿ ಮುನ್ನಡೆದಿದೆ. ಆದ್ದರಿಂದ ಬಡವರೂ ಬುದ್ಧಿಹೀನರೂ ಮತ್ತಷ್ಟು ಬಡವರಾಗುತ್ತಿದ್ದಾರೆ. ಹೀಗೆ ಅರ್ಥವ್ಯವಸ್ಥೆ ಹದಗೆಟ್ಟಾಗಲೇ ಸಮಾಜ ಜೀವನದಲ್ಲಿ ಭಾರಿ ಪ್ರಮಾಣದ ಏರುಪೇರುಗಳುಂಟಾಗಿ ಜನತೆಯಲ್ಲಿ ದ್ವೇಷಾಸೂಯೆಗಳು ಅಧಿಕಗೊಂಡು ಒಂದು ದಿನ ಮಹಾ ಕ್ರಾಂತಿಗೂ ಕಾರಣವಾಗುತ್ತದೆ. ಹೀಗಾಗದಂತೆ ಸ್ವತಂತ್ರಭಾರತದಲ್ಲಿ ಆಡಳಿತ ವ್ಯವಸ್ಥೆಯುಂಟಾಗಿ ಸಕಲ ಜೀವಾತ್ಮರಿಗೆ ಲೇಸಾಗುವ ಮಧ್ಯಮ ಮಾರ್ಗ ಕಂಡು ಹಿಡಿಯಲೇ ಬೇಕು. ಬಹುಜನಗಳ ಜೀವನಕ್ಕೆ ಅನೂಕುಲವಾಗುವ ಅರ್ಥ (ಸಂಪತ್ತು) ಕೆಲವೇ ಜನಗಳಲ್ಲಿ ಸಂಗ್ರಹವಾದಾಗ, ಹಸಿದವರು ಬರಬರುತ್ತ ಹೆಬ್ಬುಲಿಗಳಾಗುತ್ತಾರೆ. ಇದನ್ನೆ ಮಹಾಕ್ರಾಂತಿಯೆಂದು ಹೇಳಿದ್ದು. ಹೀಗಾಗದಂತ ಬುದ್ಧಿ ಜೀವಿಗಳು ಜಾಗ್ರತೆವಹಿಸಬೇಕು.

ಸ್ವಾತಂತ್ರ್ಯದ ಮೂವತ್ತೊಂಬತ್ತುವರ್ಷಗಳ ಅವಧಿಯ ಭಾರತೀಯರು. ಜೀವನ ವಿಚಿತ್ರ ರೀತಿಯಲ್ಲಿ ಹೊರಟಂತೆ ಭಾಸವಾಗುತ್ತಿದೆ. ನಮ್ಮ ಪೂರ್ವ ಜನರ ಮನೋಭಾವಕ್ಕೆ ವಿರುದ್ಧವಾದ ಮನೋಭಾವ ಹೊಂದಿ ನಡೆಯುವಂತೆ ತೋರುತ್ತಿದೆ. ತಾನೂ ಸುಖಪಟ್ಟು ಇತರರೂ ಸುಖಪಡುವಂತೆ ವಿಧಾಯಾತ್ಮಕವಾಗಿ ಬಾಳುವಬಾಳು, ಬಡವರೂ, ದರಿದ್ರರೂ, ಬುದ್ಧಿಹೀನರೂ ಆಗಿರುವ ಇಂದಿನ ಭಾರತೀಯರಿಗೆ ಅವಶ್ಯಕ. ತಾನೊಬ್ಬ ಬದುಕಿದರಾಯಿತು; ಇನ್ನೊಬ್ಬರ ಗೊಡವೆ ಕಟ್ಟಿಕೊಂಡೇನು? ಎಂಬ ವಿನಾಶಾತ್ಮಕವಾದ ನಡೆನುಡಿಗಳನ್ನು ಧರ್ಮ ಒಪ್ಪುವುದಿಲ್ಲ. ಧರ್ಮವೆಂದರೆ ಯಾರೋ ಕೆಲವರು ಆಚರಿಸುವ ದೇವತಾಪೂಜೆ ಪುರಸ್ಕಾರಗಳಷ್ಟೇ ಅಲ್ಲ. ಜಗತ್ತಿನ ಯಥಾರ್ಥ ಜ್ಞಾನ ಪಡೆದು ಸತ್ಯಶುದ್ಧವಾಗಿ ಬಾಳುವ ಬಾಳೇ ಧರ್ಮವೆನಿಸುವುದು. ಮನುಷ್ಯನ ಬಾಳು ಒಂದು ಪರಿಮಿತ ಕಾಲಾವಧಿಯುಳ್ಳದ್ದು. ಆ ಅವಧಿಯಲ್ಲಿ ನಾನು ಎಲ್ಲಿಂದ ಬಂದೆ? ಈಗ ಎಲ್ಲಿದ್ದೇನೆ? ಮುಂದೆ ಹೋಗುವುದೆಲ್ಲಿಗೆ? ಎಂಬ ಮೂರು ಪ್ರಶ್ನೆಗಳಿಗೆ ಉತ್ತರ ಹುಡುಕುವುದು. ಈ ಮೂರು ಪ್ರಶ್ನೆಗಳಿಗೆ ಧರ್ಮ ನಿಮಗೆ ಉತ್ತರ ಕೊಡುತ್ತದೆ. ಧರ್ಮದ ಆ ಯಥಾರ್ಥ ಜ್ಞಾನದಲ್ಲಿ ಬಾಳುಸಾಗಿದಾಗಲೇ ಜೀವನ ಪರಿಪೂರ್ಣವೆನಿಸುತ್ತದೆ. ಇಲ್ಲದ್ದಿದರೆ ಜೀವನ ಬರಡು. ●

"ಸಿದ್ಧಗಂಗಾ" ಮಾಸ ಪತ್ರಿಕೆ

ಶ್ರೀ ಸಿದ್ಧಗಂಗಾ ಮಠ-572104

ತುಮಕೂರು ಜಿಲ್ಲೆ.

ಪ್ರಧಾನ ಸಂಪಾದಕರು

ಪಂ॥ ಚನ್ನಪ್ಪ ಎರೇಸೀಮೆ

ಸಂಪಾದಕರು

ಹೆಚ್. ವಿ. ವೀರಭದ್ರಯ್ಯ

* * *

ಸಹ ಸಂಪಾದಕರು

ಟಿ. ಎನ್. ಚಂದ್ರಶೇಖರಯ್ಯ

ಬಸವರಾಜು

* * *

ಜಾಹೀರಾತು ವಿಭಾಗ

ಎಂ. ರೇಣುಕಾರಾಧ್ಯ

* * *

ಪ್ರಸಾರ ವಿಭಾಗ

ಆರ್. ಎಸ್. ಮಲ್ಲೇಶಪ್ಪ

* * *

ಪ್ರಕಾಶಕರು

ಹೆಚ್.ಬಿ. ಗಂಗಾಧರಯ್ಯ

ಹಳೆಯ ವಿದ್ಯಾರ್ಥಿ ಸಂಘದ ಪರವಾಗಿ

* * *

ಮುದ್ರಕರು

ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿ

ಮುದ್ರಣಾಲಯ

* * *

ಪ್ರಕಟಣೆಯ ಸ್ಥಳ

ಶ್ರೀ ಸಿದ್ಧಗಂಗಾ ಕ್ಷೇತ್ರ

ಚಂದಾ ವಿವರ

ವಾರ್ಷಿಕ ಚಂದಾ 20-00 ರೂ

ಅಜೀವ ಸದಸ್ಯತ್ವ 201-00 ರೂ

ಲೇಖಕರಲ್ಲಿ ಮನವಿ

'ಸಿದ್ಧಗಂಗಾ' ನಾಡಿನ ಜನತೆಗೆ ಜ್ಞಾನ ದಾಸೋಹ ವಿತರಣೆಯ ಕೆಲಸದಲ್ಲಿ ತೊಡಗಿರುವ ಪ್ರಸಿದ್ಧ ಮಾಸಪತ್ರಿಕೆಯಾಗಿದೆ. ಈ ಉದ್ದೇಶ ಸಾಧನೆಗಾಗಿ ನಾಡಿನ ಗಣ್ಯ ಲೇಖಕರಿಂದ ಸಾಹಿತ್ಯ, ಸಂಸ್ಕೃತಿ, ಕಥೆ, ಕವನ, ಕಲೆ, ವಿಜ್ಞಾನ, ಶಿಕ್ಷಣ, ರಾಜನೀತಿ, ಧರ್ಮ, ದರ್ಶನ, ಇತಿಹಾಸ ವೈಚಾರಿಕ, ಚಿಂತನ, ನಗೆಬರೆಹ, ಹರಟೆ ಮುಂತಾದ ಲೇಖನಗಳನ್ನು ಸದಾ ಸ್ವಾಗತಿಸುತ್ತದೆ. ಲೇಖನಗಳು ಫುಲ್ ಸ್ಕೇಪ್ ಸೈಜಿನ ಕಾಗದದ ಒಂದೇ ಮಗ್ಗುಲಲ್ಲಿ ಸ್ಪಷ್ಟವಾಗಿ ಬರೆದಿರಬೇಕು. ಅಸ್ವೀಕೃತ ಲೇಖನಗಳನ್ನು ಪಡೆಯಲು ಸಾಕಷ್ಟು ಅಂಚೆಚೀಟಿಯನ್ನು ಲಗತ್ತಿಸಿರಬೇಕು. ಲೇಖನಗಳು ಆಕಸ್ಮಾತ್ ಕಳೆದು ಹೋದರೆ ಸಂಪಾದಕರು ಹೊಣೆಗಾರರಲ್ಲ. ಲೇಖನಗಳಲ್ಲಿ ಸೂಕ್ತ ಬದಲಾವಣೆ ಮಾಡಿಕೊಳ್ಳುವ ಅಧಿಕಾರ ಸಂಪಾದಕರಿಗಿದೆ. ಈ ಬಗ್ಗೆ ಪತ್ರವ್ಯವಹಾರಕ್ಕೆ ಅವಕಾಶವಿಲ್ಲ. ಅನುವಾದ, ರೂಪಾಂತರ ಲೇಖನಗಳಿಗೆ ಮೂಲ ಕೃತಿಕಾರರ ಅನುಮತಿ ಪಡೆದಿರಬೇಕು. ಸ್ವೀಕೃತ ಲೇಖನದ ಪ್ರಕಟಣೆಗೆ 'ಸಿದ್ಧಗಂಗಾ' ಆಗಿಂದಾಗ್ಗೆ ಒದಗಿ ಬರಬಹುದಾದ ಸಂಭಾವನೆಯನ್ನು ಕಳುಹಿಸಿಕೊಡಲಾಗುವುದು. ಸ್ಥಿರ ಶೀರ್ಷಿಕೆ ಪಡೆಯಲಿಚ್ಛಿಸುವ ಬರಹಗಾರರಿಗೆ ಆದ್ಯತೆ ಕೊಡಲಾಗುವುದು.

"ಸಂಪಾದಕರು"

'ಸಿದ್ಧಗಂಗಾ' ಕನ್ನಡ ಮಾಸ ಪತ್ರಿಕೆ

ಶ್ರೀ ಸಿದ್ಧಗಂಗಾ ಕ್ಷೇತ್ರ-572104

ತುಮಕೂರು ಜಿಲ್ಲೆ.

ಇವರಿಗೆ ಕಳಿಸಿಕೊಡಬೇಕಾಗಿ ಪ್ರಾರ್ಥನೆ.

ಸಂಪಾದಕೀಯ

ಶಾಲಾ ಕಾಲೇಜುಗಳ ಆರಂಭ, ಪ್ರವೇಶಕ್ಕಾಗಿ ವಿದ್ಯಾರ್ಥಿಗಳ ಪರದಾಟ. ಪೋಷಕರ ಪಾಲಿಗೆ ಸಂತೋಷ, ಸಂಕಟ, ಷೇಜು ಪೀಕಬೇಕಾದ "ಫೀಜು" ಬೆನ್ನು ಮೂಳೆ ಮುರಿಯುವಷ್ಟು. ಪೂರ್ವ ಪ್ರಾಥಮಿಕ ಶಾಲೆಗೆ ಮಗುವನ್ನು ಸೇರಿಸಲು ತಕ್ಕಬೇಕಾದ ಹಣ ಐದುಸಾವಿರದವರೆಗೆ. ಅಲ್ಲಿಗೂ ಪ್ರವೇಶ ಸಿಕ್ಕಿತೆಂಬ ಭರವಸೆ ಸಾಲದು. ಮೇಲಾಗಿ "ಶಿಫಾರಸು"ಗಳ ಬೆಂಬಲ. ಕೆಲವು ಶಾಲೆ ಕಾಲೇಜುಗಳಂತೂ ಪ್ರತಿಷ್ಠಿತರಿಗೆ, ಶ್ರೀಮಂತರಿಗೆ ಮಾತ್ರ ಮೀಸಲು. ತಮ್ಮದು ಪ್ರತಿಭಾವಂತರಿಗೆ ಮಾತ್ರ ಮೀಸಲು ಎಂಬ ಧೋರಣೆ. ಪೂರ್ವ ಪ್ರಾಥಮಿಕ ಶಾಲೆಗೆ ಮಗುವಿಗೆ ಪ್ರವೇಶಾವಕಾಶ ನೀಡುವಾಗ ತಂದೆ ತಾಯಿಗಳ ವಿದ್ಯಾರ್ಹತೆಯ ಪ್ರಶ್ನೆ. ಹಳ್ಳಿಗಾಡಿನ ಮಕ್ಕಳಿಗೆ ಪಠ್ಯ ಪುಸ್ತಕಗಳ ಸೌಲಭ್ಯದ ಅಭಾವ. ಸರ್ಕಾರದ ಉಚಿತ ಪಠ್ಯಪುಸ್ತಕ ವಿತರಣೆ ಯೋಜನೆ. ಮಂದಗತಿ ಇಷ್ಟಾಗಿಯೂ ನಾಡಿನ, ರಾಷ್ಟ್ರದ ಬದುಕಿಗೆ ಅನುಗುಣವಾದ ಶಿಕ್ಷಣ ಇನ್ನೂ ಅಲಭ್ಯ. ಬಡಮಕ್ಕಳ ಶಿಕ್ಷಣಕ್ಕಾಗಿ ಕೋಟಿ ಕೋಟಿ ರೂಪಾಯಿಗಳು ನೇರವಾಗಿ ಬಳಕೆಯಾಗುತ್ತಿರುವುದು ಅಲ್ಪ. ಸೇವಾ ಸಂಸ್ಥೆಗಳು ನಿರಂತರ ಕಾರ್ಯನಿರತವಾದುವೆಷ್ಟು? ಅವುಗಳಲ್ಲಿ ಸಾಚ, ಖೋಟಾಗಳೆಷ್ಟು? ಅನಕ್ಷರತೆಯ ವಿರುದ್ಧ ನಡೆಸಿರುವ ಈ ಸಮರ ಪೂರ್ಣ ಪರಿಶುದ್ಧವಾಗಿದೆಯೆ? ಸಾಕ್ಷರತೆ ಮತ್ತು ಸರ್ಟಿಫಿಕೇಟ್‌ಗಳಿಂದ ಯುವ ಜನಾಂಗದ ಜೀವನ ಅರಳುತ್ತಿದೆಯೆ? ಅಪಮೌಲ್ಯಗಳ ಅಟ್ಟಹಾಸವೇ ನಡೆದಿಲ್ಲವೆ? ಪದವಿ, ಪ್ರಶಸ್ತಿಗಳಿಗಿಂದು ಇರುವ ಬೆಲೆಯಾದರೂ ಎಷ್ಟು? ಮೂಲಭೂತವಾದ ಮಾನವೀಯ ಮೌಲ್ಯಗಳ ಕಡೆ ಯುವ ಜನಾಂಗವನ್ನು ಇಂದಿನ ಶಿಕ್ಷಣ ಪದ್ಧತಿ ಕರೆದೊಯ್ಯುತ್ತಿದೆಯೆ? ಕಲಿತವರಿಂದ ಆಗುತ್ತಿರುವ ಅನ್ಯಾಯ, ಅನೈತಿಕ ಕೃತ್ಯಗಳು, ಕಾಣದವುಗಳಲ್ಲವಲ್ಲವೆ? ನಾವು ರೊಕ್ಕತೆತ್ತು ಮಕ್ಕಳನ್ನು ಏನು ಮಾಡುತ್ತಿದ್ದೇವೆ? ಗಂಭೀರವಾಗಿ ಆಲೋಚಿಸಬೇಕು. ನಾಳೆ ಈ ರಾಷ್ಟ್ರದ ಬದುಕು ಅರಳುವಂತಾಗಬೇಕು. ಶಿಕ್ಷಣ–ಸುಸಂಸ್ಕೃತರನ್ನು ರೂಪಿಸುವ ಶಿಕ್ಷಣ ರಾಷ್ಟ್ರದ ತಾಯಿಬೇರು.

ಮಾಣಿಕ್ಯ ದೀಪ್ತಿ

—ಹೆಚ್ . ಎಸ್. ಸಿದ್ದಗಂಗಪ್ಪ, ಎಂ.ಎ..
ಸಾಮಾಜಿಕ ಕಾರ್ಯಕರ್ತ, ಮೆಗ್ಗಾನ್ ಆಸ್ಪತ್ರೆ. ಶಿವಮೊಗ್ಗ-577201

ಆತ್ಮಹತ್ಯೆ

* ವಿದ್ಯಾರ್ಥಿಯೊಬ್ಬ ಪಿ.ಯು.ಸಿ. ಪರೀಕ್ಷೆಯಲ್ಲಿ ಅನುತ್ತೀರ್ಣನಾದುದಕ್ಕೆ ಕಳೆದ ಶನಿವಾರ ಮನೆಯಲ್ಲಿಯೇ ನೇಣು ಹಾಕಿಕೊಂಡು ಸಾವನ್ನಪ್ಪಿದ.
* ಬಾವಿಗೆ ಹಾರಿ ದಂಪತಿಗಳ ಆತ್ಮಹತ್ಯೆ–ಜೀವನದಲ್ಲಿ ಜಿಗುಪ್ಸೆಯೇ ಈ ಆತ್ಮಹತ್ಯೆಗೆ ಕಾರಣ.
* ಬೆಂಕಿ ಹಚ್ಚಿಕೊಂಡು ಮೂರು ಜನ ಮಕ್ಕಳೊಂದಿಗೆ ತಾಯಿಯ ಆತ್ಮಹತ್ಯೆ.
* ವಿಷ ಸೇವಿಸಿ ಭಗ್ನ ಪ್ರೇಮಿಗಳ ಆತ್ಮಹತ್ಯೆ.

ಇವು ದಿನನಿತ್ಯ ಪತ್ರಿಕೆಗಳಲ್ಲಿ ಆತ್ಮಹತ್ಯೆಗೆ ಸಂಬಂಧಿಸಿದಂತೆ ಪ್ರಕಟವಾಗುವ ವರದಿಗಳ ಕೆಲವು ತುಣುಕುಗಳು.

ವ್ಯಕ್ತಿಗೆ ದಿನನಿತ್ಯದ ಬದುಕಿನಲ್ಲಿ ಅನೇಕ ಸಮಸ್ಯೆಗಳು ತಲೆದೋರುತ್ತವೆ. ಅವು ಆರ್ಥಿಕ ಸಮಸ್ಯೆಯಾಗಿರಬಹುದು, ಪ್ರೇಮ ಕಾಮ. ದಾಂಪತ್ಯಕ್ಕೆ ಸಂಬಂಧಿಸಿದ ಸಮಸ್ಯೆಯಾಗಿರಬಹುದು. ದೈಹಿಕ, ಸಾಂಸಾರಿಕ, ಸಾಮಾಜಿಕ, ವ್ಯಾವಹಾರಿಕ, ನಿರುದ್ಯೋಗ ಇತ್ಯಾದಿ ಸಮಸ್ಯೆಯಾಗಿರಬಹುದು. ಈ ಸಮಸ್ಯೆಗಳ ಸುಳಿಗೆ ಸಿಕ್ಕಿದ ವ್ಯಕ್ತಿ. ಇವುಗಳಿಂದ ಶಾಶ್ವತವಾಗಿ ಬಿಡುಗಡೆ ಹೊಂದಲು ಆತ್ಮಹತ್ಯೆಗೆ ಶರಣಾಗುತ್ತಾನೆ. ದಿನನಿತ್ಯ ತಲೆದೋರಬಹುದಾದ ಈ ಸಮಸ್ಯೆಗಳಿಗೆಲ್ಲ ಆತ್ಮಹತ್ಯೆ ಏಕೈಕ ಪರಿಹಾರವೆ?

ನೆಗಡಿ ಆಯಿತೆಂದು ಯಾರೂ ಮೂಗನ್ನೇ ಕೊಯ್ದುಕೊಳ್ಳುವ ಸಾಹಸಕ್ಕೆ ಅಥವಾ ಮೂರ್ಖತನ ತೋರುವುದಿಲ್ಲ. ನೆಗಡಿಗೆ ತಕ್ಕ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಅದರಂತೆ ಜೀವನದಲ್ಲಿ ಬರುವ ಸಮಸ್ಯೆಗಳನ್ನು ತಾಳ್ಮೆಯಿಂದ ವಿವೇಚಿಸಿ ಬಗೆಹರಿಸಿಕೊಳ್ಳಲು ಪ್ರಯತ್ನಿಸಬೇಕು. ಯಾರೊ ಒಬ್ಬ ಮೂಗಿನ ಮೇಲೆ ಕುಳಿತ ನೊಣವನ್ನು ಕೊಲ್ಲಬೇಕೆಂದು ಒನಕೆಯಿಂದ ಬಡಿದನಂತೆ. ನೊಣ ಸತ್ತಿತೋ ಇಲ್ಲವೊ, ಮೂಗು ಮಾತ್ರ ಜಜ್ಜಿ ಹೋಯಿತು. ಆತ್ಮಹತ್ಯೆ ಮಾಡಿಕೊಳ್ಳುವುದರಿಂದ ಪರಿಣಾಮ ಜೀವ ಹೋಗುತ್ತದೆ, ಸಮಸ್ಯೆ ಹಾಗೆ ಉಳಿಯುತ್ತದೆ.

ಕೆಲವರಿಗೆ ಸಾಂಸಾರಿಕ ತೊಂದರೆ ಕಾಣಿಸಿಕೊಂಡರೆ ಸಾಕು, ಜೀವನ ಅವರಿಗೆ ಬೇಸರವಾಗಿ ಅಸಹನೀಯವಾಗುತ್ತದೆ. ಆಗ ಅವರು ತೊಂದರೆಗಳನ್ನು ನಿವಾರಣೆ ಮಾಡಿಕೊಳ್ಳುವ ಬದಲು ಮರಣವನ್ನು ಅಪ್ಪಿಕೊಳ್ಳಲು ಬಯಸುತ್ತಾರೆ. ನಿರಂತರ

ವಾಗಿ ಕಷ್ಟವನ್ನು ಅನುಭವಿಸುವುದಕ್ಕಿಂತ ಕ್ಷಣ ಕಾಲ ನೋವನ್ನು ಅನುಭವಿಸಿ ಚಿರಂತನ ಶಾಂತಿಯನ್ನು, ನೆಮ್ಮದಿಯನ್ನು ಪಡೆಯಲು ಸಾವೇ ಉತ್ತಮ ಪರಿಹಾರ ಎಂದು ಭಾವಿಸಿ ಜೀವನದ ಅಂತಿಮ ಯಾತ್ರೆಗೆ ತಮ್ಮನ್ನು ತಾವೇ ತೊಡಗಿಸಿಕೊಳ್ಳುತ್ತಾರೆ. ಅನೇಕ ಜನ ಯಾವುದೋ ಸಂದರ್ಭದಲ್ಲಿ ಉಂಟಾದ ದುರ್ಬಲ ಮನಸ್ಸನ್ನು ನಿಯಂತ್ರಿಸಿಕೊಳ್ಳಲು ಸಾಧ್ಯವಾಗದೆ ಬಾವಿಗೆ ಹಾರಿಯೋ, ವಿಷ ಸೇವಿಸಿಯೋ, ಮೈ ಮೇಲೆ ಸೀಮೆಎಣ್ಣೆ ಸುರಿದುಕೊಂಡು ಬೆಂಕಿ ಹಚ್ಚಿಕೊಂಡು, ನಂತರ ಮನಸ್ಸನ್ನು ಬದಲಾಯಿಸಿ ಬದುಕಲು ಪ್ರಯತ್ನಿಸುತ್ತಾರೆ. ದುಡುಕಿ ಮಾಡಿದ ತಪ್ಪಿಗಾಗಿ ಪರಿತಪಿಸುತ್ತಾರೆ. ಕೋಪದಲ್ಲಿ ಕೊಯ್ದ ಮೂಗು ಶಾಂತವಾದ ಮೇಲೆ ಮೊದಲಿನ ಸ್ಥಿತಿಗೆ ಬರುವುದೆ? ಆತ್ಮಹತ್ಯೆಗೆ ಈಡಾದ ಬಳಿಕ ತಪ್ಪು ಒಪ್ಪಿಕೊಂಡರೂ ಪ್ರಯೋಜನವಿಲ್ಲ.

ಅನಿರೀಕ್ಷಿತವಾಗಿ ಬಂದ ಕಷ್ಟಕ್ಕೆ ಅಂಜಿ ಆತ್ಮಹತ್ಯೆ ಮಾಡಿಕೊಳ್ಳುವುದು, ತತ್ಕಾಲಕ್ಕೆ ಸುರಕ್ಷಿತವಾದ ಮಾರ್ಗವೆನಿಸಿದರೂ, ನಿಜವಾಗಿ ಅವರಿಗೆ ಸುರಕ್ಷಿತತೆ ದೊರೆಯಲಾರದು. ‘ಈ ದಾರಿಯಿಂದ ಹೋದರೆ ಸುಂಕದ ಕಟ್ಟೆಯವನಿಗೆ ಸುಂಕದ ಹಣ ಕೊಡಬೇಕಾಗುವುದೆಂದು ಸಂಜೆಗೆ ದಾರಿ ಬದಲಿಸಿ ಸುತ್ತುವರಿದು ರಾತ್ರಿಯೆಲ್ಲಾ ಗಾಡಿ ಹೊಡೆದರೂ ಬೆಳಗಾಗುವ ಹೊತ್ತಿಗೆ ಸುಂಕದ ಕಟ್ಟೆಯ ಮುಂದೆ ಬಂದು ನಿಂತಿತಂತೆ ಗಾಡಿ. ಸುಂಕ ಕೊಡುವುದು ತಪ್ಪಲಿಲ್ಲ, ಬೆಳಗಾಗುವ ತನಕ ಬಳಸು ದಾರಿ ಸುತ್ತುವುದೂ ತಪ್ಪಲಿಲ್ಲ. ಸುಂಕ ತಪ್ಪಿಸಿಕೊಳ್ಳುವುದೆಂದರೆ ನಿಯಮವನ್ನು ಮುರಿದಂತೆ. ಅಂತೆಯೆ ನಿಸರ್ಗದ ನಿಯಮವನ್ನು ಮುರಿದು ಆತ್ಮಹತ್ಯೆ ಮಾಡಿಕೊಳ್ಳುವುದರಿಂದ ನಿಸರ್ಗ ಎಂದೂ ಕ್ಷಮಿಸಲಾರದು.’

ಆತ್ಮಹತ್ಯೆ ಮಾಡಿಕೊಳ್ಳುವವರಲ್ಲಿ ಮಹಿಳೆಯರದೆ ಸಿಂಹ ಪಾಲು. ಕೇವಲ ಕ್ಷುಲ್ಲಕ ಕಾರಣಗಳಿಗೂ ಆತ್ಮಹತ್ಯೆ ಮಾಡಿಕೊಳ್ಳಲು ಮುಂದಾಗುತ್ತಾರೆ. ಜೊತೆಗೆ ಜೀವನದಲ್ಲಿ ಹೊಂಗನಸನ್ನು ಕಾಣುತ್ತಾ ಜೀವನೋತ್ಸಾಹದಿಂದಿರುವ ಯುವಕ ಯುವತಿಯರ ಕನಸು ಕನಸಾಗಿಯೆ ಉಳಿದು ಆಶಾ ಜ್ಯೋತಿ ಕಮರಿ ಹೋದಾಗ ಜೀವನ ಅರ್ಥಹೀನವೆನಿಸಿ, ಈ ಅರ್ಥ ಹೀನ ಬದುಕಿಗಿಂತ ಸಾವೇ ಉತ್ತಮ ಎಂದು ಭಾವಿಸಿ ಆತ್ಮಹತ್ಯೆ ಮಾಡಿಕೊಳ್ಳುತ್ತಾರೆ.

‘ಕಷ್ಟ ಮನುಷ್ಯನಿಗಲ್ಲದೆ ಮರಕ್ಕೆ ಬರುತ್ತದೆಯೆ’ ಎಂಬುದು ಒಂದು ಜನಪ್ರಿಯ ಗಾದೆ. ಒಂದು ಕಲ್ಲು ಹತ್ತಾರು ಉಳಿ ಪೆಟ್ಟುಗಳನ್ನು ಸಹಿಸಿಕೊಂಡಾಗಲೇ ಎಲ್ಲರ ಮನಸ್ಸನ್ನು ಸೂರೆಗೊಳ್ಳುವ ಒಂದು ಸುಂದರ ಕಲಾತ್ಮಕ ಮೂರ್ತಿಯಾಗುವುದು. ಅದರಂತೆ ಮನುಷ್ಯ ದಿನನಿತ್ಯ ಬರುವ ಎಡರು ತೊಡರುಗಳನ್ನು ಬಿಡಿಸಿಕೊಳ್ಳುವ ಜಾಣ್ಮೆಯನ್ನು, ಕಷ್ಟ ಕಾರ್ಪಣ್ಯಗಳೊಡನೆ ಹೋರಾಡುವ ಶಕ್ತಿಯನ್ನು ಧೈರ್ಯವನ್ನು ರೂಢಿಸಿಕೊಂಡಾಗ ಮಾತ್ರ ಬದುಕಿಗೊಂದು ಅರ್ಥ ಬರುತ್ತದೆ, ಬೆಲೆ ಬರುತ್ತದೆ

(ಆಕಾಶವಾಣಿ ಕೃಪೆ)

ಪ್ರಕಟಣೆ

ಇವರ ಬಾಳಿಗೊಂದು ಕಣ್ಣು ಕೊಡಿ

ಅದಕ್ಕೊಂದು ಸುವರ್ಣಾವಕಾಶ

ಶ್ರೀ ಸಿದ್ಧಗಂಗಾ ಶ್ರೀ ಶ್ರೀಗಳವರು "ಶ್ರೀ ಸಿದ್ಧಗಂಗಾ ಅಂಧ ಮಕ್ಕಳ ಪಾಠಶಾಲೆ"ಯನ್ನು ನಡೆಸುತ್ತಿದ್ದಾರೆ.

ಪ್ರಾಥಮಿಕ ವಿದ್ಯಾಭ್ಯಾಸದ ಒಂದನೆ ತರಗತಿಯಿಂದ ಏಳನೆಯ ತರಗತಿಯವರೆಗೆ ಕಲಿಯಲವಕಾಶವಿದೆ. ಏಳರಿಂದ ಹನ್ನೆರಡು ವರ್ಷದೊಳಗಿನ ಅಂಧ ಮಕ್ಕಳನ್ನು ಸೇರಿಸಲು ಜುಲೈ 31ರ ಒಳಗಾಗಿ ಶ್ರೀ ಶ್ರೀಗಳವರನ್ನು ಸಂದರ್ಶಿಸಲು ವಿನಂತಿ. ಉಚಿತ ಊಟ-ವಸತಿ ಸೌಲಭ್ಯವಿದೆ.

ಪ್ರಕಟಣೆ

ವೀರಶೈವ ಸ್ವಾತಂತ್ರ್ಯ ಹೋರಾಟಗಾರರ ಬಗ್ಗೆ

ನಮ್ಮ ದೇಶದ ಇತಿಹಾಸದಲ್ಲಿ ಬಹು ಮುಖ್ಯವಾದ ಘಟನೆ ಸ್ವಾತಂತ್ರ್ಯ ಹೋರಾಟ ಆಗ ಭಾಷಾವಾರು ರಾಜ್ಯ ರಚನೆ, ಗಡಿ ಹೋರಾಟದ ಗೊಂದಲವಿಲ್ಲದೆ ಪರಕೀಯರ ಹಿಡಿತದಿಂದ ಬಿಡಿಸಿಕೊಳ್ಳುವುದು ನಮ್ಮ ಜನತೆಯ ಆದ್ಯ ಕರ್ತವ್ಯವಾಗಿತ್ತು. ಇಂದು ಸ್ವಾತಂತ್ರ್ಯ ವೀರರನ್ನು ಸ್ಮರಿಸುವದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಈ ಸನ್ನಿವೇಶದಲ್ಲಿ ದೂರದರ್ಶನ ಪಾತ್ರವು ಅಭಿನಂದನಾರ್ಹ. ನಮ್ಮ ರಾಜ್ಯಕ್ಕೆ ಆ ಅನುಕೂಲವಿಲ್ಲ ಈಗ ಇಂತಹ ಕೊರತೆಯನ್ನು ನಿವಾರಿಸುವ ಒಂದು ಸದವಕಾಶ ಒದಗಿ ಬಂದಿದೆ ಕರ್ನಾಟಕದ ಕನ್ನಡ ಭಾಷಿಕರಾದ ವೀರಶೈವ ಸ್ವಾತಂತ್ರ್ಯ ಹೋರಾಟಗಾರರ ಚರಿತ್ರೆಯನ್ನು ಶ್ರೀ ಜಗದ್ಗುರು ಮೂರು ಸಾವಿರಮಠ ಧರ್ಮಪ್ರಚಾರಕ ಮಂಡಳದ ವತಿಯಿಂದ ಪುಸ್ತಕ ರೂಪದಲ್ಲಿ ಪ್ರಕಟಿಸುವ ಧ್ಯೇಯವನ್ನಿಟ್ಟುಕೊಳ್ಳಲಾಗಿದೆ.

ಈ ಘಟ್ಟದಲ್ಲಿ ಕಂಡು ಕೇಳದ ಹಿರಿಯ ವೀರಶೈವ ಹೋರಾಟಗಾರರ ಹೆಸರುಗಳನ್ನು ಸಂಗ್ರಹಿಸುವ ಕಾರ್ಯ ಮೊದಲನೆಯದಾಗಿ ನಡೆಯಬೇಕಾಗಿದೆ. ಆದ್ದರಿಂದ ನಾಡಿನಾದ್ಯಂತ ಜನತೆಯ ಸಹಕಾರವನ್ನು ಕೋರುತ್ತೇವೆ. ತಾವು ತಿಳಿದ ವೀರಶೈವ ಹೋರಾಟಗಾರರ ಹೆಸರುಗಳನ್ನು ಕಾರ್ಯದರ್ಶಿ ಜಗದ್ಗುರು ಗಂಗಾಧರ ಧರ್ಮಪ್ರಚಾರಕ ಮಂಡಳ, ಮೂರುಸಾವಿರಮಠ. ಇವರಿಗೆ ಜುಲೈ 1986 ದಿನಾಂಕ 20 ರೊಳಗಾಗಿ ತಿಳಿಸಬೇಕಾಗಿ ಕೋರುತ್ತೇವೆ.

ಬಸವ ಪ್ರತಿಜ್ಞಾ

—ಟಿ. ಎಸ್. ಮಹದೇವಯ್ಯ

"ಜೋಳವಾಳಿಯವ ನಾನಲ್ಲವಯ್ಯ ವೇಳೆವಾಳಿಯವ ನಾನಲ್ಲವಯ್ಯ. ಹಾಳುಗೆಟ್ಟೊಡುವ ಆಳು ನಾನಲ್ಲವಯ್ಯ. ಕೇಳು ಕೂಡಲ ಸಂಗಮದೇವ ಮರಣವೇ ಮಹಾನವಮಿ"

ಪರಮಾತ್ಮನ ವಿಷಯದಲ್ಲಿ ನಿಕಟ ಪ್ರೇಮವುಳ್ಳ ಮಹಾಪುರುಷರುಗಳೆಲ್ಲರೂ ಧರ್ಮವನ್ನು ಮಾನಿಸಿ ತಮ್ಮ ಜೀವನವನ್ನು ತುಚ್ಛವಾಗೆಣಿಸಿ, ಧರ್ಮಕ್ಕಾಗಿ ನಗುನಗುತ ಭಯಂಕರ ಬೆಂಕಿಯ ಜ್ವಾಲೆಯನ್ನು ಅಪ್ಪುವರು. ಜೀವವು ಹಿರಿದಲ್ಲ ಧರ್ಮವುದೊಡ್ಡದು. ಅದರ ಮುಂದೆ ಮೊಳಕಾಲೂರಿ ತಲೆಬಾಗಿ ನಮಿಸಿ, ಅದರ ಒಡೆತನವನ್ನು ಸ್ವೀಕರಿಸುವರು. ಮಹೇಶ್ವರ ಸ್ಥಲದಲ್ಲಿ, ಅದು ಶ್ರದ್ಧಾ ಭಕ್ತಿಯು, ನಿಷ್ಠೆಯ ಪಾಕವನ್ನು ಹೊಂದಿದಾಗ, ತನುವಿನ ಅಭಿಮಾನವು ನಿಶ್ಶೇಷವಾಗಿ ಅಳಿದು ಹೋಗಿರುವಾಗ ಧರ್ಮದ ಬಗ್ಗೆ ಅವರ ಆದರವು ಸಹಜವಾಗಿ ಪರಮಾವಧಿಯನ್ನು ಹೊಂದಿರುತ್ತದೆ. ಅಂತಹ ಪರಿಸ್ಥಿತಿಯಲ್ಲೇ ಮರಣವು ಅವರಿಗೆ ಒಂದು ಪ್ರೀತಿಯ ಆಟವಾಗುತ್ತದೆ. ಎಲ್ಲ ಮಹಾಪುರುಷರ ಜೀವನದಲ್ಲೂ ಈ ಸತ್ಯನಿಷ್ಠೆ ಕಂಡು ಬರುತ್ತದೆ. ಅದಕ್ಕಾಗಿಯೇ ಮಹಾತ್ಮ ಗಾಂಧೀಜಿಯವರು ಎಷ್ಟು ಬಾರಿ ಸತ್ಯದ ಉದ್ಧಾರಕ್ಕಾಗಿ ತಮ್ಮ ಜೀವನವನ್ನೇ ಬಲಿಕೊಡಲು ಸಿದ್ಧರಾಗಿದ್ದರು. ಅದೇ ಜೀವನದ ಶ್ರೇಷ್ಠತೆಯು. ಸಾಧು ಅಗಷ್ಟಿನನ ಈ ನುಡಿಗಳನ್ನು ನೋಡಿರಿ "ತನ್ನ ಜೀವನದಲ್ಲಿ ಮಹತ್ತಾದ, ಶ್ರೇಷ್ಠಕಾರ್ಯಗಳಿಗೆ ಅರ್ಪಿಸುವ ಮತ್ತು ತನ್ನ ತಿಳುವಳಿಕೆಯ ಉಪಾಯಗಳನ್ನು ಸ್ವಂತ ಬುದ್ಧಿಯಿಂದ ರಚಿಸುವನು ಶ್ರೇಷ್ಠನಿರುತ್ತಾನೆ". ಮಹಾಪುರುಷರೆಲ್ಲರೂ ಮೃತ್ಯುವನ್ನು ದೇವರೆಂದು ಆರಾಧಿಸಿ ಅದರ ದರ್ಶನಕ್ಕೆ ಹಾತೊರೆಯುತ್ತ ಇರುವರು. ದುಃಖಗಳ ಒಡಲಿನಲ್ಲಿ ನಗುತ್ತ ನರ್ತಿಸುವರು, ಆನಂದಪಡುವರು. ಸ್ವಾಮಿ ವಿವೇಕಾನಂದರು ಒಮ್ಮೆ "ದುಗುಡದೊಳಗೆ ನಲ್ಮೆ ತೋರುವ ಶೂರನನು, ವಿಲಯಕಾಲದ ನಾಟ್ಯದೊಡನೆ ನರ್ತಿಸುವವನು, ಮೃತ್ಯುರೂಪವನಪ್ಪುವ ನಾವನಹನೆ ಅವನ ಬಳಿ ಸೇರಿ ಬರುವಳು ಮಾತೆ":— ಎಂದು ಹಾಡಿರುವರು.

ಸತ್ಯಕ್ಕೆ ಹೆದರಿ ಓಡುವವರಿಗೆ ಇತಿಹಾಸವು ಎಂದೂ ಶ್ರೇಷ್ಠಸ್ಥಾನವನ್ನು ಕೊಟ್ಟಿರುವುದಿಲ್ಲ. "ಸತ್ಯವೇ ಪರಮಾತ್ಮನು. ಅದೊಂದೇ ಮಾತ್ರ ನಿಜವೂ ಸತ್ಯವೂ ಆದದ್ದು ಸತ್ಯಶೋಧನೆ ಸತ್ಯಾರಾಧನೆಗಳಿಂದಲೇ ಉಳಿದೆಲ್ಲ ಆಚರಣೆಗಳುಂಟಾಗುವವು. ಸತ್ಯ

ದಿಂದಲೇ ಸ್ವಾತಂತ್ರ್ಯ, ಸತ್ಯದಿಂದಲೇ ಸ್ವರ್ಗ, ಸತ್ಯದಿಂದಲೇ ಮೋಕ್ಷ". (ಮಹಾತ್ಮ ಗಾಂಧಿ) ಜೀವನ ಎಲ್ಲ ವಿಧವಾದ ಶ್ರೇಷ್ಠ ಆಚರಣೆಗಳ ತಳಹದಿಯು ಸತ್ಯವಿರುತ್ತದೆ. ಅವನ ಜೀವನದ ಸರಿ ಹಾದಿಯು ಸತ್ಯ. ಸ್ವಾಮಿ ರಾಮತೀರ್ಥರು ಹೇಳುವಂತೆ "ಸತ್ಯದ ವೈಭವವು ಮತ್ತು ಸತ್ಯದ ಸೌಂದರ್ಯವು ಒಮ್ಮೆ ನಮ್ಮ ಬುದ್ಧಿಗೆ ಒಪ್ಪಿಗೆಯಾದರೆ ಅವು ನಮ್ಮ ಮನಸ್ಸಿನಲ್ಲಿ ಸ್ಥಿರವಾಗಿ ನಿಂತುಕೊಳ್ಳುವವು. ಹಿಂದುಗಡೆ ಅವುಗಳು ಅಲ್ಲಿಂದ ಚಲಿಸುವುದು ಶಕ್ಯವಲ್ಲ". ಆಗಲೇ ಜೀವನು ಸತ್ಯಕ್ಕೆ ತನ್ನ ಕೊನೆಗಾಣಿಕೆಯನ್ನು ಅರ್ಪಿಸುವನು. ತನ್ಮ ಆತ್ಮ ಬಲಿದಾನ ಮಾಡುವನು. ಆ ಮಹಾಪುರುಷರ ಬಗೆಯು ಕೆಳಗಿನ ನುಡಿಗಳಂತೆ ಇರುತ್ತದೆ.—"ಮೃತ್ಯುವು ನಿನ್ನ ಬಾಗಿಲ ಬಳಿಗೆ ಬಂದು ತಟ್ಟಿದಾಗ ನೀನೇನನ್ನು ಅರ್ಪಿಸುವೆ."

ಓಹೋ! ನನ್ನ ಜೀವನದ ಪೂರ್ಣ ಪಾತ್ರೆಯನ್ನು ಆ ನನ್ನ ಅತಿಥಿಯ ಮುಂದೆ ಇಡುವೆನು. ಬರಿಗೈಯಿಂದ ಹೋಗಲು ಅವನನ್ನು ನಾನು ಬಿಡುವುದೇ ಇಲ್ಲ". ಬಸವೇಶ್ವರನು ಇದೇ ಭಾವವನ್ನು ಮನಮುಟ್ಟಿ ಅನುಭವಿಸಿ ಈ ರೀತಿ ನುಡಿದಿರುವನು.

"ಜೀವನವನ್ನು ದುಃಖಕ್ಕೀಡುಮಾಡಿ, ಹಣ್ಣು ಹಣ್ಣು ಮಾಡುವ ವ್ಯವಹಾರ ಕೋಟಲೆಗೆ ಸಿಗುವವನು ನಾನಲ್ಲ. ಮರಣ ಬರುವುದೆಂದು ಧರ್ಮಕ್ಕೆ ಹೆದರಿ ಹಾಳಾಗಿ ಹೋಗುವವನು ನಾನಲ್ಲ. ಎಲೈ ಪರಮಾತ್ಮನೇ ಮೃತ್ಯುವೇ ನನಗೆ ಆನಂದದಾಯಕವಾದ ಹಬ್ಬವು."

ಮಹಾದೇವಿಯಕ್ಕನ ವಚನಗಳು.

ಸಂಸಾರ ಹೇಯ.

ಸಂಸಾರ ಬೆಂಬಿಡದೆ ಕಾಡುತ್ತಿದೆಯಯ್ಯ! ಏವೆನೇವೆನಯ್ಯ! ಅಂದಂದಿನ ದಂದುಗಕ್ಕೆ ಏವೆನೇವನಯ್ಯ! ಬೆಂದ ಒಡಲ ಹೊರೆವುದಕ್ಕೆ ನಾನಾರೆ. ಚನ್ನ ಮಲ್ಲಿಕಾರ್ಜುನಯ್ಯ, ಕೊಲ್ಲು, ಕಾಯಿ, ನಿಮ್ಮ ಧರ್ಮ.

ಸಂಸಾರವೆಂಬ ಹಗೆಯಯ್ಯ ತಂದೆ. ಎನ್ನವಂಶ ವಂಶದಪ್ಪಡೆ ಅರಸಿಕೊಂಡು ಬರುತ್ತಿದೆಯಯ್ಯ! ಎನ್ನುವನರಸಿಯರಸಿ ಹಿಡಿದು ಕೊಲ್ಲುತ್ತಿದೆಯಯ್ಯ! ನಿಮ್ಮ ಮರೆವೊಕ್ಕೆ ಕಾಯಯ್ಯ! ಎನ್ನ ಭಿನ್ನಪವನವಧಾರು, ಚನ್ನ ಮಲ್ಲಿಕಾರ್ಜುನ.

ವಿಜ್ಞಾನ ಮತ್ತು ಆತ್ಮಜ್ಞಾನ

—"ಕನ್ನಡ ಕವಿ ಕಾಳಿದಾಸ"
ಶ್ರೀ ಮೊಟಗಿ ಮಲ್ಲಿಕಾರ್ಜುನ, ಅಥಣಿ.

ಪರಾತ್ಪರ ಶಿವನ ಚಿತ್‌ಶಕ್ತಿ ಸಂಸ್ಫುರಣ ಮಾತ್ರದಿಂದ ರುದ್ರ-ವಿಷ್ಣು-ಬ್ರಹ್ಮಾದಿ ದೇವತೆಗಳ ಚತುರ್ದಶಭುವನಂಗಳೆಲ್ಲ ನಿರ್ಮಿತವಾದವು. ಸೃಷ್ಟ್ಯಾದಿ ರಚನೆಗಳಿಗೆ ಬ್ರಹ್ಮಕಾರಣನಾದರೆ, ವಿಷ್ಣು ಈ ಜಗದ್ರಕ್ಷಣೆಯ ಹೊಣೆ ಹೊತ್ತ ರುದ್ರಲಯಕರ್ತನಾದ. ಇಂತು ಸೃಷ್ಟಿ-ಸ್ಥಿತಿ-ಲಯಗಳ ಬಗೆ.

ಈ ಪೃಥ್ವಿಯಲ್ಲಿ ಅದೆಷ್ಟೋ ಜೀವಕೋಟಿ ಜನ್ಮತಳೆದು ಬರುತ್ತಿದೆ. ಇಂತಹ ಜೀವಕೋಟಿಯಲ್ಲಿ ಮಾನವ ಪ್ರಾಣಿಯೂ ಒಬ್ಬ. ಈ ಮಾನವ ಬುದ್ಧಿಪ್ರಧಾನ ಜೀವಯಾಗಿರುವುದರಿಂದ ಸೃಷ್ಟಿಯ ಸಕಲ ಜೀವರಾಶಿಗಳಲ್ಲಿ ಶ್ರೇಷ್ಠನೆನಿಸಿದ. ಅಂತೆಯೇ ಜ್ಞಾನ ಜೀವಿಯಾದ ಮನುಜ ಇಂದು ಸಮಸ್ತ ವಸ್ತು, ಒಡವೆ, ಭೂಮಿ, ಪಶುಪ್ರಾಣಿಗಳೆಲ್ಲದರ ಮೇಲೂ ತನ್ನ ಪ್ರಭುತ್ವವನ್ನು ಸ್ಥಾಪಿಸಿದ್ದಾನೆ. ಇಷ್ಟೇ ಅಲ್ಲದೆ ಅವನು ನಿಸರ್ಗ-ಭೂಮಿ-ಆಕಾಶದೆತ್ತರಕ್ಕೆ ನೆಗೆದು ಚಂದ್ರಲೋಕದಲ್ಲಿಯೂ ತನ್ನ ಗುರುತಿನ ಸಂಕೇತವನ್ನಿರಿಸಿ ಬಂದಿದ್ದಾನೆ. ಹೀಗೆ ವಿಜ್ಞಾನ ಯುಗದಲ್ಲಿ ಇಂದು ಮಾನವ ಬಹಳಷ್ಟು ಮುಂದುವರೆದಿದ್ದರೂ ಅವನಿಗೆ ನಿಜವಾದ ಆಂತರಿಕ ಶಾಂತಿಯಿಲ್ಲವೆಂಬುದು—ಸ್ಪಷ್ಟವಾಗಿದೆ.

ಈ ಭೂಗೋಲ-ಖಗೋಲ ಶಾಸ್ತ್ರಗಳ ಪರಿಜ್ಞಾನದಿಂದುಂಟಾದ ಉನ್ನತಮಾನವನ ಇಂತಹ ವೆಜ್ಞಾನದ ಪೂರ್ಣ ಪ್ರಗತಿಯನ್ನು ಕುರಿತು-ಇದೆಲ್ಲಾ ವಿಜ್ಞಾನವು ನಾಣ್ಯದ ಒಂದೇ ಬದಿಯ ಮುಖವಾಗಿದೆ ಎಂದು ನಾವು ಹೇಳಬಹುದು. ಇಲ್ಲಿ ಇನ್ನೊಂದು ಬಗೆಯ ಜ್ಞಾನವೆಂದರೆ-ಅದೇ ಆತ್ಮಜ್ಞಾನ; ಸುಜ್ಞಾನ. ಈ ಸುಜ್ಞಾನ-ವಿಜ್ಞಾನ ಎರಡೂ ಒಂದು ಗೂಡಿದಾಗಲೇ ಒಂದು ನಾಣ್ಯದ (ಪರಮಾತ್ಮನ) ಪೂರ್ಣ ಪರಿಜ್ಞಾನವನ್ನು ಪಡೆದಂತೆ. ಅದುವೇ ಪರಮಾತ್ಮ ಸಿದ್ಧಿಯ ಸಿದ್ಧಾಂತ. ಈ ವಿಜ್ಞಾನ-ಸುಜ್ಞಾನ ಎರಡೂ ಸದ್‌ವಸ್ತುವಿನ ಕಟ್ಟಕಡೆಯ ತುದಿಗಳೇ, ಇವು ಒಂದುಗೂಡಿದಾಗಲೇ ಈಶ್ವರನ ಸ್ವರೂಪ ಪೂರ್ಣವಾದಂತೆ.

ಇಲ್ಲಿ ಇನ್ನೊಂದು ಅತಿ ಮಹತ್ವದ ಸಂಗತಿಯೆಂದರೆ—ವಿಜ್ಞಾನ ಪ್ರತ್ಯಕ್ಷದರ್ಶಿಯಾಗಿ ಭೌತಸೃಷ್ಟಿ-ಆಕಾಶಾಂತರ್ಗತ ಸೀಮಿತ ಲೋಕಗಳತ್ತ ತನ್ನ ದೃಷ್ಟಿಯನ್ನು ಹರಿಸಬಲ್ಲ ಈ ಅದ್ಭುತ ಸಾಹಸ ರಮ್ಯ ರಹಸ್ಯಗಳನ್ನು ಪ್ರತ್ಯಕ್ಷೀಕರಿಸಿ ತೋರಿಸಬಲ್ಲ.

ಆದರೂ ಈ ಮಹಾ ಸಾಹಸ ಜೀವಿಯಾದ ವಿಜ್ಞಾನಿ—ಆತ್ಮಜ್ಞಾನಿಯ ಮಹೋನ್ನತ ಸಾಧನಮಯ ತಪಃಸಿದ್ಧಿಯ ಅವನ ಹೃದಯಾಂತರಾಳದಲ್ಲಿನ ದಿವ್ಯಶಾಂತಿಯನ್ನು ಪಡೆಯಲಾರದವನಾಗಿದ್ದಾನೆ.

ಆತ್ಮಜ್ಞಾನಿ—ವಿಜ್ಞಾನಿಯ ಸಾಧನ ಸಿದ್ಧಿಗಳೆಲ್ಲವನ್ನೂ ಸಾಧಿಸುತ್ತ ಈತ ಮೇಲೆ ಮೇಲೆ ಹೋಗಿ ಅತ್ಯುನ್ನತ ಲೋಕಗಳಲ್ಲಿ ವಿಹರಿಸಬಲ್ಲ. ದಿವ್ಯಲೋಕ ಸಂಚಾರಿಯಾಗಿ ತನ್ನೆಲ್ಲ ತಪಃಶಕ್ತಿ ಪ್ರಭಾವದಿಂದ ಜಗತ್ತಿನ ಆಗುಹೋಗುಗಳನ್ನು ಅರಿಯಬಲ್ಲ. ಇಂತಹ ಲೋಕ ಕಲ್ಯಾಣಕಾರಿ ಆತ್ಮಜ್ಞಾನಿ ಮಹಾದ್ರಷ್ಟಾರ ಈ ವಿಶ್ವವನ್ನು ಉನ್ನತ ಪಥದತ್ತ ಕರೆದೊಯ್ಯಬಲ್ಲ. ಅಂತೆಯೇ ಇಡಿಯ ಜಗತ್ತಿನ ಭವಿಷ್ಯವನ್ನೇ ಬದಲಿಸಿ ಅಮೃತ ಸೌಭಾಗ್ಯ ಸಂಪದವನ್ನು ನೀಡಬಲ್ಲ.

ನಮ್ಮ ಪ್ರಾಚೀನ ಭಾರತದಲ್ಲಿ ಮೊದಲಿಗೆ ಮಹಾಮುನಿಗಳು, ಋಷಿ ಪುಂಗವರು ಮಹರ್ಷಿಮಹಾಜ್ಞಾನಿಗಳು ಇವರೆಲ್ಲರೂ ತಮ್ಮ ತಮ್ಮ ತಪಃಶಕ್ತಿಯನ್ನು ಪರಮ ಆತ್ಮಜ್ಞಾನ ಬೀಜರೂಪವಾಗಿ ಬಿತ್ತಿ ಬೆಳೆದು ಬಯಲಾಗಿದ್ದಾರೆ. ಅಪೌರುಷೇಯ ಗಳಾದ ಮಹಾಜ್ಞಾನ ಸಾಹಿತ್ಯ ಸಂಪತ್ತಾದ ಆ ವೇದೋಪನಿಷತ್ತುಗಳನ್ನು ಜಗದ ಜೀವಿಗಳ ಕಲ್ಯಾಣಕ್ಕೋಸ್ಕರ ಕರುಣಿಸಿ ಹೋಗಿದ್ದಾರೆ. ಇಂತಹ ಸುಜ್ಞಾನ ಸಾಹಿತ್ಯ ಸಂಪದವೇ ನಮ್ಮೀ ಮಾನವ ಸೃಷ್ಟಿಯ ಮುನ್ನಡೆಗೆ ಕಾರಣವಾಗಿದೆ; ಶಾಂತಿದಾಯಕ ಹಾಗಿದೆ.

ಇಡಿಯ ಭೂಮಂಡಲದಲ್ಲಿ ಶಾಂತಿ ಸಂದೇಶವನ್ನು ಸಾರಬಹುದಾದ ಯಾವು ದಾದರೂ ಪವಿತ್ರ ರಾಷ್ಟ್ರವಿದ್ದರೆ ಅದುವೇ ನಮ್ಮ ಭಾರತ.

ಮಹಾದೇವಿಯಕ್ಕನ ವಚನಗಳು

ಸಂಸಾರ ಹೇಯ

ಎನ್ನ ಮಾಯದ ಮದವ ಮುರಿಯಯ್ಯ! ಎನ್ನ ಕಾಯದ ಕತ್ತಲೆ ಕಳೆಯಯ್ಯ
ಎನ್ನ ಜೀವದ ಜಂಜಡವ ಮಾಣಿಸಯ್ಯ! ಎನ್ನ ದೇವ ಚನ್ನಮಲ್ಲಿಕಾರ್ಜುನದೇವಯ್ಯ,
ಎನ್ನ ಸುತ್ತಿದ ಪ್ರಪಂಚವ ಬಿಡಿಸು ನಿಮ್ಮ ಧರ್ಮ.

ಕೋಳೂರ ಕೊಡಗೂಸು

—ಎಂ. ಎನ್. ಆರಾಧ್ಯ, ಇನಲ್ಲು

(ಕೈಲಾಸದ ಕೈವಲ್ಯ ಪೀಠದಲ್ಲಿ ಅಂತರ್ಮುಖಿಯಾಗಿದ್ದ ಪರಶಿವನ ಅಂತರ್ಯದ ಆನಂದ ಪರವಶತೆಗಳ ಕಳಾಚಿಹ್ನೆಗಳನ್ನು ಪ್ರಸನ್ನವದನದಲ್ಲಿ ಕಂಡು ಕುತೂಹಲಭರಿತಳಾದ ಪಾರ್ವತಿಯು ಶಿವನನ್ನು ಬಹಿರ್ಮುಖಗೊಳಿಸಲು ಯತ್ನಿಸುವಳು.)

ಪಾರ್ವತಿ– ಪ್ರಭು.... ಪ್ರಭು ಅದಾವ ಹೊಂಗನಸಿನ ಹೊಸ ವಿಕಾಸವದು ?.... ಮಂದ ಸ್ಮಿತ ಮುಖಮುದ್ರೆಯ ಆ ವಿಚಲಿತ ಮೌನ ; ಕಮನೀಯ ಕಲಾ ವಿಲಾಸದ ಕುತೂಹಲ ; ನಿಡಿದಾದ ಕುಡಿ ಹುಬ್ಬುಗಳ ಲಲಿತ ಲಾಸ್ಯ ; ಸುಡು ಗಣ್ಣಿನ ಸುಪ್ತ ಚೇತನದ ನಿರ್ಲಿಪ್ತ ಸ್ತುತ್ಯ ಕಾಂತಿ ; ದೃಢಮನದ ಭಾವ ಪರವಶತೆಗಳ ಭವ್ಯ ಪ್ರಭೆ.... ಅಪೂರ್ವ ಅಲಂಕಾರ ವರ್ಣನೆಯ ಸನ್ನಿವೇಶದ ರಸಮಯ ನೋಟ ಇದು ?.... ಪ್ರಭು.... ಪ್ರಭು

ಶಿವ– (ಬಹಿರ್ಮುಖನಾಗುತ್ತಾ).... ಅ್ಹ.... ಓಹ್.... ಉಮೆ.

ಪಾರ್ವತಿ– ಆದಿಪುರುಷನ ಅಭಿಜ್ಞಾನದ ಅದಾವ ಸವಿ ನೆನಹಿನ ಸುವರ್ಣ ಘಳಿಗೆ ಇದು ಪ್ರಭು ?

ಶಿವ– ನಿಷ್ಕಲ್ಮಷ ನಿರ್ಮಲ ಚಿತ್ತ ಒಂದರೊಡನೆ ಕ್ಷಣಕಾಲ ಮಿಲನಗೊಂಡಿದ್ದ ಈ ಚಿತ್ತನ್ನು ಹೀಗೆ ಬಹಿರ್ಮುಖಗೊಳಿಸಿದುದರ ಕಾರಣವೇನು ದೇವಿ ?

ಪಾರ್ವತಿ– ಅಂತರ್ಮುಖಿಯು ಆ ಅಂತರ್ಯದಿಂದ ಹೊರ ಹೊಮ್ಮುತ್ತಲಿದ್ದ ಅಂತಹ ವಾತ್ಸಲ್ಯ ವಿಶೇಷಗಳ ಆ ಕಲಾವಿಲಾಸವನ್ನು ಅರಿಯಲೋಸುಗ.

ಶಿವ– ನಿರ್ಮಲವಾದ, ನಿಷ್ಕಪಟವಾದ, ನಿರ್ವಿಕಾರವಾದ ಮಕ್ಕಳ ಮುಗ್ಧಮನಸ್ಸು ನಂಬಿಕೆಯ ಪರ್ವತವೇ ಅಡಗಿರುವುದಲ್ಲವೆ ? ಭೇದಭಾವಗಳನ್ನು ಅರಿಯದ, ತರ್ಕ-ವಿತರ್ಕಗಳನ್ನು ತಿಳಿಯದ ಅಂತಹ ಆ ಸ್ಥಿರ ಚಿತ್ತದೊಡನೆ ಕ್ಷಣಕಾಲ ಬೆರೆಯುವುದರಿಂದ ಆಗುವ ಆನಂದವನ್ನು ಕೇಳಿ ತಿಳಿಯುವುದಕ್ಕಿಂತಲೂ ಸ್ವಾನುಭಾವದಿಂದ ಅರಿಯುವುದೇ ಯುಕ್ತವಲ್ಲವೆ ದೇವಿ ?

ಪಾರ್ವತಿ– ಇಂತಹ ಅಪೂರ್ವಾನಂದಕ್ಕೆ ಕಾರಣವಾದ ಆ ಕಂದ ಯಾರೆಂದು ತಿಳಿಯಬಹುದೆ ?

ಶಿವ– ಭೂಲೋಕದ ಒಂದು ತುಣುಕೆನಿಸುವ ಸುರಪುರದ ಈಶಾನ್ಯಕ್ಕಿರುವ "ಕೋಳೂರು" ಎಂಬ ಗ್ರಾಮದಲ್ಲಿನ ಕಲ್ಲೇಶ್ವರ ಗುಡಿಯ ಅರ್ಚಕ ಶಿವ

ದೇವ, ಆತನ ಏಕಮಾತ್ರ ಪುತ್ರಿ ಚನ್ನಕ್ಕನೇ ಆ ಬಾಲೆ.

ಪಾರ್ವತಿ–ಅಂತಹ ಗುಣವಿಶೇಷಗಳ ಆ ಕಂದನ ವರ್ಣನೆ ಈ ಕಿವಿಗಳನ್ನೂ ಅರಳಿಸ ಬಾರದೇಕೆ ?

ಶಿವ– ಕೀರ್ತನಕಾರನ ಉಪನ್ಯಾಸ ನುಡಿಯನ್ನು ನಂಬಿ, ಅದರಂತೆ ಅರೆಯುವ ಗುಂಡನ್ನೇ ಅರ್ಚನೆಯ ಲಿಂಗವೆಂದು ಭ್ರಮಿಸಿ ತನ್ನ ಮುಗ್ಧಮನಸ್ಸಿನ ಮುದ್ದು ನುಡಿಗಳಿಂದ ಹೇಗೆ ಓಲೈಸುತ್ತಿದ್ದಾಳೆ ನೋಡು ದೇವಿ. [ಅತ್ತ ಸರಿದ ಪಾರ್ವತಿ ಚಿತ್ತಕ್ಕೆ ಚನ್ನಕ್ಕನ ಮುಗ್ಧಭಕ್ತಿ ಭಾವಗಳ ಓಲೈಕೆ ಪಾರ್ವತಿಯ ಗಮನಕ್ಕೆ ಬರುವುದು.]

ಚನ್ನಕ್ಕ– ನಾನಿಷ್ಟು ಬೇಡ್ಕಂಡ್ರು ಮಾತ್ನೇ ಆಡಲ್ವ ಕಲ್ಲಯ್ಯ ನೀನು ? ಹಾಗಾದ್ರೆ, ನೀ ಎಲ್ಲೆಲ್ಲೂ ಇದೀಯೆ, ಎಲ್ಲದ್ರಲ್ಲೂ ಇದೀಯೇಂದ ಆವತ ಆ ಮಾತೆಲ್ಲಾ ದಿಟವಲ್ಲಾನ್ನು ? ಯಾವ ರೂಪ್ನಂದ ನಿನ್ನ ನೋಡಬೇಕೂಂದ್ರೆ, ಆ ರೂಪನಿಂದ ಬಂದು ದರ್ಶನ ಕೊಡ್ತೀಯೆಂತಲ್ವಾ ಕಲ್ಲಯ್ಯನ ಗುಡೀಲಿ ಕತೆ ಮಾಡ್ದವ್ರು ಆವತ್ತೇಳದ್ದು ?.... ಹಾಗೇ ಈಗ ಬಂದು ನಾ ಕೊಡ ಹಾಲ.... ಅಯ್ಯಯ್ಯೋ ! ಹಾಲೇ ಇಲ್ಲವಲ್ಲ ಕೊಡಕ್ಕೆ.... ಸರಿ ಈಗ ಬೇಡ ನಾಳೆ ಬಾ, ಅಪ್ಪಾಜಿಗ್ಹೇಳಿ, ಬಳ್ಳದ ತುಂಬಾ ಹಾಲ್ಕರೇಸಿ, ಕೆಂಪಗೆ ಕಾಯ್ಸಿ, ಕೆಂಪ ಕಲ್ಸಕ್ರೆ ಬೆರಸಿ ಕುಡ್ಗಿರ್ತೀನಿ, ನಮ್ಮ ಕೆಂದ್ಹಸೂನ್ಹಾಲು ಎಷ್ಟು ಕಮ್ಮಗಿರತ್ತೆ ಗೊತ್ತಾ ?

ಶಿವದೇವ–(ಪ್ರವೇಶಿಸುತ್ತಾ) ಯಾರೊಂದ್ಗೆ ಕೂಸು ನೀ ಹಂಗೆ ಮಾತಾಡ್ತಿರದು ?

ಚನ್ನಕ್ಕ– ಕಲ್ಲಯ್ನೊಂಗ್ಗೆ ಅಪ್ಪಾಜಿ.

ಶಿವದೇವ–ಆ ಅಸೆ ಗುಂಡು ಕಲ್ಲಯ್ನಾ ಕೂಸು ?

ಚನ್ನಕ್ಕ– ಆವೊತ್ತು ಕಲ್ಲೇಶನ ಗುಡೀಲಿ ಕತೆ ಮಾಡದವು ಏನಂತ್ಹೇಳದ್ರು, ಹೇಳು ?

ಶಿವದೇವ–ಅವರ್ಹಂಗ್ಹೇಳದ್ದ ತಿಳ್ಕಳ ವಯಸ್ಸಲ್ಲ ಚನ್ನಕ್ಕ ನಿಂದು.

ಚನ್ನಕ್ಕ– ಹಾಗಾದ್ರೆ, ನಮ್ಮ ವಯಸ್ನೋರ್ಗೆ ತಿಳ್ಯೊಹಾಗ್ಹೇಳದು ದೊಡ್ಡವರ್ಗೆ ಬರಲ್ವಪ್ಪಾಜಿ ?

ಶಿವದೇವ–ಈಗ್ನಿನ್ನವ್ವಯ್ಯ ಇದ್ದು ಈ ನಿನ್ನ ಮಾತ ಕೇಳಿದ್ರೆ ಏನು ಆನಂದ ಪಡ್ತಿದ್ಳೊ, ಆ ಕಲ್ಲೇಶ ನಿಂಗೆ ಕಲ್ಲಾಯುಸ್ಸ ಕೊಡ್ಲಿ ಕಂದ.

ನಂಜವ್ವೆ–(ಪ್ರವೇಶಿಸುತ್ತಾ) ಇದೇನು ಸಿವದ್ಯಾವಪ್ಪ, ಜಾತ್ರೆನೂ ಮಕ್ತು ನಿಂತಂಗದೆ ಮಗಳೊಂದ್ಗೆ ಮಾತ್ಗೆ ?

ಶಿವದೇವ–ಹೊರಟ್ನಂತೇ ಅಲ್ವಾ ನಂಜಕ್ಕ ಚನ್ನಕ್ಕನ್ಗೆ ಹೇಳ್ತಾ ಇರದು ?

ಚನ್ನಕ್ಕ– ನನ್ನ ಬುಟ್ಟು ನೀನೊಬ್ನೇ ಹೊರಟ್ನಂತ್ಯಾಪ್ಪಾಜಿ ?

ಶಿವದೇವ–ಹಂಗಲ್ಲಾ ಚನ್ನಕ್ಕ, ನಮ್ಮ ಕೆಂದ್ಹಸ ಕರಾವು ಬುಡಸ್ಗಳಿಕ್ಕೆ ಬತ್ತು, ಕಲ್ಲೇಶನ ನೇವೇದ್ಯಕ್ಕೆ ಹಾಲು ಬೇಕೊ ಬ್ಯಾಡ್ವೊ ? ಅದ್ಕೆ ಒಂದು ಆಕಳು ಅಟ್ಗಂಡು ಬರಬೇಕು ಕಣವ್ವ.

ಚನ್ನಕ್ಕ– ನಾ ಬಂದ್ರೆ ಆಕಳು ಬರಲ್ವಾಪ್ಪಾಜಿ ?

ಶಿವದೇವ–ಆಕಳ್ನೂ ಎಳ್ಕಂಡು, ಅದರ ಕರೀನೊಂದ್ಗೆ ನಿನ್ನೂ ಹೊತ್ಗಂಬರಕ್ಕಾಯ್ತದವ್ವ ? ಹಾಗೆ ನಿಂಗೆ ಹಸರ ಕಣದ ಲಂಗ, ತಿಂಡಿ, ಹಣ್ಣು ಎಲ್ಲಾ ತರ್ತಿನಿ ಕೂಸು.

ಚನ್ನಕ್ಕ– ಈ ಉಪಾಯ ಎಲ್ಲಾ ನನ್ನ ಬುಟ್ಹೋಗಕ್ಕಲ್ವಾಪ್ಪಾಜಿ ?

ಶಿವದೇವ–ಹಾಗಾದ್ರೆ, ನಾ ಬರವರ್ಗೂ ಕಲ್ಲಯ್ಯನ್ಗೆ ನೀ ಹಾಲ್ಕುಡಿಸಲ್ಲಾನ್ನು ?

ಚನ್ನಕ್ಕ– ಏನಂದೆ ಅಪ್ಪಾಜಿ ? ನೀ ಜಾತ್ರೆಯಿಂದ ಬರವರ್ಗೂ ಗುಡಿಲ್ಲಿರ ಕಲ್ಲಯ್ಯನ್ಗೆ ಹಾಲ್ಕುಡಿಸದು....

ಶಿವದೇವ–ನೀನೇ ಕೂಸು, ನೀನೆ.

ಚನ್ನಕ್ಕ– ದಿಟವಾಗ್ಲೂ ?

ಶಿವದೇವ–ದಿಟವಾಗ್ಲೂ ಕೂಸು, ನಿನ್ನ ಕೈಯ್ನ ಹಾಲ್ಗಾಗೇ ಹಂಬಲಸ್ತಿರ್ತಾನೆ ಕಲ್ಲಯ್ಯ.

ಚನ್ನಕ್ಕ– ಹಾಗಾದ್ರೆ ನೀ ಹೋಗಪ್ಪಾಜಿ, ನಾನೇ ಹೋಗಿ ಹಾಲ್ಕುಡಿಸ್ತೀನಿ ಕಲ್ಲಯ್ಯನ್ಗೆ.

ಶಿವದೇವ–ಅವ ಬಲು ನಿಷ್ಠಿ ದೇವರು ಚನ್ನಕ್ಕ. ಎಳ್ಳಷ್ಟು ಎಂಜ್ಲು ಮೈಲ್ಗೆ ಆಗಕ್ಕಾಗ್ದು, ಮೀಸಲಳಿಯಕ್ಕಾಗ್ದು, ಹಾಗೇನಾದ್ರೂ ಆಯ್ತುಂದ್ರೆ....

ಚನ್ನಕ್ಕ– ಅಲ್ಲೇ ಬಲಿ ಕೊಟ್ಬುಡಪ್ಪಾಜಿ ನನ್ನ ಕಲ್ಲಯ್ಯನ್ಗೆ.

ಶಿವದೇವ–ನನ್ನಕ್ಕ, (ತಬ್ಬಿ) ನಿನ್ನ ಬಲಿಕೊಟ್ಟು ನಾ ಉಳಿಬಲ್ನಾ ಕಂದ ? ನಂಜಕ್ಕಾ–ನಂಜಕ್ಕಾ ?

ನಂಜವ್ವೆ–(ಪ್ರವೇಶಿಸುತ್ತಾ) ಬಂದಿ ಸಿವದ್ಯಾವಪ್ಪ.... ಮುಗಿತಾ ಅಪ್ಪಯ್ಯ ಮಗಳ ಕಂತೆ ಪುರಾಣ ಎಲ್ಲಾ ?

ಶಿವದೇವ–ನಾ ಜಾತ್ರೆಯಿಂದ ಬರವರ್ಗೆ ಚನ್ನಕ್ಕನ್ನ ಮಡೀ ಮಾಡ್ಸಿ, ಮೀಸಲ್ಹಾಲು ಕೊಟ್ಟು, ಗುಡೀಗೆ ಕಳಿಸದು ನಿನ್ನ ಮ್ಯಾಲೆ ಬಿದ್ದ ಬಾರ.

ನಂಜವ್ವೆ– ಇದೂ ಒಂದ್ಹೊರ್ಯಾ ? ಇಷ್ಟೂ ಗೊತ್ತಿಲ್ವಾ ನಂಗೆ ? ನೀಂವ್ಯದಿಂದ ಹೋಗ್ಬಾ ನೀನು. ಹಂಗೇ, ನನ್ನೆಸರ್ನಲ್ಲಿ ಹಣ್ಣು ಜವನ ಎಸೆದು ಬಾ ತೇರ್ಗೆ.

ಚನ್ನಕ್ಕ– ನನ್ಗೆ ಸರ್ಕಲ್ಲ ಅಪ್ಪಾಜಿ.

ಶಿವದೇವ–ಎಸದು ಬತ್ತಿನವ್ವ—ಎಸದು ಬತ್ತೀನಿ, ಹೋಗ್ಬರ್ಲಾ ?

ಚನ್ನಕ್ಕ– ನನ್ನ ಹಸರ್ಲಂಗದೊಂದ್ಗೆ—ಕಲ್ಲಯ್ಯನ್ಗೂ ಏನಾರು ತರಬೇಕು.

ಶಿವದೇವ–ತತ್ತೀನವ್ವಾ—ಬತ್ತಿನಿ.

(ಶಿವದೇವ ತೃಪ್ತನಾಗಿ ನಿರ್ಗಮಿಸುವನು, ಚನ್ನವ್ವೆ ಪರವಶಳಾಗುವಳು, ನಂಜವ್ವೆ ಅಸಹನೆಯಿಂದ ಒಳಗೆ ನಿರ್ಗಮಿಸುವಳು.)

ಶಿವ– ಹೇಗಿದೆ ಉಮೆ, ಆ ಕೊಡಗೂಸಿನ ಮುಗ್ಧ ಭಕ್ತಿ ?

ಪಾರ್ವತಿ–ಮುಗ್ಧ ವಯಸ್ಸಿನ ಆ ಮನದ ಸೆಳೆತ ಭಕ್ತಿಗೂ ಮಿಗಿಲೇ ಎನಿಸುತ್ತಿದೆ.

ಶಿವ– ಅದರ ಅಂಗವಾಗಿಯೇ ಅಲ್ಲವೆ, ಆ ಕೂಸು ಮತ್ತೆ ಅದೇ ಗುಂಡುಕಲ್ಲಿನ ಮುಂದೆ ಅದೇ ಭಾವ ಪರವಶತೆಯಿಂದ ಹಾಗೆ ಕೇಳಿಕೊಳ್ಳುತ್ತಿರುವುದು ?

ಪಾರ್ವತಿ–ಆ ಕೂಸಿನ ಆ ನಿಷ್ಕಲ್ಮಶ ನುಡಿ ನಿಜಕ್ಕೂ ಮರೆಯುವಂತಹುದಲ್ಲ.

ಶಿವ– ಅದನ್ನು ಮೌನದಿಂದ ಆಲಿಸುವುದೇ ಹಿತವಲ್ಲವೆ ?

ಪಾರ್ವತಿ–ಅಹುದು.

(ಚನ್ನಕ್ಕ ಅರೆಯುವ ಗುಂಡಿನ ಮುಂದೆ ಹಿಂದಿನಂತೆ ತನ್ನ ಅಭೀಷ್ಟವನ್ನು ತಿವೇದಿಸಿಕೊಳ್ಳುತ್ತಿದ್ದಾಳೆ.)

ಚನ್ನಕ್ಕ– ನೆನ್ನೆ ನಾ ಹಾಗೆ ಕರ್ದೆಂತ ನೀ ಏನಾದ್ರೂ ಬಂದೇಬುಟ್ಟಿದ್ರೆ, ಮೀಸಲ ಹಾಲೇ ಇತ್ತಿಲ್ಲ ನಿಂಗೆ ಕೊಡಕ್ಕೆ—ಅಲ್ವಾ ? ಅದ್ಕೇ ಮೀಸಲ್ಹಾಲು ಹೊತ್ತು ನಾನೇ ಈಗ ಬತ್ತಾ ಇರದು ನಿನ್ನ ಗುಡಿಗೆ. ಅಲ್ಲೂ ನೀ ಏನಾದ್ರೂ ನೆನ್ನೆ ಹಾಗೆ ಕಟಕಟಿ ಮಾಡಿದ್ಯೋ—ಅಲ್ಲೇ ನಿನ್ನ ಜೊತೆ ಟು-ಟು-ಟು.

ನಂಜವ್ವೆ-(ನೇಪಥ್ಯದಿಂದ) ಚನ್ನಕ್ಕಾ....ಕೂಸೂ....ಚನ್ನಕ್ಕಾ....

ಚನ್ನಕ್ಕ– ಬಂದೆ ನಂಜವ್ವತ್ತಿ.

ನಂಜವ್ವೆ-ಹಾಲಿನ ಬಳ್ಳಾ ಅಚ್ಚಗ್ಟಾಗಿ ಬೆಳಗಿ ತೊಳ್ಕಂಡ್ಬಾ ? ಆಮೇಲೇನಾರೂ ಹೆಚ್ಚುಕಮ್ಮಿ ಆಗಿ ಅದರ ದ್ರೋಸ್ವಾ ನನ್ನ ತಲ್ಗೆ ಕಟ್ಗಟ್ಬೇಯೆ. (ತನ್ನಲ್ಲೇ) ಸೊಮ್ಮು ಸ್ವಾದರಕ್ಕೆ ದೂರಾಗಿದ್ದಷ್ಟೂ ಮರ್ಯಾದೀಂತ ಹಿರೀಕ್ರು ಹೇಳ ಮಾತು ಸಟಿಯಲ್ಲ. ಏನೊ, ನಂಗೂ ಒಂದು ದಿಕ್ಕಾಯ್ತಾನೆಂತ ಇವನ ಕಿದ್ದಂಡ್ಗೆ ನಾ ಬಂದು ಸೇರದ್ರೆ, ಸಂದಾಯ್ತು ಬೆಳಗಾಯ್ತೂಂದ್ರೆ ಮುಗ್ಗ ಹಂಗೇ ಇಲ್ಲ ಇವನ ಕರಟಪುರಾಣ. ವರಸೊಂಬತ್ಕಾಲ್ವಾ ಈ ವಾಲಂಗೆ ಆಗೋದ್ರೆ ಮುಗ್ಯದು ಯಾವಾಗ್ಲೊ ಇದು ?

ಸಿದ್ಧಗಂಗಾ

ಚನ್ನಕ್ಕ– (ಬಳ್ಳದೊಡನೆ ಪ್ರವೇಶ) ಬೆಳಗಿ ತೊಳ್ದಿರದು ಸರ್ಯಾಂತ ನೋಡಿ ನಂಜವ್ವತ್ತೆ.

ನಂಜವ್ವೆ- ನೋಡದು ಕೇಳದು ಯಾಕ್ಬೇಕೇಳು–ಮಾತನ್ವಾಸೆ ಬರದೇ ಇದ್ರೆ ಸಾಕಾಗದೆ. (ಬಳ್ಳಕ್ಕೆ ಹಾಲು ಸುರಿದು) ಜ್ವಾಪನ್ವಾಗಿ ತಕ್ಕಂಡೋಗು. ಆಮ್ಯಾಲೆ ನನ್ನ ತಲ್ಗೆ ತಂದ್ಮಡ್ಗೀಯೆ ಮತ್ತ.

(ಚನ್ನಕ್ಕ ಮೌನದಿಂದ ಹಾಲಿನ ಬಳ್ಳ ಹೊತ್ತು ಹೊರಡುವಳು—ಗುಡಿಯತ್ತ)

ಶಿವ– ಹಾಲಿನಂತಹ ಮನಸ್ಸಿನಿಂದ ಹಾಲನ್ನು ಹೊತ್ತು ತಂದ ಆ ಕಂದನ ಕ್ರಿಯಾ ನಿಷ್ಠೆಗಳ ಚರಿತಾರ್ಹ ಚಿತ್ತೈಕಾಗ್ರತೆಯನ್ನು ಏನನ್ನುವೆ ಉಮೆ ! ಬಳ್ಳ ತುಂಬಿರುವ ಆ ಹಾಲಿನಿಂದ ಉಕ್ಕುತ್ತಿರುವ ಆ ಹೆಂಗೂಸಿನ ಭಕ್ತಿಭಾವಗಳು ಹೇಗೆ ಹೊರಹೊಮ್ಮುತ್ತಿವೆ ನೋಡು ದೇವಿ.

ಪಾರ್ವತಿ–ಶಿವಾರ್ಪಣೆಗೈಯ್ಯುತ್ತಿರುವ ಆ ಹಾಲನ್ನು ಸಲಿಸುವುದು ಶಿವನಿಂದ ವಿಳಂಬವಾದಲ್ಲಿ ಪರಿಣಾಮ....

ಶಿವ– ಪರಾಕಾಷ್ಠೆಯನ್ನು ಮುಟ್ಟುತ್ತದೆ.

ಪಾರ್ವತಿ–ಅಯ್ಯೊ ! ಆ ದಾರುಣ ನೋಟವನ್ನು ನಾನು ನೋಡಲಾರೆ ಪ್ರಭು— ನೋಡಲಾರೆ.

ಶಿವ– ಪರಾಕಾಷ್ಠೆಯಿಲ್ಲದ ಪ್ರಭಾವದ ಪ್ರಕಾಶ ಮಂದ. ಪರಮಾವಧಿ ಮುಸಕು.

ಪಾರ್ವತಿ–ಆದರೂ ಇದು....

ಶಿವ– ರಸೋತ್ಕರ್ಷೆಯ ಪರಮಾವಧಿಯನ್ನು ಅವಲೋಕಿಸುವ ಅವಧಿ. ಅವಲೋಕಿಸು.

(ಬಳ್ಳದಲ್ಲಿನ ಹಾಲನ್ನು ಕಲ್ಲೇಶನ ಮುಂದಿಟ್ಟು ಬೇಡಿಕೊಳ್ಳುತ್ತಿದ್ದಾಳೆ–ಚನ್ನಕ್ಕ)

ಚನ್ನಕ್ಕ– ಅಪ್ಪಾಜಿ ಹಾಗೆ ನಾನೂ ಮಡಿ ನೀರ್ನಲ್ಲೇ ಮೈತೊಳ್ಕಂಡು, ಬಳ್ಳ ಬೆಳಗಿ ತೊಳ್ಕಂಡು, ಮೀಸಲಳೀದ್ಹಾಗೆ ತಂದಿದೀನಿ ಈ ಹಾಲ ಅಂದ್ರೂ, ಯಾಕೆ ಹೀಗೆ ತಡ ಮಾಡ್ತಿದೀಯೆ ಕಲ್ಲಯ್ಯ ? ಹೊತ್ತೇನಾದ್ರೂ ಮೀರ್ತ್ತೂಂತ್ಲಾ ? ಇನ್ನೂ ಹಶಿವಿಲ್ವೊ ?....ಈಗ ತಿಳಿತು ನಿನ್ನ ಮೌನ ಏನೂಂತ, ಎದುರ್ಗಿದ್ರೆ ಕಣ್ಣೆಂಜ್ಲಾಯ್ತುದೆಂತಲ್ವಾ ? ಇದೊ, ಈಗ್ಲೇ ಈ ಕಂಬದ ಮರೇಲಿ ನಿಲ್ತೀನಿ. ನೀ ಹಾಲ್ಕುಡಿ ಇನ್ನು (ಕಂಭದ ಮರೆಯಲ್ಲಿ ನಿಂತು)....ತಡಮಾಡಬೇಡಾ ಕಲ್ಲಯ್ಯ....ನೀನೀಗ ಆ ಹಾಲು ಕುಡಿದ್ರೆ, ಬರೊ ಜಾತ್ರೆಗೆ ನಿನ್ನೂ ಕರ್ಕಂಡ್ಹೋಯ್ತಿನಿ ನನ್ನೊಂದ್ಗೆ. ಈಗ ಅಪ್ಪಾಜಿ ನಂಗೆ ತರೆ ಹಸರು ಕಣದೊಂದ್ಗೆ ನಿಂಗೂ ತರಕ್ಹೇಳಿದೀನಲ್ಲಾ ಅದ್ನೂ ಕೊಡ್ತಿನಿ. ಅದರೊಂದ್ಗೆ ಆ

ತಿಂಡಿ, ಹಣ್ಣೂ ಕೊಡ್ತೀನಿ.... ಬಂದೆ ತಾನೆ?.... ಕುಡ್ದೆ ತಾನೆ?.... ನಾ ಬರ್ಲಾ ಇನ್ನು?.... ಮಾತಾಡಲ್ವಾ?.... ಇದೊ ಬಂದೆ. (ಕಂಬದ ಮರೆಯಿಂದ ಬಂದು ಲಿಂಗದ ಮುಂದೆ ಬಳ್ಳದಲ್ಲಿ ಹಾಗೇ ಇದ್ದ ಹಾಲನ್ನು ಕಂಡು) ಯಾಕೆ ಕಲ್ಲಯ್ಯಾ, ನನ್ನ ಮೇಲೆ ಕೋಪ್ವಾ? ಇಲ್ಲಾ ಬೇಸಿರ್ವಾ?........ ಹಾಲೇನಾದ್ರೂ ಕಾಯ್ಬೇಕಾಗಿತ್ತ? ತಮ್ಮಗಿಲ್ವಾ?.... ನಂಗೊತ್ತಿಲ್ಲದ್ಹಾಗೆ ಮೀಸಲೇನಾದ್ರೂ ಅಳಿತಾ?.... ಇನ್ನೇನಪಚಾರ್ವಾಯ್ತು ನನ್ನಯ್ಯ? ನೊರೆ ಆರಬಾರದಾಗಿತ್ತ? ಮಾತಾಡು ಕಲ್ಲಯ್ಯ.... ಎಷ್ಟೇ ಆದ್ರೂ ನಿಂಗಿಂತ ಚಿಕ್ಕವಳಲ್ವ ನಾನು? ಚಿಕ್ಕವರ ತಪ್ಪ ದೊಡ್ಡವರು ಮನ್ನಿಸಿದ್ಬೇಕಲ್ವಾ? ಎಲ್ಲರ್ಗಿಂತ ದೊಡ್ಡವ್ನು ಅನ್ನಸ್ಗಂಡ ನೀನೇ ಹೀಗೆ ಹಟ ಮಾಡಿದ್ರೆ ನಾ ಏನ್ಮಾಡ್ಬೇಕು ನೀನೇ ಹೇಳು?... ಹಾಲ್ಕುಡಿ ನನ್ನಯ್ಯ.... ನೀನು ಕುಡಿಯದೇ ಇಲ್ಲಾಂತ ಹಟ ಮಾಡಿದ್ರೆ—ನಿಂಗೆ ಕುಡಿಸೇ ಕುಡಿಸ್ತಿನಂತ ನಾನೂ ಹಟ ಮಾಡ್ತೀನಿ. ಯಾರ ಹಟ ಗೆಲ್ಲತ್ತೆಂತ ನೀನೇ ನೋಡಾಗ.... ಒಳ್ಳೇ ಮಾತ್ನಿಂದ ಬಂದು ಈ ಹಾಲ್ಕುಡಿದ್ರೆ ಸರಿ, ಇಲ್ದೆ ಇದ್ರೆ ನಿನ್ನ ಲಿಂಗದ ಪಾಣ್ಬಟ್ಟಲ್ಗೆ ನನ್ನ ಮಂಡೆ ಗುದ್ಕಂಡು ಒಡ್ಕತೀನಿ. ಆಗ್ಲಾದ್ರೂ ನಿನ್ನ ಕಲ್ಮನ್ಸು ಕರಗ್ತದೋ ಇಲ್ವೋ ನೋಡ್ತೀನಿ

(ಕ್ಷಣ ಕಾಲ ಲಿಂಗವನ್ನು ದಿಟ್ಟಿಸಿ ನಿರಾಶಳಾಗಿ, ಕಡೆಗೆ ಲಿಂಗದ ಪಾಣಿಬಟ್ಟಲಿಗೆ ತನ್ನ ಮಂಡೆಯನ್ನು ಗುದ್ದಿಕೊಳ್ಳುವಳು, ಪಾರ್ವತಿ ಮನ ಕರಗುವುದು.)

ಪಾರ್ವತಿ– ತ್ವರೆಗೊಳ್ಳು ಪ್ರಭು:—ತ್ವರೆಗೊಳ್ಳು. ತಡವಾದಲ್ಲಿ, ಆ ಕೂಸಿನ ಮಸ್ತಕದ ರಕ್ತಾಭಿಷೇಕ ನಿನ್ನ ನಿರ್ಧಾರವನ್ನು ಕೊಚ್ಚಿಕೊಂಡು ಹೋದೀತು.... ತ್ವರೆಗೊಳ್ಳು.

(ಲಿಂಗ ಹೋಳಾಗಿ ಬಾಯಿ ತೆರೆಯುವುದು. ಪರಶಿವನು ಅಲ್ಲಿಂದ ಮೇಲೇಳುವನು)

ಶಿವ– ಚನ್ನಕ್ಕ.... ನೋಡು ಕಂದ.... ನಿನಗಾಗಿ ಹೀಗೆ ಬಂದಿರುವೆ ನಿನ್ನ ಕಲ್ಲಿನಾಥ ನನ್ನು ಕಣ್ತೆರೆದು ನೋಡು.

ಚನ್ನಕ್ಕ– (ಆನಂದಪರವಶಳಾಗಿ) ಕ—ಕ—ಕಲ್ಲಿನಾಥ! ಕಲ್ಲಿನಾಥ!! ನಿನ್ನ ಕಲ್ಲೆದೆ ಕರಗಕ್ಕೆ ಇಷ್ಟು ಹೊತ್ತು ಬೇಕಾಯ್ತಲ್ವಾ?

ಶಿವ– ಚರಾಚರಗಳನ್ನೇ ಚಕಿತಗೊಳಿಸಬಲ್ಲ ನಿನ್ನೀ ಛಲ ಸಾಹಸಗಳ ಮುಂದೆ ಕಲ್ಲೆದೆಯಷ್ಟೇ ಅಲ್ಲ, ವಜ್ರ ಹೃದಯವೂ ಕರಗಿ ನೀರಾಗುವುದರಲ್ಲಿ ಆಶ್ಚರ್ಯವಿಲ್ಲ ಕೂಸು.

ಚನ್ನಕ್ಕ– ಅಂದಮೇಲೆ, ನನ್ನ ಮಸ್ತಕದ ರಕ್ತ ಮಜ್ಜನವಾದಲ್ಲನೆ ಬರಲೇಬಾರ್ದು ಅಂತ ಹಟ ಹೊತ್ತಿದ್ದೆಯಾ? ಅಪ್ಪಾಜಿ ಬಂದಮೇಲೆ ನಿನ್ನೀ ತಾತ್ಸಾರ

ಚಾ-ಚೂ-ತಪ್ಪದೆ ಒಪ್ಪಿಸ್ತೀನಿ. ಅದಕ್ಕೆ ನೀನೇನು ಉತ್ರ ಕೊಡ್ತಿಯೋ ನೋಡ್ತೀನಿ.

ಶಿವ– ನಾನಾಗ ಬಾರದೆ ನಿಂತರೆ?

ಚನ್ನಕ್ಕ– ಗೊತ್ತೇ ಇದೆಯಲ್ಲ; ನಿನ್ನ ಲಿಂಗಕ್ಕೆ ನನ್ನ ಮಂಡೆ ರಕ್ತ ಮಜ್ಜನ.

ಶಿವ– ಚನ್ನಕ್ಕ!?

ಚನ್ನಕ್ಕ– ಆ ಅಂಜಿಕೆನಿಂದ ಈಗ ಕುಡಿ ಈ ಹಾಲನ್ನ.

(ಚನ್ನಕ್ಕ ಹಾಲಿನ ಬಳ್ಳವನ್ನು ತನ್ನೆರಡೂ ಕೈಗಳಿಂದ ಎತ್ತಿ ಹಿಡಿಯುವಳು ಶಿವನು ಚನ್ನಕ್ಕನನ್ನು ತನ್ನ ತೊಡೆಯ ಮೇಲೆ ಕುಳ್ಳಿರಿಸಿಕೊಂಡು, ಅವಳೆರಡು ಕೈಗಳ ಮೇಲೂ ತನ್ನ ಕೈಯಿಟ್ಟು, ಬಳ್ಳದ ಹಾಲನ್ನು ಕುಡಿದು ತೇಗುವನು.)

ಚನ್ನಕ್ಕ– ಹ್ಯಾಗಿತ್ತು ಕಲ್ಲಯ್ಯ ಹಾಲು?

ಶಿವ– ತುಂಬ ರುಚಿಯಾಗಿತ್ತು ಕೂಸು.

ಚನ್ನಕ್ಕ– ಇಂಥ ರುಚಿಯಾದ ಹಾಲು ಕುಡಿಯಕ್ಕೆ ಎಷ್ಟು ಹಮ್ಮು ನಿಂಗೆ? ಈವೊತ್ತಿನ್ಹಾಗೆ ನಾಳೆ ಏನಾದ್ರೂ ತಡ ಮಾಡಿದ್ರೆ, ನಿಂಗೂ ನಂಗೂ ಎಂಥಾ ಪೋಟ ಬೀಳುತ್ತೆ ಗೊತ್ತಾ?

(ಚನ್ನಕ್ಕ ಶಿವನ ತೊಡೆಯಿಂದಿಳಿದು ಬಳ್ಳವನ್ನು ತೆಗೆದುಕೊಂಡು ನಿರ್ಗಮಿಸುವಳು.)

ಶಿವ– ಏನನ್ನುವೆ ಉಮೆ, ಆ ತರಳೆಯ ಸರಳತನದ ಉತ್ಕಟೇಚ್ಛೆಯ ದಿಟ್ಟತನವನ್ನು!

ಪಾರ್ವತಿ– ವರ್ಣನಾತೀತ, ಆ ಕಂದನ ನಿಚ್ಚಳ ನೋಟದ ನಿರ್ಮಲಾಭಿಷೇಕ, ಮುದಲಿಕೆಯ ಓಲೈಕೆಯಿಂದಾದ ಅರ್ಚನೆ, ಕೊಡುಗೈಯಿನ ಹಾಲಿನ ತಮ್ಮನೆ—ನಿಜಕ್ಕೂ ವರ್ಣನಾತೀತ.

ಶಿವ– ಅಂತೆಯೇ, ಈ ಕರಪಲ್ಲವಗಳ ಸ್ಪರ್ಶದಿಂದ ಆ ಕಂದನಿಗಾದ ಆ ಅಮಿತಾನಂದ....

ಪಾರ್ವತಿ– ಸಹಜವೇ ಆದರೂ, ಆ ಕೂಸಿನ ಅಂತಹ ಸತ್ಕಾರಾದರಗಳಿಗೆ ಇಂತಹ ಪಾರಿತೋಷಕ ಎಣಿಕೆಗೆ ನಿಲುಕುವುದಲ್ಲ.

ಶಿವ– ಆದರೆ, ಮುಂದೆ ಆ ಕಂದನಿಗೆ ಮೀಸಲಾಗಿರುವ ಯಶಃಸಂಪದ ಪದವಿಯ ಪ್ರಕಾಶ ನಿನ್ನರಿವಿಗಿನ್ನೂ ಬಾರದಿರುವುದು—ಆಶ್ಚರ್ಯ.

ಚನ್ನಕ್ಕ– ಮುಂದೆ ಮಾಡಬೇಕೆಂದಿರುವ ಶಿಕ್ಷೆಯನ್ನು ಈಗಲೇ ನೆರವೇರಿಸಪ್ಪಾಜಿ... ಕಲ್ಲಿನಾಥ, ನಿನ್ನೀ ಕಡೆಯ ಪರೀಕ್ಷೆಯಲ್ಲಿ ನನ್ನನ್ನು ಕಡೆಯುತ್ತಿರುವೆಯಾ? ಇಲ್ಲವೆ, ಕಡೆ ಘಳಿಗೆಯಲ್ಲಿ ಬಂದು ನನ್ನ ಅಪ್ಪಾಜಿಯ ಕಣ್ಣು ತೆರೆಸಬೇಕೆಂದಿರುವೆಯಾ?....ಹೇಳು ನನ್ನಯ್ಯಾ?....ನಿನ್ನಿನಂತೆ ಈಗಲೂ ಬಂದು, ಈ ಹಾಲನ್ನು ಕುಡಿದು, ಸತ್ಯವನ್ನು ಎತ್ತಿ ಹಿಡಿ. ನನ್ನಪ್ಪಾಜಿಗೆ ನನ್ನಲ್ಲಿರುವ ಅನುಮಾನವನ್ನು ಕಳೆ....ನಿನ್ನೀ ಮೌನದ ಇಂಗಿತವೇನು ನನ್ನಯ್ಯ?

ಶಿವದೇವ–ನಿನ್ನ ವಂಚನೆಯನ್ನು ಬಯಲಿಗೆಳೆಯುವುದು, ನನ್ನ ನಿತ್ಯ ವ್ರತವನ್ನು ನಿಪಾತಗೊಳಿಸಿದ ನಿನ್ನ ಆಕೃತ್ಯಕ್ಕೆ ತಕ್ಕ ದಂಡನೆ ವಿಧಿಸುವುದು. ಮಗಳೆಂಬ ಮಮತೆಯಿಂದ ನಿನ್ನ ಎಳೆತನದ ಬುದ್ಧಿಯನ್ನೂ ಗಣಿಸದೆ ಈ ದೇವ ದೇವನ ಸೇವೆಗೆ ನಿನ್ನನ್ನು ನೇಮಿಸಿದ ನನ್ನ ಅಜ್ಞಾನಕ್ಕೆ ತಕ್ಕ ಶಿಕ್ಷೆ ಪಡೆಯುವುದು... ಘಾತಕಿ, ಇಷ್ಟು ಕಾಲದ ನನ್ನ ನಿಯಮ ನಿಷ್ಠೆಗಳಿಗೇ ಧಕ್ಕೆ ತಂದ ಪಾತಕಿ, ಈ ಕ್ಷಣವೇ ನಿನ್ನ ರುಂಡವನ್ನು ತುಂಡರಿಸಿ ಆ ಕಲ್ಲಿನಾಥನಿಗೆ ನಿನ್ನಿಂದಾದ ಅಪಚಾರಕ್ಕೆ ನಾನು ಪ್ರಾಯಶ್ಚಿತ್ತ ಪಡೆಯುತ್ತೇನೆ.

ಚನ್ನಕ್ಕ– ಕಲ್ಲಿನಾಥನ ಕಡೆಯಾಸೆ ಹಾಗಿರುವುದೇ ಆಗಿದ್ದಲ್ಲಿ ನನ್ನ ಅಡ್ಡಿಯಿಲ್ಲ ಅಪ್ಪಾಜಿ...ಕಲ್ಲಿನಾಥ ನೀನಿನ್ನು ಸುಪ್ರೀತನಾಗು.

(ಮಂಡಿಯೂರಿ ಲಿಂಗದ ಮುಂದೆ ಕುಳಿತು, ಕೈಮುಗಿದು, ಕುತ್ತಿಗೆಯನ್ನು ತಗ್ಗಿಸುವಳು. ನೇತು ಹಾಕಿದ್ದ ಗಂಡುಗತ್ತಿಯನ್ನು ಕೈಗೆ ತೆಗೆದುಕೊಂಡ ಶಿವದೇವ ಚನ್ನಕ್ಕನ ಶಿರ ಕಡಿಯಲು ತನ್ನೆರಡೂ ಕೈಗಳಿಂದ ಮೇಲೆತ್ತುವನು. ಯಥಾ ವಿಧಿಯಂತೆ ಲಿಂಗ ಹೋಳಾಗಿ ನಡುವೆ ಪರಶಿವನು ಗೋಚರಿಸುವನು.)

ಶಿವ– ನಿಲ್ಲು ಶಿವದೇವ—ನಿಲ್ಲು ನಿಲ್ಲು. ಮಗಳೆ, ಚನ್ನಕ್ಕ, ನಿನ್ನ ದೃಢ ಚಿತ್ತ ನಿಷ್ಠಾ ಭಕ್ತಿ ಅಸದೃಶ, ಅನುಪಮ. ನಿನಗಿನ್ನು ಯಾರ ಯಾವ ಹಂಗೂ ಇಲ್ಲ ಕಂದ. ವಿಶ್ವವ್ಯಾಪಕವಾದ ವಿಮಲ ಜ್ಯೋತಿಯಲ್ಲಿ ವಿಸ್ತೃತವಾದ ನಿನ್ನಾತ್ಮ ಜ್ಯೋತಿ ಅಮರವಾಗಲಿ. ವಿಮಲ ಚಿತ್ತದ ನಿನ್ನ ವಿಪುಲ ಚರಿತೆ ನಾಡಿನ ಪ್ರಖ್ಯಾತ ಕೃತಿಯಾಗಲಿ. ಬಾ ಮಗಳೆ....ಬಾ....

(ತನ್ನೆರಡು ಕೈಗಳನ್ನೂ ನೀಡುವನು, ಚನ್ನಕ್ಕ ಬಳ್ಳವನ್ನೆತ್ತಿಕೊಳ್ಳುವಳು. ಶಿವನು ಅವಳನ್ನು ಹಿಂದಿನಂತೆ ತನ್ನ ತೊಡೆಯಮೇಲೆ ಕುಳ್ಳಿರಿಸಿಕೊಂಡು, ಬಳ್ಳದ ಹಾಲನ್ನು ಕುಡಿದು ತೇಗುವನು, ಅದ ಕಂಡ ಶಿವದೇವ ದಿಗ್ಭ್ರಾಂತನಾಗುವನು)

ಶಿವದೇವ–[ತನ್ನಲ್ಲೆ] ಇದೇನು ಕನಸೊ—ಭ್ರಮೆಯೊ! ಕಲ್ಲಿನಾಥನ ಜ್ಯೋತಿರ್ಲಿಂಗದಿಂದ ಕಳಾಪೂರ್ಣವಾದ ಕಾಪಾಲಿ! ನನ್ನ ಮುದ್ದು ಕೂಸಿನ ಕೈಯಿಂದ

ಹಾಲು ಕುಡಿದ ಕೆಂಡಗಣ್ಣ!!...[ಪ್ರಕಾಶ] ಮಗಳೆ, ಚನ್ನಕ್ಕ, ನಿನ್ನೀ ಅಜ್ಞಾನಿ ತಂದೆಯ ಅವಿವೇಕವನ್ನು ಮನ್ನಿಸು, ಇವನ ಅಪರಾಧಕ್ಕೆ ತಕ್ಕ ಶಿಕ್ಷೆ ವಿಧಿಸು ಕಂದಾ—ವಿಧಿಸು.

(ಚನ್ನಕ್ಕನೊಡನೆ ಶಿವನು ಲಿಂಗದಲ್ಲಿ ಐಕ್ಯನಾಗುತ್ತಾ ಇದ್ದಾನೆ, ಹೋಳಾಗಿದ್ದ ಲಿಂಗ ಮತ್ತೆ ಸೇರಿಕೊಳ್ಳುತ್ತಾ ಇದೆ. ಅದ ಕಂಡು ಭ್ರಾಂತನಾಗುತ್ತಾನೆ ಶಿವದೇವ.)

ಶಿವದೇವ–ನಿಲ್ಲು ಮಗಳೆ, ನಿಲ್ಲು—ನಿಲ್ಲು. ನಿಶ್ಚಲವಾದ ನಿನ್ನ ಮನವರಿಯದೆ, ನಿಂದಿಸಿ, ನೋಯಿಸಿದ ನಿನ್ನೀ ನೀಚ ತಂದೆಯನ್ನು ಅನುಗ್ರಹಿಸು.

ಶಿವ– ಮಕ್ಕಳ ಮನಸ್ಸಿನ ಪರಿಶುದ್ಧತೆ ಎಂತಹುದೆಂದು ಇನ್ನಾದರೂ ಅರಿತುಕೊ ಶಿವದೇವ. ಬೆಣ್ಣೆಯ ಮುದ್ದೆಯಂತಹ ಆ ಮನಸ್ಸು ರಾಗ-ದ್ವೇಷಗಳನ್ನರಿಯದ ನಿರ್ವಿಕಾರ ನಿರ್ಮಲ ಪುಷ್ಪಗಳದ್ದಂತೆ. ಅಂತಹ ಆ ಸರಳ ಮನಸ್ಸಿನ ಏಕಾಗ್ರತೆಯಲ್ಲಿ ಪ್ರಸನ್ನ ಪ್ರಕೃತಿಯೇ ವಿಕಾಸಿತಗೊಂಡಿರುತ್ತದೆ. ಅಂತಹ ಪರಿಶುದ್ಧ ಮನಸ್ಸು ನೊಂದಲ್ಲಿ ಪರಿಣಾಮ ಪರಾಕಾಷ್ಠೆಯನ್ನೇ ಮುಟ್ಟುತ್ತದೆ. ಇದುವರೆಗೂ ಯಾರ ಯಾವ ಒಲಿಮೆಗಾಗಿ ನೀನು ಕೇವಲ ಸಂಪ್ರದಾಯಬದ್ಧವೆನಿಸಿದ ಅಂಧಾನುಕರಣೆಗಳ ಪೂಜಾ ಕೈಂಕರ್ಯಗಳಲ್ಲಿ ನಿರತನಾಗಿದ್ದೆಯೊ, ಅಂತಹ ಆ ನಿನ್ನ ಒಲಿಮೆಯ ಪ್ರತಿ ಚೇತನ ನಿನ್ನ ಮೌಢ್ಯದಿಂದ ನೋಡಿತು. ಆದರೂ ಆ ನೋವಿನ ಪ್ರತಿಕ್ರಿಯೆಯನ್ನು ಬಗೆಯದೆ ಅದರ ಅನುಪಮ ಪ್ರಸ್ಥಾನದತ್ತ ನಿರ್ಗಮಿಸುತಿದೆ.

ಶಿವದೇವ–ದೇವ ದೇವ, ನನ್ನ ಅಜ್ಞಾನಕ್ಕೆ ಪ್ರಾಯಶ್ಚಿತ್ತ ನೀಡಿ, ಅಪರಾಧಕ್ಕೆ ಶಿಕ್ಷೆ ವಿಧಿಸು. ಆದರೆ, ನನ್ನೀ ಏಕಮಾತ್ರ ಕಂದನನ್ನು ಮಾತ್ರ ನನ್ನಿಂದ ಕಿತ್ತುಕೊಳ್ಳಬೇಡ ಪ್ರಭು—ಕಸಿದುಕೊಳ್ಳಬೇಡ... ಮಗಳೆ.... ಚನ್ನಕ್ಕ....

ಚನ್ನಕ್ಕ– ನೀನಿದುವರೆಗೆ ಇವಳ ಮೇಲಿಟ್ಟಿದ್ದ ಮಮತಾ ಮೋಹಗಳನ್ನು ಇನ್ನಾದರೂ ಈ ಕಲ್ಲಿನಾಥನ ಅನಂತತೆಯ ಅಂತರ್ಯದತ್ತ ಹರಿಸಪ್ಪಾಜಿ. ನೀನು—ನಾನೆಂಬ ಉಭಯ ಸಂಬಂಧವರಿತು, ನಮ್ಮಿಬ್ಬರ ತಂದೆ ಮಗಳ ಋಣ ಸಂಬಂಧವನ್ನು ಕಡಿದುಕೊ. ನಿನ್ನ ಪಿತೃ ಋಣದ ಕಡೆಯ ನಮಸ್ಕಾರವನ್ನು ಸಲ್ಲಿಸಿಕೊ. ನೀನಿನ್ನು ಶಾಂತನಾಗು, ಸಮಾಧಾನ ಚಿತ್ತದಿಂದ, ಆತ್ಮಾನುಸಂಧಾನದಿಂದ ಶೂನ್ಯದಲ್ಲಿ ಶೂನ್ಯವಾಗಿ, ಲಯದಲ್ಲಿ ಲಯವಾಗಿ, ಐಕ್ಯದಲ್ಲಿ ಐಕ್ಯನಾಗಲು ಯತ್ನಿಸು.

(ಚನ್ನಕ್ಕ ಪರಶಿವನೊಡನೆ ಲಿಂಗದಲ್ಲಿ ಐಕ್ಯಳಾಗುವಳು. ಅವಳ ಶಿರೋಭಾಗ ಇನ್ನೇನು ಲಿಂಗದಲ್ಲಿ ಮರೆಯಾಗಬೇಕೆನ್ನುವುದರಲ್ಲಿ ಶಿವದೇವ ಧಾವಿಸಿ ಅವಳ ಜಂಡಿಕೆಯನ್ನು ಹಿಡಿಯುವನು.)

ಶಿವದೇವ-ಮಗಳೆ.... ಚನ್ನಕ್ಕ....ಮಗಳೆ....[ಲಿಂಗದ ಮೇಲ್ಭಾಗದಲ್ಲಿ ಚಂಡಿಕೆ ಮಾತ್ರ ಉಳಿಯುವುದು]....ಮಗಳೆ....ಇನ್ನೆಲ್ಲಿ ಮಗಳು ಈ ಅಜ್ಞಾನಿಗೆ? ಇನ್ನೆಲ್ಲಿ ಮಗಳು ಈ ಅವಿವೇಕಿಗೆ? ಈ ಮಂದಭಾಗ್ಯನಿಗೆ ಮಗಳಿನ್ನೆಲ್ಲಿ? ವಿಶ್ವ ಜ್ಯೋತಿಯಲ್ಲಿ ಐಕ್ಯಗೊಂಡ ಅವಳ ಆತ್ಮಜ್ಯೋತಿ—ತನ್ನ ಅವಶೇಷದ ಈ ಚಂಡಿಕೆಯನ್ನು ಮಾತ್ರ ಬಿಟ್ಟುಹೋಯಿತು.... ಚಂಡಿಕೆ!....ಚಲುವಿನ ಚಂಡಿಕೆ!! ...ಚನ್ನಕ್ಕನ ಚಲುವಿನ ಚಂಡಿಕೆ!!... ಹ್ಹಹ್ಹಹ್ಹ ...ಪ್ರಭೂ, ಪ್ರಳಯಲೋಚನ, ಈ ಪಾಪಿಯ ಪಾಪಿಯ ಪಾಪಕ್ಕೆ ತಕ್ಕ ಪ್ರಾಯಃಶ್ಚಿತ್ತ ವಿಧಿಸು....ಹುಂಹುಂಹುಂ....ಪ್ರಾಯಃಶ್ಚಿತ್ತಕ್ಕೂ ಪಾತ್ರತೆಯಿಲ್ಲದ ಈ ಪಿಶಾಚ ಜನ್ಮಕ್ಕೆ ಧಿಕ್ಕಾರ—ಧಿಕ್ಕಾರ!!....ಮಗಳೆ, ಚನ್ನಕ್ಕ, ನಿನ್ನ ಕೊಡುಗೈಯ ಕೀರ್ತಿ ಕೋಳೂರ ಕೀರ್ತಿಯನ್ನು ಎತ್ತಿ ಹಿಡಿಯಲಿ ಕೋಳೂರ ಕಲ್ಲಿನಾಥನಲ್ಲಿ ಐಕ್ಯಳಾದ ನನ್ನ ಕೂಸೆ "ಕೋಳೂರ ಕೊಡಗೂಸು" ಎಂಬ ಹೆಸರು ನಿನಗೆ ಚಿರಸ್ಥಾಯಿಯಾಗಲಿ, ನಿನ್ನ ಹೆಸರನ್ನು ಉಸುರುತ್ತ—ಉಸುರುತ್ತಾ ನನ್ನುಸಿರೂ ಉಡುಗಿಹೋಗಲಿ....ಉಫ಼ೆ ಉಫ಼ೆ!... ಕೋಳೂರು ಕೊಡಗೂಸಿಗೆ—ಉಫ಼ೆ ಉಫ಼ೆ!! ಕೋಳೂರು ಕೊಡಗೂಸಿಗೆ—ಉಫ಼ೆ ಉಫ಼ೆ!! ಕೋಳೂರು ಕೊಡಗೂಸಿಗೆ ಉಫ಼ೆ ಉಫ಼ೆ!!....

(ಎಂದುಸುರುತ್ತ ಉಸುರುತ್ತಾ ಹಾಗೆಯೇ ಉಸಿರುಡುಗಿ ಬೀಳುವನು ಶಿವದೇವ. ಅವನ ಹಸ್ತ ಲಿಂಗದ ಪೀಠದಲ್ಲಿನ ತಳಭಾಗದಲ್ಲಿ ನಿಲ್ಲುವುದು.)

ಓಂ ಶಾಂತಿ ಶಾಂತಿ ಶಾಂತಿಃ

ಶ್ರೀ ನಂಜುಂಡೇಶ್ವರ ಬೇಕರಿ ಮತ್ತು ಕಾಂಡಿಮೆಂಟ್ಸ್

★ ಬೇಕರಿ ★	★ ಕಾಂಡಿಮೆಂಟ್ಸ್ ★
ಉತ್ತಮವಾದ ಬ್ರೆಡ್, ಬನ್, ಕೇಕ್, ಪಪ್ಸ್ ಮತ್ತು ಎಲ್ಲಾ ವಿಧವಾದ ಬಿಸ್ಕತ್ತುಗಳ ತಯಾರಕರು	ಅಪ್ಪಟ ತುಪ್ಪದಿಂದ ತಯಾರಿಸಿದ ಎಲ್ಲಾ ಸಿಹಿ ಮತ್ತು ಖಾರಾ ತಿಂಡಿಗಳ ತಯಾರಕರು.
ಚಿಕ್ಕಪೇಟೆ, ತುಮಕೂರು	ಅಶೋಕ ರಸ್ತೆ, ತುಮಕೂರು

ಶ್ರೀ ನಂಜುಂಡೇಶ್ವರ ರೆಸ್ಟೋರೆಂಟ್

ಉತ್ತರ ಮತ್ತು ದಕ್ಷಿಣ ಭಾರತದ ತಿಂಡಿ ತಿನಿಸುಗಳಿಗಾಗಿ

ಊಟ ಮತ್ತು ವಸತಿಗಾಗಿ ಶ್ರೀ ನಂಜುಂಡೇಶ್ವರ ಹೋಟೆಲ್

ಒಮ್ಮೆ ಸಂದರ್ಶಿಸಿರಿ,

ಬಿ. ಹೆಚ್. ರಸ್ತೆ, ಶ್ರೀ ಜಯದೇವ ಹಾಸ್ಟಲ್ ಕಟ್ಟಡ, ತುಮಕೂರು.

ಏಪ್ರಿಲ್ ಸಂಚಿಕೆಯಿಂದ ಮುಂದುವರಿದಿದೆ

ವೃದ್ಧಾಪ್ಯದ ಕಾಯಿಲೆಗಳು

—ಡಾ॥ ಎಚ್. ಡಿ. ಚಂದ್ರಪ್ಪಗೌಡ, ಎಂ. ಎಸ್

62, ಶ್ರೀನಿವಾಸ ನಿಲಯ, ಮಿಷನ್ ಕಾಪೌಂಡು ಶಿವಮೊಗ್ಗ-577201

ಡಯಾಬಿಟಿಸ್: ನಾವು ಸಾಮಾನ್ಯವಾಗಿ ಸೇವಿಸುವ ಆಹಾರ ಜೀರ್ಣಾಂಗಗಳಲ್ಲಿ ಪಚನವಾದ ನಂತರ ಗ್ಲೂಕೋಸ್‌ನಂತಹ ಸರಳ ಸಕ್ಕರೆಯಾಗಿ ರಕ್ತಗತವಾಗುತ್ತದೆ. ಶರೀರದ ಪ್ರತಿಯೊಂದು ಜೈವಿಕ ಕ್ರಿಯೆಗೂ ಗ್ಲೂಕೋಸ್ ಇಂಧನ. ಜೀವಕೋಶಗಳೊಳಗೆ ಅದರ ಚಲನವನ್ನು ನಿಯಂತ್ರಿಸುವ ದ್ವಾರಪಾಲಕನ ಕೆಲಸವನ್ನು ಇನ್ಸುಲಿನ್ (INSULIN) ಎಂಬ ರಸದೂತ (HORMONE) ನಡೆಸುತ್ತದೆ. ಮೇದೋಜೀರಕ ಗ್ರಂಥಿಯಲ್ಲಿ ಹರಡಿಕೊಂಡಿರುವ "ದ್ವೀಪ ಜೀವಕೋಶ" ಗಳಲ್ಲಿ ಇನ್ಸುಲಿನ್ ಉತ್ಪಾದನೆಯಾಗುತ್ತದೆ. ಯಾವುದೇ ಕಾರಣದಿಂದ ಇನ್ಸುಲಿನ್ ಕೊರತೆ ಅಥವಾ ಅದರ ಕಾರ್ಯಶೀಲತೆಯಲ್ಲಿ ಕುಂದುಂಟಾದರೆ, ಜೀವಕೋಶಗಳಲ್ಲಿನ ಕ್ರಿಯೆಗಳಿಗೆ ಇನ್ಸುಲಿನ್ ದೊರೆಯದೆ, ರಕ್ತಗತವಾದ ಗ್ಲೂಕೋಸ್ ರಕ್ತದಲ್ಲೇ ಉಳಿದುಕೊಳ್ಳುತ್ತದೆ. ಇದರಲ್ಲಿ ಕೆಲಭಾಗ ದೇಹದ ಕೆಲವು ಅಂಗಗಳಲ್ಲಿ ಶೇಖರಣೆಯಾಗಬಹುದು. ಇನ್ನುಳಿದದ್ದು ಮೂತ್ರದ ಮೂಲಕ ಹೊರಬೀಳುತ್ತದೆ. ಜೀವಕೋಶಗಳು ಅಕ್ಷರಶಃ ಗ್ಲೂಕೋಸ್‌ನ ಕಡಲಿನಲ್ಲೇ ತೇಲುತ್ತಿದ್ದರೂ ಅದನ್ನು ಬಳಸಲಾರದೆ ಬಳಲುತ್ತವೆ. ಇದು, ಡಯಾಬಿಟಿಸ್ ಉಂಟಾಗುವ ರೀತಿ.

ಲಕ್ಷಣಗಳು: ಅತಿಯಾದ ಬಾಯಾರಿಕೆ, ಹಸಿವು, ಪದೇ ಪದೇ ಮೂತ್ರ ಹೂಡುವಂತಾಗುವುದು, ಅತಿಯಾದ ನಿಶ್ಶಕ್ತಿ, ದಿನೇ ದಿನೇ ಬಡಕಲಾಗುವುದು ಮೈಮೇಲೆ ಕೀವುಗಟ್ಟಿ ಕುರಗಳಾಗುವುದು, ಜನನಾಂಗಗಳಲ್ಲಿ ತುರಿಕೆ– ಇವು ಡಯಾಬಿಟಿಸ್‌ನ ಪ್ರಮುಖ ಚಿನ್ಹೆಗಳು. ಮೂತ್ರ ಮತ್ತು ರಕ್ತ ಪರೀಕ್ಷೆಗಳಿಂದ ಡಯಾಬಿಟಿಸ್ ಇರುವುದನ್ನು ಗುರುತಿಸಲಾಗುತ್ತದೆ.

ಡಯಾಬಿಟಿಸ್‌ನ್ನು ಹಿಡಿತದಲ್ಲಿರಿಸಲು ಸಾಧ್ಯವೆ? ಡಯಾಬಿಟಿಸ್ ಇದ್ದವರು ವೈದ್ಯರಲ್ಲಿ ತಪಾಸಣೆ ಮಾಡಿಸಿಕೊಂಡು ಅವರ ಕಾಯಿಲೆಗೆ ಒಗ್ಗುವ ಸಮತುಲಿತ ಪಥ್ಯಾಹಾರವನ್ನು ರೂಢಿಸಿ ಕೊಳ್ಳಬೇಕು. ಸೂಕ್ತ ರೀತಿಯ ವ್ಯಾಯಾಮ, ಯೋಗ ಚಿಕಿತ್ಸೆ ಸಹಾ ಡಯಾಬಿಟಿಸ್‌ನ್ನು ಹಿಡಿತದಲ್ಲಿರಿಸಲು ಸಹಾಯಮಾಡುತ್ತದೆ. ವಯಸ್ಸಿಗರ ಡಯಾಬಿಟಿಸ್‌ನ್ನು ನಿಯಂತ್ರಿಸುವಲ್ಲಿ ಹಲವು ತೆರನ ಬಾಯಿಂದ ನುಂಗುವ ಗುಳಿಗೆಗಳು ಈಗ ಲಭ್ಯವಿದ್ದು, ಕಟ್ಟುನಿಟ್ಟಾದ ಪಥ್ಯಾಹಾರ ಮತ್ತು ಮದ್ದುಗಳ ಸೇವನೆಯಿಂದ ಮುಕ್ಕಾಲು ಪಾಲು ಡಯಬಿಟಿಕರಿಗೆ ಯಶಸ್ವಿ ಚಿಕಿತ್ಸೆ ನಡೆಸಲು ಸಾಧ್ಯ

ವಾಗುತ್ತದೆ. ಈ ರೀತಿಯ ಮದ್ದುಗಳಿಗೆ ಮಣಿಯದ ಡಯಾಬಿಟಿಕರು ಹಾಗೂ ತೀರ ಎಳೇ ವಯಸ್ಸಿನ ಡಯಾಬಿಟಿಕರಿಗೆ ಪ್ರತಿದಿನ ಇನ್ಸುಲಿನ್ ಚುಚ್ಚುಮದ್ದಿನ ಅವಶ್ಯಕತೆ ಇರುತ್ತದೆ.

ಡಯಾಬಿಟಿಸ್ ಶುರುವಾಗಿ ಬಹಳ ಕಾಲ ಚಿಕಿತ್ಸೆಗೊಳಗಾಗದಿದ್ದರೆ ಕಣ್ಣು, ರಕ್ತ ನಾಳಗಳು, ನರಜಾಲ, ಮೂತ್ರಪಿಂಡ, ಹೃದಯ, ಮತ್ತಿತರ ಅವಯುಗಳಲ್ಲಿ ತೊಡಕುಗಳಾಗುತ್ತವೆ. ಡಯಾಬಿಟಿಸ್ ಹಿಡಿತದಲ್ಲಿರದವರ ಗಾಯಗಳು ಬೇಗ ವಾಸಿಯಾಗುವುದಿಲ್ಲ. ಬಹಳ ಸಮಯ ನಿರ್ಲಕ್ಷಿಸಿದ ಡಯಾಬಿಟಿಕರು ಕೆಲಸಾರಿ ಮೂರ್ಛಿತರಾಗಿ ಪ್ರಾಣಾಪಾಯವೂ ಆಗಬಹುದು.

ಡಯಾಬಿಟಿಸ್ ಯಾವ ವಯಸ್ಸಿನಲ್ಲಿಯಾದರೂ; ಯಾರಿಗಾದರೂ ಬರಬಹುದಾದರೂ 60-70ರ ವಯಸ್ಸು ಮೀರಿದವರಲ್ಲೇ ಮುಕ್ಕಾಲು ಭಾಗ ಡಯಾಬಿಟಿಸ್ ಆದವರು ಇರುತ್ತಾರೆ. ಕುಟುಂಬದಲ್ಲಿ ಹತ್ತಿರದ ರಕ್ತಸಂಬಂಧಿಗಳಲ್ಲಿ ಡಯಾಬಿಟಿಸ್ ಆಗಿರುವುವರ ಪೀಳಿಗೆಯವರಲ್ಲಿ ಡಯಾಬಿಟಿಸ್ ಉಂಟಾಗುವ ಸಾಧ್ಯತೆ ಹೆಚ್ಚು. ಸ್ಥೂಲಕಾಯ ಸಹಾ ಡಯಾಬಿಟಿಸ್ ಪ್ರಕಟವಾಗುವುದಕ್ಕೆ ಸಹಕಾರಿ.

ಡಯಾಬಿಟಿಸ್ ಇರುವವರು ತಮ್ಮ ತೂಕದ ಏರಿಳಿತದ ಬಗೆಗೆ ನಿಗಾವಹಿಸಬೇಕು. ಆಗಿಂದಾಗ್ಗೆ ಮೂತ್ರ, ರಕ್ತ ಪರೀಕ್ಷೆ ಮಾಡಿಸಿಕೊಂಡು ಅವುಗಳಲ್ಲಿ ಕಂಡುಬರುವ ಸಕ್ಕರೆ ಮಟ್ಟದ ಏರು ಪೇರುಗಳಿಗನುಸಾರ ಆಹಾರ ಮತ್ತು ಮದ್ದಿನ ಪ್ರಮಾಣದಲ್ಲಿ ಬದಲಾವಣೆ ಮಾಡುತ್ತಿರ ಬೇಕಲ್ಲದೆ ಆಗಿಂದಾಗ್ಗೆ ವೈದ್ಯರಿಂದ ತಪಾಸಣೆ ಮಾಡಿಸಿಕೊಳ್ಳಬೇಕು.

ಹೃದಯಾಘಾತ: ಪ್ರಪಂಚದಾದ್ಯಂತ ಜರುಗುತ್ತಿರುವ ಸಾವಿನ ಸಂಖ್ಯೆಗಳಲ್ಲಿ ಹೃದಯಾಘಾತ(HEART ATTACK-MYOCARDIAL INFARCT-ION) ಕ್ಕೆ ಮೊದಲ ಸ್ಥಾನವಿದೆ. ಹೃದಯಾಘಾತವಾದವರು ತಕ್ಷಣ ಸಾಯುತ್ತಾರೆಂಬ ನಂಬಿಕೆ ಇರುವುದಾದರೂ, ಸಕಾಲದಲ್ಲಿ ಸೂಕ್ತ ವೈದ್ಯಕೀಯ ನೆರವು ಮತ್ತು ಚಿಕಿತ್ಸೆ ದೊರೆತರೆ ಶೇಕಡ 85% ರಷ್ಟು ಹೃದಯಾಘಾತಕ್ಕೊಳಗಾದವರು ಚೇತರಿಸಿಕೊಳ್ಳಬಹುದು. ಎಳೆಯರಿಗಿಂತ ವಯಸ್ಸಾದವರೇ ಹೆಚ್ಚಾಗಿ ಈ ಕಾಯಿಲೆಗೆ ಬಲಿಯಾಗುವವರು.

ಯಾರಿಗೆ ಆಗಬಹುದು: ಸಾಮಾನ್ಯವಾಗಿ ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ 40 ವರ್ಷದ ಮೇಲ್ಪಟ್ಟ ವಯಸ್ಸಿನವರೇ ಈ ಕಾಯಿಲೆಗೆ ಹೆಚ್ಚಾಗಿ ಬಲಿಯಾಗುವುದು ಕಂಡು ಬಂದಿದೆ. ಕೊಬ್ಬಿನ ಅಂಶ ಹೆಚ್ಚಿರುವ ಆಹಾರ ವಸ್ತುಗಳ ಸೇವನೆ, ಜಡ ಜೀವನ ಕ್ರಮ, ಆಗಿಂದಾಗ್ಗೆ ಮಾನಸಿಕ ತುಮುಲ, ದುಗುಡ ದುಮ್ಮಾನ

ಗಳಿಗೊಳಗಾಗುವ ಔದ್ಯಮಿಕ ಆಡಳಿತಗಾರರು ವಕೀಲರು, ಇಂಜಿನಿಯರು ಮೊದಲಾದವರಲ್ಲಿ ಹೃದಯಾಘಾತದ ಪ್ರಕರಣಗಳು ಜಾಸ್ತಿ. ಆದರೂ ಇತ್ತೀಚಿನ ವರ್ಷಗಳಲ್ಲಿ ಮಧ್ಯಮ ವರ್ಗದವರೇ ಅಲ್ಲದೆ ಬಡ ಜನರಲ್ಲೂ ಸಹ ಈ ಕಾಯಿಲೆಗೆ ಬಲಿಯಾದವರಿದ್ದಾರೆ.

ಕಾರಣಗಳು: ಸ್ಥೂಲಕಾಯ ಪ್ರಾಣಿಜನ್ಯ ಕೊಬ್ಬಿನ ಅಂಶ ಹೆಚ್ಚಿರುವ ಆಹಾರ ಸೇವನೆ, ಧೂಮಪಾನ ಜಡ ಜೀವನ ಕ್ರಮ ಮತ್ತು ಆಧುನಿಕ ಜೀವನದ ಮಾನಸಿಕ ಒತ್ತಡದ ಕಾರಣಗಳೇ ಹೃದಯಾಘಾತದ ಪ್ರಕರಣಗಳಿಗೂ ಕಾರಣವೆನ್ನಬಹುದಾಗಿದೆ.

ಹೃದಯದ ಮಾಂಸ ಖಂಡಗಳಿಗೆ ರಕ್ತ ಒದಗಿಸುವ ಕಾರೋನರಿ ರಕ್ತನಾಳಗಳಲ್ಲಿ ಪೆಡಸಣೆ ಉಂಟಾಗಿ, ರಕ್ತದ ಸರಬರಾಜು ಕಡಿಮೆಯಾಗುವುದು ಇಲ್ಲವೆ ರಕ್ತ ಹೆಪ್ಪುಗಟ್ಟುವುದರಿಂದ ರಕ್ತ ಸಂಚಾರ ಸ್ಥಗಿತವಾಗುವುದೇ ಹೃದಯಾಘಾತದ ಪ್ರಮುಖ ಕಾರಣ.

ಲಕ್ಷಣಗಳು: ಹೃದಯಾಘಾತ ಸಂಭವಿಸುವ ಹಲವಾರು ದಿನಗಳ ಮೊದಲೇ ಕೆಲವು ಎಚ್ಚರಿಕೆಯ ಕುರುಹುಗಳು ಕಾಣಿಸಬಹುದು. ಎದೆಗೂಡಿನೊಳಗಡೆ ಒಂದು ತೆರನ ಇರಸು ಮುರಸು, ಎದೆ ಮಧ್ಯದ ಮೂಳೆ ಹಿಂದೆ ಒತ್ತಿದಂತಾ ನೋವು, ಆಗಿಂದಾಗ್ಗೆ ಗೋಚರಿಸಿ ಮಾಯವಾಗಬಹುದು. ಕೆಲಸಾರಿ ನೋವು ಭುಜ, ಕೈ, ಕತ್ತು ಮತ್ತು ದವಡೆಗಳತ್ತಲೂ ಪ್ರಸರಿಸದಂತಾಗುತ್ತದೆ. ಈ ನೋವು ಕೆಲವು ನಿಮಿಷಗಳಿಂದ ಹಲವು ಗಂಟೆಗಳವರೆಗೂ ಇರಲು ಸಾಧ್ಯ. ವಿಪರೀತ ಬೆವರು, ವಾಕರಿಕೆ, ವಾಂತಿ ಉಸಿರಾಟದ ತೊಂದರೆಗಳೂ ಸಹಾ ಉಂಟಾಗಬಹುದು. ರಕ್ತದೊತ್ತಡ ಕಡಿಮೆಯಾಗಿ ರೋಗಿ ಮೂರ್ಛೆ ಕಳೆದು ಕೊಳ್ಳಲೂ ಸಾಧ್ಯ. ಈ ಕುರುಹುಗಳು ಆಗಿಂದಾಗ್ಗೆ ತಲೆದೋರಿ ಮತ್ತು ಕಡಿಮೆಯಾಗಿ, ಕೆಲಸಮಯದ ನಂತರ ಮರುಕಳಿಸಬಹುದು.

ಮುಂಜಾಗ್ರತಾ ಕ್ರಮಗಳು: ಈ ರೀತಿಯ ಕುರುಹುಗಳಿದ್ದವರು ಕೂಡಲೇ ವೈದ್ಯರನ್ನು ಸಂಪರ್ಕಿಸಿ ಪರೀಕ್ಷಿಸಿ, ಅವರ ಸಲಹೆಯಂತೆ ನಡೆದುಕೊಳ್ಳಬೇಕು. ಸಾಕಷ್ಟು ವಿಶ್ರಾಂತಿ, ಮಿತವಾದ ವ್ಯಯಾಮ ಹೆಚ್ಚಿನ ದೈಹಿಕ ಹಾಗೂ ಮಾನಸಿಕ ಶ್ರಮಗಳೊಳಗಾದ ಜೀವನ ಕ್ರಮವನ್ನು ರೂಢಿಸಿಕೊಳ್ಳ ಬೇಕಾಗುತ್ತದೆ. ತೂಕವನ್ನು ಹಿಡಿತದಲ್ಲಿರಿಸಿಕೊಂಡು ಧೂಮಪಾನ, ಮದ್ಯಪಾನಗಳಂತ ದುಶ್ಚಟಗಳನ್ನು ತ್ಯಜಿಸಬೇಕು.

ಹೃದಯಾಘಾತವಾದಾಗ ಏನು ಮಾಡಬೇಕು ? : ಹೃದಯಾಘಾತವಾದವರನ್ನು ಸ್ವಲ್ಪವೂ ದೈಹಿಕ ಶ್ರಮವಾಗದಂತೆ ಅವರಿಗೆ ಹಿತವಾಗುವ ರೀತಿಯಲ್ಲಿ ಮಲ

ಗಿಸಿ ವಿಶ್ರಾಂತಿ ದೊರೆಯುವಂತೆ ಮಾಡಬೇಕು. ಕೂಡಲೇ ವೈದ್ಯರನ್ನು ಕರೆತರುವ ಇಲ್ಲವೇ ಹತ್ತಿರದ ಆಸ್ಪತ್ರೆಗೆ ಸಾಗಿಸುವ ಏರ್ಪಾಡು ಮಾಡಬೇಕು. ಉಸಿರಾಡಲು ಅನುಕೂಲವಾಗುವಂತೆ ಬಟ್ಟೆಗಳನ್ನು ಸಡಿಲಿಸಿ, ಒಳ್ಳೆಗಾಳಿ ದೊರೆಯುವಂತೆ ಮಾಡಬೇಕು. ಸಾಗಿಸುವಾಗ ನಡೆಯಲೂ ಅವಕಾಶ ಕೊಡದೆ ಕೈಗಳಲ್ಲಿ ಎತ್ತಿಕೊಂಡು ಇಲ್ಲವೆ ಕೈಗಾಡಿಯಲ್ಲಿ ಸಾಗಿಸಬೇಕು.

ಎಚ್ಚರವಿಡಿ! ಹೃದಯಾಘಾತದ ಕುರುಹುಗಳಿರುವವರು ಅವರ ವಯಸ್ಸು, ಲಿಂಗ, ಶರೀರದ ಚೌಕಟ್ಟಿಗೆ ಎತ್ತರಗಳಿಗೆ ನಿಗದಿತವಾದ ತೂಕದ ಮಟ್ಟವನ್ನು ಕಾಪಾಡಿಕೊಳ್ಳಲು ಶ್ರಮಿಸಬೇಕು. ಯಾವಕಾರಣಕ್ಕಾದರೂ ಮಾನಸಿಕ ಉದ್ವೇಗಕ್ಕೊಳಗಾದ ಶಾಂತ ಮನೋಭಾವ ಬೆಳಸಿಕೊಳ್ಳಬೇಕು. ಆಹಾರ, ವಿಹಾರ, ವ್ಯಾಯಾಮ ಕೆಲಸ ಕಾರ್ಯ, ಲೈಂಗಿಕ ಜೀವನ, ಧೂಮಪಾನ, ಮದ್ಯಪಾನ- ಇವುಗಳಲ್ಲಿ ಮಿತಿಮೀರಿದ ಜೀವನ ಕ್ರಮಗಳನ್ನು ಅಳವಡಿಸಿಕೊಂಡಲ್ಲಿ ಹೃದಯಾಘಾತದ ಸಾಧ್ಯತೆಗಳನ್ನು ಮಿತಿಗೊಳಿಸಲು ಸಾಧ್ಯ.

-ಆಧಾರಿತ-



ಶುಂಠಿ : ಪ್ರಾಚೀನ ಸಂಬಾರ

—ಪ. ರಾಮಕೃಷ್ಣ ಶಾಸ್ತ್ರಿ
"ಶಿವಶಕ್ತಿ ನಿಲಯ", ಅಂಚೆ : ಮಚ್ಚಿನ–574295 (ದ.ಕ.)

ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಸಂಬಾರ ವಸ್ತುವಾಗಿ ಬಳಸಲ್ಪಡುತ್ತಿರುವ ಶುಂಠಿಯ ಹೆಸರು ಜಗತ್ತಿನಲ್ಲೇ ಪ್ರಖ್ಯಾತ. ನಮ್ಮ ಪುರಾತನ ವೈದ್ಯ ಗ್ರಂಥಗಳಲ್ಲೂ ಚೀನೀ ವೈದ್ಯ ಬ್ರಹ್ಮರೂ ಅದರ ನಾನಾ ಔಷಧೋಪಯೋಗಗಳ ಬಗೆಗೆ ಉಲ್ಲೇಖಿಸಿದ್ದಾರೆ. ಗ್ರೀಕ್ ಹಾಗೂ ರೋಮಿನ ವೈದ್ಯರೂ ಅದರ ಬಳಕೆಯನ್ನರಿತಿದ್ದರೆನ್ನುವುದಕ್ಕೆ ಆಧಾರಗಳಿವೆ. ಎಂಟನೆಯ ಹೆನ್ರಿ ಇಂಗ್ಲೆಂಡಿನ ರಾಜನಾಗಿದ್ದಾಗ ಪಸರಿಸಿದ ಪ್ಲೇಗಿನ ಹಾವಳಿಯನ್ನು ತಡೆಯಲು ಶುಂಠಿಯನ್ನು ಉಪಯೋಗಿಸಲಾಗಿತ್ತಂತೆ. ದಿನನಿತ್ಯದ ಅಡಿಗೆಯಲ್ಲಿ ಶುಂಠಿಯ ಹಲವು ವಿಧದ ಉಪಯೋಗಗಳುಂಟು. ಅಜೀರ್ಣವಾದರೆ ಶುಂಠಿಯ ತಂಬುಳಿ; ಉಪ್ಪಿನಕಾಯಿ, ಗರಮ್ ಮಸಾಲೆ, ಇವುಗಳಲ್ಲೆಲ್ಲ ಅದರ ಪಾತ್ರವಿದೆ. ಅದರಿಂದ ಪಾನಿಯಗಳೂ ಪೆಪ್ಪರಮೆಂಟುಗಳೂ ಕೂಡ ತಯಾರಾಗುತ್ತವೆ. ಅದನ್ನು ಚಹಾಕ್ಕೂ ಸೇರಿಸುವುದುಂಟು.

ಸರ್ವಕಾಲಿಕ ಸಸ್ಯವಾದ ಶುಂಠಿಯ ತವರು ದಕ್ಷಿಣ ಏಷ್ಯವೆಂದು ನಂಬಲಾಗಿದೆ. ಶುಂಠಿಯ ಜಾಗತಿಕ ಉತ್ಪನ್ನದ ಶೇ. ಹದಿನೈದು ಭಾಗ ಭಾರತದಲ್ಲಿ ಬೆಳೆಯುವುದಾದರೂ ವೆಸ್ಟ್ ಇಂಡೀಸಿನ ಜಮೇಕಾದಲ್ಲಿ ಬೆಳೆಯುವ ಶುಂಠಿ ಜಗತ್ತಿನಲ್ಲೇ ಶ್ರೇಷ್ಠವೆನಿಸಿದೆ. ಅದರ ಸುಧಾರಿತ ವ್ಯವಸಾಯ ಕಾಣಸಿಗುವುದು ಆಫ್ರಿಕದ ಸಿಯೋರ್ ಲಿಯೋನ್‌ನಲ್ಲಿ ಮಾತ್ರ. ಇದಲ್ಲದೆ ಮಲೇಶಿಯ, ಚೀನಗಳಲ್ಲೂ ಶುಂಠಿಯ ವ್ಯವಸಾಯವಿದೆ.

ಸಸ್ಯ ಶಾಸ್ತ್ರದಲ್ಲಿ 'ಜಿಂಜಿಬರ್ ಅಫಿಸಿನೇಲ್' ಎಂದು ಕರೆಯಲ್ಪಡುವ ಶುಂಠಿ ಜಿಂಜಿಬರೇಸಿ ಎಂಬ ಏಕದಳೀಯ ಸಸ್ಯವರ್ಗಕ್ಕೆ ಸೇರಿದೆ. ನಮ್ಮ ದೇಶದ ಆಂಧ್ರ ಪ್ರದೇಶ, ಕೇರಳ, ಗುಜರಾತ್, ಕರ್ನಾಟಕ, ಒರಿಸ್ಸಾ, ತ್ರಿಪುರಾ, ರಾಜಸ್ಥಾನ, ಮಹಾರಾಷ್ಟ್ರ, ಮಧ್ಯಪ್ರದೇಶ, ತಮಿಳುನಾಡು, ಪಶ್ಚಿಮ ಬಂಗಾಳ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಶುಂಠಿಯ ವ್ಯವಸಾಯ ಹಬ್ಬಿ ಹರಡಿದೆ. ಬಿಹಾರಿನ ರಂಗಪುರದಲ್ಲೂ ಅದರ ಅಲ್ಪ ಬೆಳೆಯಿದೆ. ನಮ್ಮ ದೇಶದಿಂದ ರಫ್ತಾಗುವ ಸಂಬಾರಗಳಲ್ಲಿ ಶುಂಠಿಗೆ ನಾಲ್ಕನೆಯ ಸ್ಥಾನ. ಇಲ್ಲಿ ಸುಮಾರು 30 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ 29 ಸಾವಿರ ಟನ್ ಶುಂಠಿಯ ಉತ್ಪಾದನೆಯಿದೆ.

ಸಮುದ್ರ ಮಟ್ಟದಿಂದ 5 ಸಾವಿರ ಅಡಿ ಎತ್ತರದವರೆಗೆ ಬೆಳೆಯುವ ಶುಂಠಿಗೆ ಸಾಕಷ್ಟು ತೇವಾಂಶವಿರುವ ನೀರಾವರಿ ಆಶ್ರಯ ಹಾಗೂ ನೆರಳು ಬೇಕಾಗುತ್ತದೆ. ನೂರು ಇಂಚಿಗಿಂತ ಅಧಿಕ ಮಳೆ ಬೀಳುವ ಪ್ರದೇಶಕ್ಕೆ ಒಗ್ಗಿಕೊಳ್ಳುವ ಅದು ಕರ್ನಾಟಕದ ಮಲೆನಾಡು ಮತ್ತು ಮಲಬಾರಿನಲ್ಲಿ ವಿಫುಲವಾಗಿ ಬೆಳೆಯುತ್ತದೆ. ಅದರ ಎಕರೆವಾರು ಉತ್ಪನ್ನ ನಾಲ್ಕು ಕ್ವಿಂಟಾಲುಗಳಾಗಿದ್ದರೆ ಕರ್ನಾಟಕದಲ್ಲಿ 5 ಕ್ವಿಂಟಾಲು ಬೆಳೆ ಬರುತ್ತದೆ.

ಕೇರಳದ ಅಂಬಲವಯಾಲು ಕೃಷಿ ಸಂಶೋಧನಾ ಕೇಂದ್ರದಲ್ಲಿ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಬೆಳೆಯುವ 19 ವಿಧದ ಶುಂಠಿ ತಳಿಗಳ ಪ್ರಾಯೋಗಿಕ ವ್ಯವಸಾಯ ನಡೆಸಲಾಗಿದೆ. ಈ ಪೈಕಿ ಬ್ರೆಜಿಲಿನ ರಿಯೊಡಿ ಜಾನ್ವೆರೋ ತಳಿ ಅಧಿಕ ಫಸಲು ಕೊಡುವುದೆಂದು ಗೊತ್ತಾಗಿದೆ. ವೈನಾಡ್, ನರಸಪಟ್ಣಂ, ಚೈನಾ, ಮಾರನ್, ಲೋಕಲ್ ಮೊದಲಾದುವು ಅಧಿಕ ಇಳುವರಿ ನೀಡುವ ಭಾರತದ ತಳಿಗಳು.

ಶುಂಠಿಯ ಬೇರಿನಲ್ಲಿ ಕಣ್ಣುಗಳಂತಹ ಭಾಗವಿದೆ. ಇದನ್ನು ಚಾಕುವಿನಿಂದ ಬೇರ್ಪಡಿಸಿ ಮಡಿಗಳಲ್ಲಿ ತೆಳ್ಳಗೆ ಹರಡಿ, ಅದರ ತೇವವನ್ನು ಕಾಪಾಡಲು ಮೇಲಿನಿಂದ 2-3 ಅಂಗುಲ ಮರಳನ್ನು ಸುರಿಯಬೇಕು. ಕಣ್ಣುಗಳಿಂದ ಮೊಳಕೆ ಹೊರಟ ಬಳಿಕ ಆ ಮೊದಲೇ ಉಳುಮೆಯಿಂದ ಹದ ಮಾಡಿ ಗೊಬ್ಬರ ಹಾಕಿ ಸಿದ್ಧಪಡಿಸಿದ ಭೂಮಿಯಲ್ಲಿ ಅದನ್ನು ನಾಟಿ ಮಾಡಬೇಕು. 10-12 ದಿನಗಳಲ್ಲಿ ಎಲೆಗಳು ಬರಲಾರಂಭಿಸುವಾಗ ನೆರಳು ಅಗತ್ಯವಿದೆ. ನೆರಳಿಗಾಗಿ ಹರಳಿನ ಗಿಡಗಳನ್ನು ನೆಡಬಹುದು. ಪೂರ್ಣವಾಗಿ ಶುಂಠಿ ಬೆಳೆಯಲು ಹತ್ತು ತಿಂಗಳು ಬೇಕಾದರೂ ಅರ್ಧಾಂಶವನ್ನು ಏಳು ತಿಂಗಳಲ್ಲಿ ಅಗೆದು ಉಳಿ ಬೆಳೆಗೆ ಬಿಡಬಹುದು. ಒಳ್ಳೆಯ ಬೆಳೆ ಎಂದರೆ ಎಕರೆಗೆ 30 ಕ್ವಿಂಟಾಲುವರೆಗೂ ಸಿಗುತ್ತದೆ.

ಗಿಡಕ್ಕೆ ಬೂಷ್ಟು ರೋಗ ಬರುತ್ತದೆ, ಕೀಟಗಳೂ ಹಾಳುಗೆಡಹುತ್ತವೆ. ರೋಗರಹಿತ ಬೀಜದ ಆಯ್ಕೆ, ರೋಗ ಬಂದ ಗಿಡಗಳನ್ನು ಕಿತ್ತೆಸೆಯುವುದು ಅಗತ್ಯ.

ಅಗೆದು ತೆಗೆದ ಬಳಿಕ ಶುಂಠಿಯನ್ನು ಮಾರುಕಟ್ಟೆಗೆ ಕಳುಹಿಸುವ ವಿಧಾನ ಒಂದೊಂದು ಪ್ರದೇಶದಲ್ಲಿ ಒಂದೊಂದು ಬಗೆ. ಹಸಿ ಬೇರನ್ನು ನಾಲ್ಕು ದಿನ ಒಣಗಿಸಿ, ನೀರಿನಲ್ಲಿ ಚೆನ್ನಾಗಿ ತೊಳೆದು ಸಿಪ್ಪೆ ಸುಲಿದು ಸುಣ್ಣದ ನೀರಿನಲ್ಲಿ ಮುಳುಗಿಸುಡುತ್ತಾರೆ. ಬಳಿಕ ಗಂಧಗ ಧೂಪ ಹಾಕಿರುವ ಗೂಡಿನಲ್ಲಿ ಅರ್ಧ ದಿನ ಇರಿಸಿ ಒಣಗಿಸುತ್ತಾರೆ. ಇದಕ್ಕೆ ಹುಳಗಳ ಬಾಧೆ ಇಲ್ಲ, ಗುಜರಾತಿನ ಸುರತದ ಶುಂಠಿಗೆ ಸುವಾಸನೆ ಹೆಚ್ಚು. ಹಸಿ ಶುಂಠಿಯನ್ನು ನೀರಿನಲ್ಲಿ ತೊಳೆದು, ಕಪ್ಪೆಚಿಪ್ಪುಗಳಿಂದ ತೊಗಟೆಯನ್ನು ಪ್ರತ್ಯೇಕಿಸಿ, ಒಣಗಿಸುತ್ತಾರೆ. ಆಮೇಲೆ ನಾಲ್ಕು ದಿನಕ್ಕೊಮ್ಮೆ ನೀರಿನಲ್ಲಿ ನೆನೆಯಿಸಿ

ಕೈಯಿಂದ ತಿಕ್ಕಿಯೇ ಸಿಪ್ಪೆ ತೆಗೆಯುವುದು ಅಲ್ಲಿನ ಕ್ರಮ. ಒಣಗಿದಾಗ ಹಸಿ ಶುಂಠಿ ತನ್ನ ಶೇ 85 ಪಾಲು ತೂಕ ಕಳೆದುಕೊಂಡಿರುತ್ತದೆ.

ಶುಂಠಿಯಲ್ಲಿ ಅಧಿಕಾಂಶವಿರುವುದು ಪಿಷ್ಟ ಪದಾರ್ಥ, ಅದಕ್ಕೆ ಸುವಾಸನೆ ತಂದಿರುವುದು ಶೇ 0.25—30.0 ರಷ್ಟಿರುವ ಹಳದಿ ವರ್ಣದ ಚಂಚಲ ತೈಲ. ಇದರಲ್ಲಿ ಜಿಂಜಿರಾಲ್ ರಾಸಾಯನಿಕ ಮತ್ತು ರಾಳವಿದೆ. ಒಣ ಶುಂಠಿಯನ್ನು ಹುಡಿ ಮಾಡಿ ಹಬೆಯಿಂದ ಭಟ್ಟಿಯಿಳಿಸುತ್ತಾರಲ್ಲದೆ ಮದ್ಯಸಾರ, ಅಸಿಟೋನ್ ಮುಂತಾದ ರಾಸಾಯನಿಕಗಳ ಮೂಲಕವೂ ಓಲಿಯೊರೆಸಿನ್ ಎಂಬ ಸಂಬಾರ ಸಾರವನ್ನು ಪ್ರತ್ಯೇಕಿಸುತ್ತಾರೆ. ಪಾಶ್ಚಾತ್ಯರಿಗೆ ಅಡಿಗೆಗೆ, 'ಕಾರ್ಮಿನೇಟಿವ್ ಮಿಕ್ಸ್‌ಚರ್' ಔಷಧಿಗಳಿಗೆ ಈ ಸಾರ ಅವಶ್ಯ. ಶುಂಠಿಯ ತೈಲ ಸಂಧಿವಾತಕ್ಕೆ ರಾಮಬಾಣ. ಅಗ್ನಿಮಾಂಧ್ಯ, ಜೀರ್ಣಾಂಗ ಬಾಧೆ, ಶ್ವಾಸನಾಳದ ತೊಂದರೆ, ಹಲ್ಲುನೋವು, ಶೀತ, ಮಧುಮೇಹ ಮೊದಲಾದವಕ್ಕೆಲ್ಲ ದೇಶಿಯ ಚಿಕಿತ್ಸಾ ಪದ್ಧತಿಯಲ್ಲಿ ಶುಂಠಿಯಿಂದ ಚಿಕಿತ್ಸೆ ಮಾಡುತ್ತಾರೆ. ಅದು ಜೀರ್ಣಕಾರಿ, ಸ್ವೇದಕಾರಿ, ಶುಂಠಿಯಿಂದ ಜಿಂಜರ್ ಬೀರ್, ಜಿಂಜರ್ ವಾಲ್ ಮುಂತಾದ ವಿದೇಶೀ ಮದ್ಯಗಳೂ ಅರ್ಕಗಳೂ ತಯಾರಾಗುತ್ತವೆ.

ಜಪಾನಿನಲ್ಲಿ ಬೆಳೆಯುವ ಜಿಂಜಿಬರ್ ಮೊಯಿಗಾ ಎಂಬ ಯಾವ ಗುಣವೂ ಇಲ್ಲದ ಬೇರನ್ನು ಧೂರ್ತ ವ್ಯಾಪಾರಿಗಳು ಶುಂಠಿಗೆ ಕಲಬೆರಕೆ ಮಾಡುತ್ತಾರೆ. ●

ವೈರವ ತೊರೆ

—ಪ್ರೊ|| ಸಂಗಮೇಶ ಹಂಡಿಗಿ, ಎಂ.ಎ., ಡಿ.ಪಿ.ಎ.
ಗಾ|| ಸಂಪಾದಕರು, 'ಮಾಮಿಡಿ' ತ್ರೈಮಾಸಿಕ, ಕಸಬಾ ಚಾವಡಿ ಹತ್ತಿರ, ನವಿಲುಗುಂದ–582208

ಅನ್ಯರ ಬಗೆಗೆ ಹೊಟ್ಟೆಯಲ್ಲಿ ಕಿಚ್ಚು ತುಂಬಿಕೊಂಡು
ಮಾತ್ಸರ್ಯದ ಕಿಡಿ ಕಾರುತ್ತ
ಮನದಲ್ಲಿ ದ್ವೇಷದ ಹೊಗೆ ಹೊತ್ತುಕೊಂಡು
ಗುಡಿಗುಂಡಾರಗಳಿಗೆ ಅಲೆಯುವದು ವ್ಯರ್ಥ ಕಂಡಯ್ಯಾ
ಹಲವು ಹರಕೆಗಳ ಹೊತ್ತು ವ್ರತ ನಿಯಮಗಳು ನಿಷ್ಫಲವಯ್ಯಾ
ವೈರವ ತೊರೆಯದೆ ಸ್ವೈರವಾಗಿ
ಲಿಂಗಕ್ಕೆರೆದ ಪಂಚಾಮೃತಾಭಿಷೇಕವು
ನೆತ್ತರಿನ ಧಾರೆಯಾಗುವದು ನಿಶ್ಚಯ ನೋಡಾ
ಸಂಗಮೇಶ ಪ್ರಿಯ ನಿಡುಮಾಮಿಡಿ ಚನ್ನಬಸವೇಶ್ವರಾ

ದೇವತೆಗಳ ಆಗಮನ

—"ಕನ್ನಡ ಕವಿ ಕಾಳಿದಾಸ" ಶ್ರೀ ಮೊಟಗಿ ಮಲ್ಲಿಕಾರ್ಜುನ, ಅಥಣಿ.

ಅಖಿಲ ಬ್ರಹ್ಮಾಂಡದಲ್ಲಿನ ಸಕಲ ಲೋಕಗಳೂ ಸತ್ಯಮಯ ಈ ಸೃಷ್ಟಿಯೊಳಗಣ ಆ ಸ್ವರ್ಗದ ದೇವತೆಗಳೂ ನಿಖಿಲ ಜೀವಾತ್ಮರುಗಳೂ—ಒಟ್ಟಾರೆ ಈ ಸರ್ವ ಲೋಕಗಳ ಸಚರಾಚರಾತ್ಮಕವಾದುದೆಲ್ಲವೂ ಮಹಾ ತತ್ವಪೂರಿತವಾದ ಮಹಾಲಿಂಗದಲ್ಲಿ ಎರಕ ಹೊಯ್ದಂತಿದೆ.

ಜೀವೋತ್ಪತ್ತಿಗೆ ಮುನ್ನ ನಾವು ವಾಸಿಸುತ್ತಿರುವ ಈ ಸೃಷ್ಟಿ ಜಡಪೂರಿತವಾಗಿತ್ತು. ಬ್ರಹ್ಮಾಂಡದ ಸಕಲ ಲೋಕಗಳೆಂಬೀ ಗ್ರಹಗಳ ಮಾಲಿಕೆಯಲ್ಲಿ ಈ ಸೃಷ್ಟಿಯೊಂದೇ ಜಡವಸ್ತುವಾಗಿ ಕಂಡಿತು. ಆಗ ಮಹಾ ತ್ಯಾಗಮಯಿಯಾದ ದಿವ್ಯಶಕ್ತಿ ದೇವಿಯು ತನ್ನನ್ನೇ ಈ ಸೃಷ್ಟಿಯಲ್ಲಿ ತೂರಿಕೊಂಡಳು. ಈ ಪರಾಶಕ್ತಿಮಾತೆಯ ಆ ಪುಣ್ಯ ತ್ಯಾಗದ ಫಲದಿಂದ, ಮಾತೃವಾತ್ಸಲ್ಯಪೂರಿತ ಆಕೆಯ ದಿವ್ಯ ಕೃಪಾ ವಿಶೇಷ ದೃಷ್ಟಿಯಿಂದ ಜಡವಸ್ತುವಾಗಿದ್ದ ಈ ಸೃಷ್ಟಿ ಪರಿವರ್ತನೆಗೊಂಡು ಚರಾಚರಾತ್ಮಕವೆನಿಸಿತು. ಆಗ ಈ ಸೃಷ್ಟಿ ಸಕಲ ಜೀವರಾಶಿಯ ಹುಟ್ಟಿಗೆ ಕಾರಣವಾಯಿತು. ಮುಂದೆ ಕೋಟ್ಯಂತರ ವರ್ಷಗಳು ಕಳೆದಮೇಲೆ ಹಂತಹಂತವಾಗಿ ಮಾರ್ಪಾಟುಗೊಂಡ ಜೀವಿಯು ಮಂಗನಾಗಿ ಬರಬರುತ್ತ ಮಾನವ ರೂಪಕ್ಕೆ ಪರಿವರ್ತನಗೊಂಡಿತು. ಆಗಿನಿಂದಲೇ ಈ ಭೂಮಿಯಮೇಲೆ ಮಾನವ ಜೀವನಕ್ಕೆ ಅಸ್ತಿತ್ವವುಂಟಾಯಿತು. ಸ್ವರ್ಗವಾಸಿಗಳಾದ ಆ ದೇವತೆಗಳಿಗೆ ಪೀವಸ್ತುರೂಪಾದ ಪರಾತ್ಪರ ಶಿವನಲ್ಲಿ ಕೂಡಿಕೊಳ್ಳಬೇಕೆಂಬ ಇಚ್ಛೆಯುಂಟಾದಾಗ ಇವರು (ದೇವತೆಗಳು) ಭೂಮಿಯ ಮೇಲೆ ಜನಿಸಬೇಕಾಗುವುದುಂಟು. ಇದನ್ನು ಆತ್ಮನು ಪಸರಮಾತ್ಮಾವಸ್ಥೆಗೆ ಸೇರಬಯಸುವ ದಿವ್ಯೋತ್ಕೃಷ್ಟದ ಪರಮಾರ್ಥಪೂರಿತ ದೇವಪಥವೆಂದು ಹೇಳಬಹುದು. ಅಂತೆಯೆ ಈ ಪೃಥ್ವಿ ಪರಮ ಸಾಧನೆಯ ಕ್ಷೇತ್ರ.

ಸ್ವರ್ಗಲೋಕದ ದೇವತೆಗಳಿಗೂ ಮಾನವರಿಗೂ ಮೋಕ್ಷಕ್ಕೆ ಕೇಂದ್ರ ಬಿಂದುವಾಗಿ ನಿಂತಿದೆ ಈ ಭೂಮಿ. ಅಂತೆಯೆ ಅನಾದಿಕಾಲದಿಂದಲೂ ದೇವಲೋಕದ ದೇವತೆಗಳು ಈ ಭೂಮಿಯಮೇಲೆ ಅವತರಿಸಿ ಬಂದ ಉದಾಹರಣೆಗಳು ವಿಶ್ವೇತಿಹಾಸದಲ್ಲಿ ಪುರಾಣಗಳಲ್ಲಿ ಹೇರಳವಾಗಿವೆ. ಜೀವ-ಶಿವರ ಐಕ್ಯಕ್ಕೆ ಮಹಾ ಸಂಗಮಸ್ಥಲವೆನಿಸಿದೆ ಈ ಸೃಷ್ಟಿ. ಬ್ರಹ್ಮಾಂಡದ ಸಕಲ ಲೋಕಗಳಲ್ಲಿ ಅತಿ ಮಹತ್ವಪೂರ್ಣವಾದ ಪರಮ ಮೋಕ್ಷದಾಯಕವಾದ ಕೇಂದ್ರ ಬಿಂದು ಮಹಾ ಸಾಧನ ಕ್ಷೇತ್ರವೆಂದರೆ ಈ ಭೂಮಿಯೇ.

ತ್ರಿಮೂರ್ತಿಗಳ ಆಳಿಕೆ—ವೀರಭದ್ರೇಶ್ವರನ ಅವತಾರ

—ಕನ್ನಡ ಕವಿ ಕಾಳಿದಾಸ

ಸುಮಾರು ಎಂಟು ಸಾವಿರ ವರ್ಷಗಳ ಹಿಂದೆ ಇದೇ ನಮ್ಮ ಭೂಮಿಯ ಮೇಲೆ ಬ್ರಹ್ಮ-ವಿಷ್ಣು-ಶಿವ (ಶಂಕರ) ಈ ತ್ರಿಮೂರ್ತಿಗಳ ಆಳಿಕೆಯು ನಡೆದಂತೆ ತಿಳಿದು ಬರುತ್ತಿದೆ. ಶಂಕರನ ಆಳ್ವಿಕೆಯು ಹಿಮವತ್ ಪರ್ವತದ ಕೈಲಾಸಗಿರಿಯಲ್ಲಿಯೂ, ಹರಿಯ ಆಳ್ವಿಕೆಯು ಹರಿದ್ವಾರದಲ್ಲಿಯೂ, ಬ್ರಹ್ಮನ ಆಳ್ವಿಕೆಯು ಬ್ರಹ್ಮದೇಶದಲ್ಲಿಯೂ ನಡೆದಿರಬೇಕು. ಅಂತೆಯೇ ಈಗಲೂ ಹಿಮಗಿರಿಯ ಕೈಲಾಸ ಪರ್ವತದ ಹರಿದ್ವಾರ, ಬ್ರಹ್ಮದೇಶ ಮುಂತಾದ ನಾಮಕರಣಗಳು ಜಗತ್ಪ್ರಸಿದ್ಧವಾಗಿವೆ. ಲೋಕಜೀವನದ ದೃಷ್ಟಿಯನ್ನು ತಮ್ಮತ್ತ ಸೆಳೆದುಕೊಳ್ಳುತ್ತಲಿವೆ. ಈ ಮಾತು ಸರ್ವಸಿದ್ಧವಾದದುದೇ.

ಇದಕ್ಕೆ ಇನ್ನೊಂದು ಪ್ರಬಲವಾದ ಉದಾಹರಣೆಯೆಂದರೆ—ಪರ್ವತರಾಜನ ಪುತ್ರಿಯಾದ ಪಾರ್ವತಿಯನ್ನು ಶಿವನು ವಿವಾಹವಾದುದು ಇದೇ ಹಿಮಗಿರಿ ಸ್ಥಳದಲ್ಲಿ. ಶಿವಕವಿ ಹರಿಹರಕೃತ "ಗಿರಿಜಾ ಕಲ್ಯಾಣ" ಪ್ರಬಂಧವೇ ಮೊದಲಾದ ಸಹಸ್ರ ಮುಖ ಸಾಹಿತ್ಯ ಸಾಕ್ಷಿಯಾಗಿ ಸಾರುತ್ತಿದೆ.

ಆಮೇಲೆ ನಮ್ಮೀ ಭಾರತಕ್ಕೆ ಮಧ್ಯ ಏಶಿಯಾದಿಂದ ಆರ್ಯರು ಬಂದು ನುಗ್ಗಿದರು. ಅವರ ಅತ್ಯಾಚಾರ ಪರಿಣಾಮವಾಗಿ ದ್ರಾವಿಡರ ಮೇಲೆ ದಾಳಿ ನಡೆಯಿತು. ದ್ರಾವಿಡರು ಆಗ ಅನ್ನಾನ್ನಗತಿಕರಾದರು. ಅನಾಗರಿಕರಾದ ಆರ್ಯರು ಸುರಪಾನದ ಮತ್ತಿನಲ್ಲಿ ಮೆರೆಯುತ್ತ, ಮಾಂಸ ಭಕ್ಷಣೆ ಮಾಡುತ್ತ ಪ್ರಾಣಿಗಳ ವಧೆಯನ್ನು ನಡೆಸಿದರು. ಅಷ್ಟೇ ಅಲ್ಲದೆ ಮಾನವೀಯತೆಯನ್ನು ರಸಾತಲಕ್ಕೊತ್ತಿ ಪಾಶವೀವೃತ್ತಿದಳೆದು ನರವಧೆಗೂ ಮುಂದಾಗುವರು.

ಇಂತಹ ಧರ್ಮಗ್ಲಾನಿಯ ದುರ್ಧರ ಪ್ರಸಂಗದಲ್ಲಿ ವೀರಭದ್ರೇಶ್ವರನ ಅವತಾರವಾಗುವದು. ಆಗ ವೀರೇಶನು ದುಷ್ಟನಿಗ್ರಹ ಶಿಷ್ಟ ಪರಿಪಾಲಕನೆನಿಸಿ ದಕ್ಷಬ್ರಹ್ಮನ ಶಿರಚ್ಛೇದನಗೆಯ್ದಂತೆ, ಆರ್ಯರನ್ನೂ ನಾಶಗೊಳಿಸಿ, ದ್ರಾವಿಡರಿಗೆ ತುಂಬ ರಕ್ಷಣೆ ನೀಡುವನು. ಶಿವ ಧರ್ಮಧ್ವಜವನ್ನು ಎತ್ತಿ ಹಿಡಿಯುವನು.

ಅಂದಿನ ಕ್ರಾಂತಿಯ ಕಹಳೆಯ ದ್ಯೋತಕವಾಗಿ ಇಂದಿಗೂ ಈಶನ ವೀರಶ್ರೀಯನ್ನು ವೀರಗಾಸೆಯ ಧರಿಸುವ ಪುರವಂತರೂ ಉಗ್ಗಡಣೆಯ ಮುಖದಲ್ಲಿ ಉಳಿಸಿಕೊಂಡು ಬಂದಿರುವುದನ್ನು ನಾವು ಚೆನ್ನಾಗಿ ಕಾಣುತ್ತೇವೆ. ಅಂತೆಯೇ ವೀರೇಶನು ರಚಿಸಿದ ಡೊಳ್ಳುಸುಮ್ಮಾಳು, ಕರಡಿ, ಕಹಳೆ, ನಗಾರಿ, ನೌಬತ್ತು ಮೊದಲಾದ ಜಾನಪದ ವಾದ್ಯಗಳು ಉಳಿದುಕೊಂಡು ಬಂದಿವೆ.

ನಾಡಿನ ಶಕ್ತಿ ದೇವತೆಗಳಾದ ಕಾಳಿ, ಭದ್ರಕಾಳಿ ವೀರಶಕ್ತಿ ಮಹಿಳೆಯರಾಗಿ ಮೆರೆದುದು–ಈ ವೀರೇಶನ ಸಾನ್ನಿಧ್ಯ ಪ್ರೇರಣೆಯಿಂದಲೇ. "ಸಪ್ತಸಾಗರ"ವೇ ದಕ್ಷಬ್ರಹ್ಮನ ಯಾಗದ ಸ್ಥಳವಾಗಿತ್ತೆಂದು ತಿಳಿದುಬರುತ್ತಿದೆ. ಈ "ಸಪ್ತಸಾಗರ" ಅಥಣಿ ತಾಲ್ಲೂಕಿನಲ್ಲಿದೆ.

ಶ್ರೀಕ್ಷೇತ್ರ ಎಡೂರು ವೀರಭದ್ರೇಶ್ವರನ ದೇವಸ್ಥಾನ ಇಂದಿಗೂ ಎಂದಿಗೂ ತೋಕ ಜೀವನಕ್ಕೆ ಬೆಳಕಿನ ಆಗರವಾಗಿ ಬೆಳಗುತ್ತಿದೆ.

ಹಾಗೆಯೇ ಶ್ರೀಕ್ಷೇತ್ರ ಗೊಡಚಿ ವೀರಭದ್ರೇಶ್ವರನ ವೀರ ಜ್ಯೋತಿಯು ಬೆಳಗುತ್ತಲಿದ್ದು ಭಕ್ತರ ಬಾಳಿಗೆ ದಾರಿ ದೀಪವಾಗಿದೆ.

---

1 ಹಿಮಗಿರಿಯಲ್ಲಿ–ಶಿವನು, ಹರಿದ್ವಾರದಲ್ಲಿ–ಹರಿಯು, ಬ್ರಹ್ಮದೇಶದಲ್ಲಿ–ಬ್ರಹ್ಮನು ಈ ತ್ರಿಮೂರ್ತಿಗಳ ಆಳಿಕೆಯು ಆಯಾ ಸ್ಥಳಗಳಲ್ಲಿ ನಡೆದಿರಬೇಕು ಎಂಬುವ ಅಭಿಪ್ರಾಯವುಳ್ಳವರಾಗಿದ್ದರು ತಿರಾಳಕೊಪ್ಪದ ಶ್ರೀ ಚೆನ್ನಮಲ್ಲಿಕಾರ್ಜುನರು (ಮೈಸೂರಿನ "ಸದ್ಧರ್ಮ ದೀಪಿಕೆ" ಮಾಸಪತ್ರಿಕೆಯ ಸಂಪಾದಕರು).

2 ತ್ರೇತಾಯುಗದಲ್ಲಿ–ಶಿವನ (ಈಶ್ವರನ) ಆತ್ಮಲಿಂಗವನ್ನೇ ಮಹಾ ತಪಸ್ಸಾಧನೆಯಿಂದ ತಂದ ಲಂಕಾಧಿಪತಿ ರಾವಣನು, ತಪಗೈದ ತಾಣ ಕೈಲಾಸಪರ್ವತವೇ. ಈ 'ಕೈಲಾಸ ಪರ್ವತ'ವು ಹಿಮಾಲಯ ಪರ್ವತದ ತುತ್ತತುದಿಯಲ್ಲಿದ್ದಿತು. ಈ ಕೈಲಾಸ ಪರ್ವತಕ್ಕೇನೇ ರಾವಣೇಶ್ವರನು ಸೋಪಾನ ಕಟ್ಟಿಸಬೇಕೆಂದಿದ್ದ. ಆದರೆ ಸೀತಾಪಹರಣದಲ್ಲಿ ತೊಡಗಿದ್ದ ಶಿವಭಕ್ತ ರಾವಣನಿಂದ ಈ ಸೋಪಾನಗಳನ್ನು ಕಟ್ಟಿಸಲಾಗಲಿಲ್ಲ. ಸೀತಾಪಹರಣದಿಂದ ಅಧರ್ಮ ಕಾರ್ಯಕ್ಕೆಡೆಗೊಟ್ಟ ಆ ರಾವಣನಿಗೆ ಸೋಪಾನ ರಚಿಸುವ ಕಾರ್ಯವೇ ನಿಂತು ಹೋಯಿತು. ಹೀಗೆ ಇದೆಲ್ಲ ವಿಧಿವಿಲಾಸವೆಂದು ಹೇಳಬೇಕು.

3 ದಕ್ಷಬ್ರಹ್ಮನ ಯಜ್ಞಕುಂಡದಲ್ಲಿ ಧುಮುಕಿ ಆತ್ಮಾರ್ಪಣೆಗೆಯ್ದ–ದಕ್ಷಬ್ರಹ್ಮನ ಮಗಳಾದ ದಾಕ್ಷಾಯಣಿಯು ಮುಂದೆ ಪರ್ವತರಾಜನ ಮಗಳಾಗಿ ಜನಿಸಿ ಪಾರ್ವತಿಯೆಂಬಭಿದಾನದಿಂದ ಬೆಳೆದು ದೊಡ್ಡವಳಾದಳು. ಈಗ ಪಾರ್ವತಿ ಶಿವನೇ ಪತಿಯಾಗಬೇಕೆಂದು ಘೋರ ತಪವನ್ನು ಗೆಯ್ದು, ಆ ಶಿವನೊಲಿಯಲ್ಕೆ ಅವನನ್ನು ವಿವಾಹವಾಗಿ ಶಿವಸತಿ ಶರ್ವಾಣಿಯೆನಿಸಿ ಮೂಲೋಕ ಮಾತೆಯಾಗಿ ಸರ್ವಲೋಕ ಪೂಜ್ಯಳೆನಿಸಿದಳು.

ಈ ಹಿಂದೆ ಹೇಳಿದಂತೆ ಈ ಪಾರ್ವತಿಯ ವಿವಾಹ ನಡೆದುದು ಹಿಮಗಿರಿ ಅರ್ಥಾತ್ ಹಿಮವತ್ ಪರ್ವತದಲ್ಲಿಯೇ–(ಕೈಲಾಸ ಪರ್ವತದಲ್ಲಿಯೆ).

4 ಕ್ರಿ.ಶ. 1977ರಲ್ಲಿ ಶ್ರೀಕ್ಷೇತ್ರ ಎಡೂರು ಹಾಗೂ ಗೊಡಚಿ ಈ ಎರಡೂ ಕ್ಷೇತ್ರಗಳಲ್ಲಿ "ಶ್ರೀ ವೀರಭದ್ರೇಶ್ವರ ಅಷ್ಟ ಸಹಸ್ರೋತ್ಸವ" ನಡೆಯಿತು. ಈ ಸಂಗತಿ ಇಲ್ಲಿ ತುಂಬ ಗಮನಾರ್ಹವಾಗಿದೆ.

ಭುವಿಗಿಳಿದ ಶಿವತಾನು...ಇವರಿಗೊಲಿದು...

23 ಭಕ್ತ ಅರಿವಾಳ್ತಾಂಡರ್

—ಹೆಚ್. ಜಿ. ರಾಧಾದೇವಿ.
ಬೀದಿಲು ನಾಗಮ್ಮ ಮನೆ, ಗುಂಟ್ ರಸ್ತೆ, ರಾಯಚೂರು.

ಚೋಳ ದೇಶದಲ್ಲಿ ತಿಣ್ಣಮಂಗಳಪುರ ಎಂಬ ಊರಿದೆ. ಅರಿವಾಳ್ತಾಂಡರ್ ಎಂಬ ಒಬ್ಬ ಭಕ್ತ ಆ ಊರಿನಲ್ಲಿದ್ದ, ಅವನು ಮಹಾ ಶಿವಭಕ್ತನಾಗಿದ್ದ, ಗದ್ದೆಯಲ್ಲಿ ಬೆಳೆ ಕೊಯ್ದು ಕೂಲಿ ಸಂಪಾದಿಸುತ್ತಿದ್ದ, ಶಿವಭಕ್ತರ ಗದ್ದೆಗಳಲ್ಲಿ ಕೂಲಿ ಇಲ್ಲದೆ ಕೆಲಸ ಮಾಡುತ್ತಿದ್ದ.

ಬೇರೆಯವರಿಂದ ಕೂಲಿಯೆಂದು ಬತ್ತ ಪಡೆದರು ಅದನ್ನು ತಂದು ಹಸನು ಮಾಡಿ ಕುಟ್ಟಿ ಅಕ್ಕಿಯ ಅನ್ನ....ತಾನೆ ಬೆಳೆದ ಸೌತೆಕಾಯಿ ಮೆಲ್ಲೋಗರ....ಮಾವಿನ ಹಣ್ಣಿನ ರಸಾಯನ ಮಾಡಿ ತಿರುನಲ್ಲೂರಿನ ಶಿವಾಲಯದ ಮುಂದೆ ಕುಳಿತು ಅಲ್ಲಿ ಬಂದ ಭಕ್ತರಲ್ಲಿ ಯಾರಿಗಾದರು ಉಣಿಸಿ ಪುನಃ ಶಿವಾರ್ಪಿತವೆನುತ್ತ ತಾನು ಉಣ್ಣುವನು.

ಇದು ಅವನ ನಿತ್ಯನೇಮ. ಪ್ರತಿದಿನ ಶಿವದರ್ಶನ ಮಾಡಿ ಶಿವಭಕ್ತರಿಗೆ ಉಣಲು ಇತ್ತು ನಂತರ ಉಳಿದದ್ದನ್ನು ತಾನುಂಡು ಅಂದಿನ ಕೂಲಿ ಕೆಲಸಕ್ಕೆ ಹೋಗುವನು.

ಗದ್ದೆಯಲ್ಲಿ ಕೆಲಸ ಮಾಡುವಾಗಲು ಶಿವನ ನಿರ್ಮಲ ರೂಪ ನೆನೆಯುತ್ತ ಶಿವ ನಾಮ ಪಾಡುತ್ತ ಕೆಲಸ ಮಾಡುವನು.

ಕೂಲಿಗೆ ಕೊಟ್ಟ ನೆಲ್ಲನ್ನ ರಾತ್ರಿ ಮನೆಗೆ ತಂದು ಕುಟ್ಟಿ ಹಸನು ಮಾಡುವನು. ಬೆಳಗಿನ ಜಾವ ಎದ್ದು ತನ್ನ ಮನೆ ಅಂಗಳದಲ್ಲಿ ಬೆಳೆದ ಸೌತೆಕಾಯಿ, ಮಾವು ಕಿತ್ತು ಅನ್ನ, ಮೊಲ್ಲೋಗರ, ರಸಾಯನ ಮಾಡಿಕೊಂಡು ಪುನಃ ಶಿವಾಲಯಕ್ಕೆ ಹೋಗುವನು, ಇದೇ ಅವನ ದಿನಚರಿ.

ಹೀಗೆ ಇರಲು ಒಮ್ಮೆ ನೆಲ್ಲು ಒಬ್ಬರೂಟಕ್ಕಾಗುವಷ್ಟು ಮಾತ್ರ ಸಿಕ್ಕಿತು. ಆ ದಿನ ಜಂಗಮರಿಗುಣಿಸಿ ತಾನು ಉಪವಾಸವಿದ್ದ. ಪುನಃ ಮಾರನೆಯ ದಿನವು ಅಷ್ಟೆ ಸಿಕ್ಕಿತು ಆ ದಿನವು ಶಿವದರ್ಶನವೆ ಊಟವಾಯಿತು. ಜಂಗಮರಿಗೆ ಉಣಿಸಿದ ಆನಂದದಲ್ಲಿ ತಾನು ಉಪವಾಸವಿದ್ದರು ತೃಪ್ತನಾದ. ಹೀಗೆ ಇಪ್ಪತ್ತು ದಿನಗಳು ಸತತ ಉಪವಾಸಗಳಾದವು.

ಆದರು ಅವನು ಖತಿಗೊಳಲಿಲ್ಲ. ಈ ದಿನಗಳೆ ನನ್ನ ಪಾಲಿನ ಹಬ್ಬಗಳು....ಎಂದು ಕುಣಿದಾಡಿದ, ಶಿವನ ಭಕ್ತರಿಗೆ ಉಣಿಸಿ ಶಿವನ ಹೆಸರಲ್ಲಿ ಉಪವಾಸ ಮಾಡಿದ ಈ ದಿನಗಳು ನನ್ನ ಪಾಲಿನ ಪವಿತ್ರ ದಿನಗಳೆಂದ.

ಇವನ ಭಕ್ತಿಯ ಶಾಖಾ ಕೈಲಾಸದಲ್ಲಿದ್ದ ಶಿವನಿಗೆ ತಟ್ಟಿತು. ಶಿವ ಭಕ್ತನಿಗಾಗಿ ಭುವಿಗಿಳಿದ, ಜೊತೆಗೆ ಉಮೆಯನ್ನು ಕರೆತಂದ.

"ಶಿವನಾಮವೊಂದುಳಿದು....ಬೇರೆ ಕೀರ್ತನೆ, ಭಕ್ತಿಯಗಾನ ವೇದೋಕ್ತ ಮಂತ್ರ ಒಂದೂ ಅರಿಯದ ಈತನಿಗೇಕೆ ನೀವು ಒಲಿದಿದ್ದೀರೋ?" ಎಂದಳು ಉಮೆ.

"ನನ್ನನ್ನರಿಯದ ನನ್ನಲ್ಲಿ ನಿಜ ಪ್ರೀತಿಯಿಲ್ಲದ ಆ ಗಾನ ಮಂತ್ರಗಳಿಗಿಂತ ಈ ಭಕ್ತನ ಪ್ರೀತಿ ಹಿರಿದು ನೋಡಾ ಗಿರಿಜೆ" ಎಂದು ಶಿವಾ ಒಂದು ವಿಚಿತ್ರ ತೋರುತ್ತಾನೆ.

ಮಡಿಲಲ್ಲಿ ಅಕ್ಕ .... ಕೀರೆ.... ಮಾವಿನ ಹಣ್ಣನ್ನು ಅರಿವಾಳ್ತಾಂಡರ ಹೊತ್ತು ತರುತ್ತಿದ್ದಂತೆಯೆ ಜೋರುಗಾಳಿ ಬೀಸಿ ಮಹಾಧೂಳು ಮುಸುಕುತ್ತದೆ.

ಕಣ್ಣು ಬಿಡಲಾಗದೆ ಕಣ್ಮುಚ್ಚಿಕೊಂಡೆ ಬರುತ್ತಾನೆ. ದಾರಿಯಲ್ಲಿ ಕಾಣದೆ ದೊಡ್ಡ ಬೀಟೆ ತುಂಡೊಂದನ್ನು ಎಡವಿ ನಮಃ ಶಿವಾಯಃ ಎಂದು ಮುಗ್ಗರಿಸಿ ಬೀಳುತ್ತಾನೆ.

ಮಡಿಲಲಿದ್ದ ಅಕ್ಕಿಯೆಲ್ಲಾ ಚೆಲ್ಲಿದ್ದಲ್ಲದೆ ಧೂಳಿನಲ್ಲಿ ಹಾರಿ ಹೋಗುತ್ತದೆ. ಶಿವಭಕ್ತನಿಗೆ ದುಃಖ ಉಕ್ಕಿ ಬರುತ್ತದೆ, "ಆಹಾ .... ಶಿವಭಕ್ತರ ಬಾಯಿಗೆ ಹೋಗಬೇಕಾದ ತುತ್ತನ್ನು ಭೂಮಿಗೀಡಾಡಿ ಶಿವದ್ರೋಹಿಯಾದೆನಲ್ಲಾ .... ಶಿವಭಕ್ತರಿಗೆ ಉಣಲಿಡುವ [ಸೇವಾ ಈ ದಿನ ಸಡಲಿತು. ಇನ್ನು ಬದುಕಿ ಫಲವೇನು ?" ಎಂದು ತನ್ನ ಕೈಲಿದ್ದ ಕುಡುಗೋಲಿನಿಂದ ತಲೆಗೆ ಬೀಸಿಕೊಳ್ಳುತ್ತಾನೆ. ಒಡನೆ ಪಾರ್ವತಿ ಶಿವನಿಗೆ .... ಹರಾ .... ಮಹಾದೇವಾ .... ಅವನ ತಡೆ ತಡೆ.... ಏನಿದು ಅನರ್ಥ ! ಎಂದು ಕೂಗುತ್ತಾಳೆ, ಆಗ ಶಿವಾ–

ಇಪತ್ತು ದಿನ ಉಪವಾಸ ಮಿರ್ದವನ್ನು ಭಕ್ತನ ದೃಢತೆ ನೋಡಿದೆಯ ? ಸೇವಾ ಸಡಲಿತೆಂದು ಒಡಲನ್ನೆ ಅರ್ಪಿಸಲುದ್ಯುಕ್ತನಾದ ಭಕ್ತನ ಮಹಿಮೆ ನೋಡಿದೆಯ ! ಎನ್ನುತ್ತಾ ಓಡಿಹೋಗಿ ಭಕ್ತನ ಕೈ ಹಿಡಿದುಕೊಂಡು ಅವನಿಗೆ ತನ್ನ ನಿಜ ರೂಪದರ್ಶನವಿತ್ತು ಕೈಲಾಸಕ್ಕೆ ಕರೆಯುತ್ತಾನೆ. ಆದರೆ ಭಕ್ತ "ನಾನು ಈ ದಿನ ಉಂಡರೆ ಮಾತ್ರ ನಿನ್ನೊಂದಿಗೆ ಕೈಲಾಸಕ್ಕೆ ಬರುವೆ' ಎಂದು ಹೇಳಿ ಶಿವಕರುಣೆಯಿಂದ ಮರಳಿ ಮಡಲಲ್ಲಿದ್ದ ಅಕ್ಕಿಯಿಂದ ಅನ್ನಮಾಡಿ, ಸೌತೆಕಾಯಿ ಮೆಲ್ಲೋಗರ.... ಮಾವಿನ ರಸಾಯನ ಮಾಡಿ ಎಂದಿನಂತೆ ಲಿಂಗದ ಮುಂದಿಡದೆ ಪ್ರತ್ಯಕ್ಷ ಶಿವನಿಗೆ ಉಣಿಸುತ್ತಾನೆ.

ಶಿವ ಅವನನ್ನು ಕೈಲಾಸಕ್ಕೆ ಕರೆದುಕೊಂಡು ಹೋಗಿ ಗಣಪದವಿ ಕೊಡುತ್ತಾನೆ.

ಷಡಕ್ಷರಿಯ ರಾಜಶೇಖರ ವಿಳಾಸ

—ಡಾ. ಎಲ್. ಆರ್. ಹೆಗಡೆ

ಮೈಸೂರಿನ ಚಿಕ್ಕದೇವರಾಜನ ಆಸ್ಥಾನ ಕವಿಯೆಂದು ಎಳಂದೂರ ಮಠಾಧೀಶನಾದ ಷಡಕ್ಷರಿ ಕವಿಯನ್ನು ಕುರಿತು ಹೇಳಲಾಗದಿದ್ದರೂ ಅವನು ಚಿಕ್ಕದೇವರಾಜನ ಕಾಲದ ಕವಿಶೇಖರನೆಂದು ಸನ್ಮಾನಿತನಾಗಿದ್ದನೆಂಬುದು ನಿಜ. ಇಳಾಪತಿಯಿಂದ ಅವನ ಪಾದಗಳು ಪೂಜಿತವಾಗಿದ್ದುದು ಆತನ ಘನತೆಯನ್ನು ಪಾಂಡಿತ್ಯದ ದೃಷ್ಟಿಯಿಂದಲೂ ಕವಿತ್ವದ ಸೃಷ್ಟಿಯಿಂದಲೂ ಅವನ ಯೋಗ್ಯತೆಯೇ ಸಮರ್ಥಿಸುವಂತಿದೆ.

ಕನ್ನಡ ಕವಿಗಳ ಪರಂಪರೆಗೆ ಅನುಗುಣವಾಗಿ ಆತನು ಕನ್ನಡ–ಸಂಸ್ಕೃತಗಳೆರಡರಲ್ಲೂ ಕಾವ್ಯಗಳನ್ನು ಬರೆದು, ಉಭಯ ಕವಿತಾ ವಿಶಾರದನಾಗಿದ್ದನು.

ಕನ್ನಡದಲ್ಲಿನ ಅವನ ಕಾವ್ಯಗಳಲ್ಲಿ "ರಾಜಶೇಖರ ವಿಳಾಸ"ವೇ ಅವನ ಪ್ರಥಮ ಕಾವ್ಯವಾಗಿದ್ದಿರಬಹುದು. ಮಹಾಭಾರತದ ಇಂದ್ರಕೀಲ ಕಥೆಯ ಸಂದರ್ಭದ ಭಾಗವನ್ನು ಕುಮಾರವ್ಯಾಸ ಭಾರತದ ಅವಲಂಬನದಿಂದ ವಿಸ್ತರಿಸಿ ನೂತನ ಸೃಷ್ಟಿಯನ್ನು ಮಾಡಿದುದೇ 'ಶಬರಶಂಕರ ವಿಳಾಸ' ಕಾವ್ಯ. ಮಹಾನುಭಾವನಾದ ಬಸವಣ್ಣನ ಕಥಾನಕದೊಡನೆ ಹಲವಾರು ಶಿವಭಕ್ತರ ಚರಿತ್ರೆಗಳನ್ನು ಸೇರಿಸಿ ಬರೆದ ಮಹಾಗ್ರಂಥವೇ ವೃಷಭೇಂದ್ರ ವಿಜಯ.

ಆತನ ಕಾವ್ಯಗಳಲ್ಲೆಲ್ಲಾ ವೃಷಭೇಂದ್ರ ವಿಜಯವೇ ಶ್ರೇಷ್ಠವೆಂದು ನಿರ್ಣಯಿಸಬಹುದು ಎಂದು ಲಿಂಗೈಕ್ಯ ಶ್ರೀ ಶಿ. ಶಿ. ಬಸವನಾಳರು ಬರೆದಿರುವುದು ನಿಜ.

ಆದರೆ ವಿಶೇಷವಾಗಿ ರಸಿಕಜನಮನೋಹಾರಿಯಾದುದು ಆತನ "ರಾಜಶೇಖರ ವಿಳಾಸ".

ಅವನಿಗಿಂತ ಹಿಂದೆಯೇ ಗುಬ್ಬಿ ಮಲ್ಲಣ್ಣಾರ್ಯನ (1513) ವಾರ್ಧಿಕ ಷಟ್ಪದಿಯಲ್ಲಿ "ಭಾವಚಿಂತಾರತ್ನ" ಎಂಬ ಕಾವ್ಯವನ್ನು ಬರೆದಿದ್ದನು. ವರ್ಣಕ ಕಾವ್ಯವನ್ನು ಅವಲಂಬಿಸಿ ವಸ್ತುಕ ಕಾವ್ಯವನ್ನು ಬರೆವ ಷಡಕ್ಷರಿಯ ಉದ್ದೇಶ "ರಾಜಶೇಖರ ವಿಳಾಸ" ಚಂಪೂಗ್ರಂಥದಲ್ಲಿಯೂ ಸಫಲವಾಗಿದೆ.

ಇಬ್ಬರು ಕವಿವರರೂ ತಮ್ಮ ಕಾವ್ಯಗಳಲ್ಲಿ ಪಂಚಾಕ್ಷರೀಮಂತ್ರದ ಮಹಿಮೆಯನ್ನು ಕೊಂಡಾಡಿದ್ದಾರೆ. ಆದರೆ, ಷಡಕ್ಷರಿಯು ತನ್ನ ಕಾವ್ಯದಲ್ಲಿ ರಾಜಶೇಖರನಿಗೆ ಹೆಚ್ಚು ಮಹತ್ವವನ್ನು ನೀಡಿದ್ದಾನೆ.

ಸಿಂಹಳದೇಶದ ರಾಜನ ಮೇಲೆ ದಾಳಿಮಾಡಿ ಅವನನ್ನು ಗೆದ್ದು ರಾಜಕುಮಾರಿಯನ್ನು ತಂದವನು ಭಾವಚಿಂತಾರತ್ನದಲ್ಲಿ ಪತಿಮೋಹಿ ಮಂತ್ರಿಯಾದರೆ, ರಾಜಶೇಖರ ವಿಳಾಸದಲ್ಲಿ ಸತ್ಯೇಂದ್ರರಾಜನ ಮಗ ರಾಜಶೇಖರನೇ ಆ ಸಾಹಸವನ್ನು ಮಾಡಿದವನು.

ಒಂದು ದೃಷ್ಟಿಯಲ್ಲಿ ರಾಜಕುಮಾರನಾದ ರಾಜಶೇಖರನೇ ಕಥಾನಾಯಕನು. ಆದರೆ, ಎರಡನೆಯ ಅರ್ಥದಲ್ಲಿ ರಾಜಶೇಖರ ರಾಜ ಅಂದರೆ, ಚಂದ್ರನನ್ನು ತಲೆಯ ಮೇಲೆ ಧರಿಸಿದ ಶಿವನೇ ರಾಜಶೇಖರ. ಕಣ್ಣು ಎರಡಾದರೂ ಕಾಣಿಕೆ ಎರಡಲ್ಲ; ಒಂದೇ. ಈ ಇಬ್ಬರು ರಾಜಶೇಖರರ ಕಥೆಯಲ್ಲಿಯೂ ಕ್ರಿಯೈಕ್ಯವನ್ನು ತರುವುದು ಪಂಚಾಕ್ಷರೀಮಂತ್ರ. ನಮಃ ಶಿವಾಯಯೆಂಬ ಪಂಚಾಕ್ಷರೀಮಂತ್ರವು ಶಿವಮಂತ್ರ ಕೋಟಿಗೆ ತವರ್ಮನೆ. ಶೈವಶಾಸ್ತ್ರವೃಕ್ಷದ ಮೂಲ-ಮುಕ್ತಿಕಾಂತೆಯ ಶಿರೋಮಣಿ ಮಗ ರಾಜಶೇಖರನಿಗೆ ಪಟ್ಟಕಟ್ಟಿ ಸತ್ಯೇಂದ್ರಚೋಳನು ಈ ಮಂತ್ರಧ್ಯಾನದಲ್ಲಿ ತೊಡಗಿ ಹಿನ್ನೆಲೆಯಲ್ಲಿರುತ್ತಾನೆ. ರಾಜಶೇಖರಕುಮಾರನಿಗೆ ರಕ್ಷೆಯಾದುದೂ ಈ ಶಿವಮಂತ್ರವೇ.

ಸಿಂಧುರಾಜನಿಂದ ಕಾಣಿಕೆಯಾಗಿ ದೊರೆತ ಕುದುರೆಗಳನ್ನೇರಿ ತಾನೂ ಮಂತ್ರಿಪುತ್ರ ಮಿತವಚನನೂ ಪಟ್ಟಣದಲ್ಲಿ ವೈಹಾಳಿಯನ್ನು ಮಾಡಬೇಕೆಂದು ರಾಜಶೇಖರನು ಮಿತ್ರನನ್ನು ಒತ್ತಾಯಿಸಿ ಕುದುರೆಯನ್ನೇರಿ ಹೊರಡುತ್ತಾನೆ. ಇದಕ್ಕೆ ಶಿವನೇ ಎಲ್ಲವನ್ನೂ ನಡೆಸುವವನು, ಅವನ ಇಚ್ಛೆಯ ಹೊರತು ಜಗತ್ತಿನಲ್ಲಿ ಏನೂ ನಡೆಯಲಾರದು ಎಂಬ ದೃಢಭಾವನೆಯಿರುವುದೇ ಕಾರಣವಾಗಿದೆ.

ಶಿವಲಿಂಗವು-ಬ್ರಹ್ಮ-ವಿಷ್ಣುಗಳಲ್ಲಿ ಯಾರು ಶ್ರೇಷ್ಠ ಎಂಬ ಕುರಿತು ಉಂಟಾದ ಜಗಳವನ್ನು ನಿರ್ಣಯಿಸಲು ತಾನೇತಾನಾಗಿ ವಿಜೃಂಭಿಸಿದ ಪರಬ್ರಹ್ಮ; ಮೋಕ್ಷಫಲವನ್ನು ನೀಡುವ ಕಲ್ಪವೃಕ್ಷ ಎಂಬ ದೃಢವಿಶ್ವಾಸ ಅವನದು.

ವೇದಗಳು ಸ್ತುತಿಸುವ ಯತಿಗಳ ಹೃದಯಕಮಲ ಸೂರ್ಯನಂತಿರುವ ಶಿವಲಿಂಗವನ್ನು ಸ್ತುತಿಸುವ ಭಕ್ತ ರಾಜಶೇಖರನಿಗೆ ಆನಂದಾಶ್ರುಗಳು ರೋಮಾಂಚನ ಭಕ್ತಿಕಂಪಿತ ಸ್ವರದಿಂದ ಸಹಜವಾಗಿ ಮೂಡುತ್ತವೆ. ಮಂತ್ರಲಕ್ಷ ಎಂಬ ಅವನ ಇನ್ನೊಂದು ಹೆಸರು ಅನ್ವರ್ಥದಾಗಿದೆ. ಅವನ ಒಳಹೊರಗನ್ನೆಲ್ಲಾ ಲಿಂಗದ ಬೆಳಗು ವ್ಯಾಪಿಸುತ್ತದೆ.

ವೈಹಾಳಿಯನ್ನು ಪುರದ ಬೀದಿಗಳಲ್ಲಿ ನಡೆಸುವಾಗ ಮಿತವಚನನ ಕುದುರೆಯ ಕಾಲ್ಕೆಳಗೆ ಸಿಕ್ಕಿ, ಅನಾಥೆಯಾದ ತಿರುಕೊಳವಿನಾಚಿಯೆಂಬ ಶಿವಭಕ್ತೆಯ ಮಗನಾದ ಶಂಕರ ಬಾಲಕನು ಮರಣವನ್ನು ಹೊಂದುತ್ತಾನೆ. ಈ ಅಪಘಾತದ ಸಂಪೂರ್ಣ ಜವಾಬದಾರಿಯನ್ನು ರಾಜಶೇಖರನೇ ಹೊತ್ತು ಮರಣದಂಡನೆಗೆ ಸಿದ್ಧನಾಗುತ್ತಾನೆ.

ಭಕ್ತಿಯೆಂಬುದು ಗರಗಸದಂತೆ ಹೋಗುತ್ತ ಕೊಯ್ವುದು ; ಬರುತ್ತ ಕೊಯ್ವುದು.

ಎಂದು ಬಸವಣ್ಣ ನುಡಿದಿದ್ದಾನೆ

ಹರ ತನ್ನ ಭಕ್ತರ ತಿರಿವಂತೆ ಮಾಡುವ; ಒರೆದು ನೋಡುವ ಸುವರ್ಣದ ಚಿನ್ನದಂತೆ; ಅರಿದು ನೋಡುವ ಕಬ್ಬಿನ ಕೋಲಿನಂತೆ.... ಬೆದರದೆ ಬೆಚ್ಚದೆ ಇದೊರ್ಡೆ ಕರವಿಡಿದೆತ್ತಿಕೊಂಬ ನಮ್ಮ ರಾಮನಾಥನು.

“ಸತ್ಯವಂತರಿಗೆ ಸತ್ತಲ್ಲಿಯೂ ಕೇಡಿಲ್ಲ.''

ಎಂದು ದಾಸಿಮಯ್ಯನು ನುಡಿದಂತೆ ಹರನು ತನ್ನ ಭಕ್ತರ ಸತ್ಯಭಕ್ತಿಯ ಪರೀಕ್ಷೆಯನ್ನು ಮಾಡುತ್ತಾನೆ.

ರಾಜಶೇಖರನು ಶಿವಭಕ್ತಾಪರಾಧಕ್ಕಾಗಿ ತನ್ನ ತಲೆಯನ್ನು ಹಿಂದೆಮುಂದೆ ನೋಡದೆ ಕೊಡುತ್ತಾನೆ. ಮಗನೊಬ್ಬನೇ ಆದರೂ ಆತನು ತನ್ನ ಆತ್ಮ ಸಮರ್ಪಣೆ ಮಾಡುವಲ್ಲಿ, ನಿನ್ನ ಪ್ರಾಣವನ್ನು ಭಕ್ತಶಿಶುವಿನ ಸಲುವಾಗಿ ನೀಡಿ, ಕೈಲಾಸದಲ್ಲಿ ಶಿವನ ಪಾದಕಮಲಭೃಂಗವಾಗು ಎಂದು ಅಂಜದೆ ಅಳುಕದೆ ಹರಸಿ ಮಗನನ್ನು ಕಳಿಸುತ್ತಾಳೆ ಅಮೃತಮತಿ.

ರಾಜಶೇಖರನ ಶಿರವನ್ನು ತರಿಯಲಾರದೆ ತನ್ನ ಶಿರವನ್ನೇ ತರಿದುಕೊಂಡ ಪತಿಮೋಹಿ, (ಅನ್ವರ್ಥಕವಾದ ಹೆಸರು) ತನ್ನ ಶಿರವನ್ನು ತಾನೆ ತರಿದುಕೊಂಡು ಶಿವಮಂತ್ರ ಜಪ ಮಾಡುತ ಮಂತ್ರಲಕ್ಷನ ರುಂಡ, ಹೀಗೆ ಶಿರವನ್ನು ಕತ್ತಿಯಿಂದ ಅರಿದುಕೊಂಡ ಎಂದು ನಾಟಕೀಯ ರೀತಿಯಿಂದ ತನ್ನ ಶಿರವನ್ನು ಕಡಿದುಕೊಳ್ಳುವ ದಾಸಿಸಂದಾಯಿ, ಇಬ್ಬರ ಶಿರಗಳಿಗೆ ಸರಿಮಾಡಲು ತನ್ನ ಶಿರವನ್ನು ಅರಿದುಕೊಳ್ಳುವ ತಿರುಕೊಳವಿನಾಚಿ, ಇದಕ್ಕೆಲ್ಲ ಮೂಲಕಾರಣ ತಾನೇ ಎಂದು ತನ್ನ ತಲೆಯನ್ನೇ ಕಳಚಿಕೊಳ್ಳುವ ಮಿತವಚನ, ಕೊಲೆಗೆ ಕೊಲೆಯೆನ್ನುವ ತನ್ನ ಸತ್ಯವಚನವನ್ನು ಎತ್ತಿಹಿಡಿದಿದ್ದರಿಂದ ತನ್ನ ಕತ್ತನ್ನು ಕತ್ತರಿಸಿಕೊಳ್ಳುವ ಸತ್ಯೇಂದ್ರಚೋಳ ಇವರೆಲ್ಲರೂ ಮರಣವನ್ನೇ ಗೆಲಿದ ಮಹಂತರು. ಶರಣರ ಗುಣವನ್ನು ಮರಣದಲ್ಲಿ ನೋಡು ಎಂಬ ಮಾತು ಇವರೆಲ್ಲರಿಗೂ ಅನ್ವಯಿಸುತ್ತದೆ.

ಈ ಎಲ್ಲರ ಶಿರಗಳೂ ಪಂಚಾಕ್ಷರೀ ಮಂತ್ರವನ್ನು ಜಪಿಸುವ ಪವಾಡವು ಮಂತ್ರಲಕ್ಷನಾದ ರಾಜಶೇಖರನಿಂದಲೇ ತೊಡಗುತ್ತದೆ ಎಂಬ ಮಾತು ನೆನಪಿನಲ್ಲಿಡಬೇಕಾದುದು.

ಮಾತೆ ಅನ್ನಪೂರ್ಣೆಯು ಮತ್ತು ಇತರರು ತಮ್ಮ ಕೊರಳುಗಳನ್ನು ಅರಿದುಕೊಳ್ಳಲು ತೊಡಗಿದಾಗ ಪಾರ್ವತೀರಮಣನು ಪ್ರತ್ಯಕ್ಷನಾದನು. ಪರಮಾತ್ಮನಿಗೆ ಅಸಾಧ್ಯ ವಾದುದು ಯಾವುದು ?

ಎಲ್ಲ ಶಿವಭಕ್ತರೂ ಬದುಕಿ ಎದ್ದು ಬಂದುದು ಪರಶಿವನ ಪಂಚಾಕ್ಷರೀಮಂತ್ರದ ಮಹಿಮೆಯಿಂದ ಎಂದು ಈ ಕಥೆಯಲ್ಲಿ ತಿಳಿಸುವಂತೆ ರಚನೆಯಾಗಿದೆ.

ಶಿವಪಾರಮ್ಯ (ಪರಮ ಶ್ರೇಷ್ಠ) ದರ್ಶನವು ಕವಿಯ ಕಾವ್ಯದ ಮುಖ್ಯ ಜೀವಾಳವಾಗಿದೆ. ಶಿವಪುರಾಣದಲ್ಲಿ ಬರುವ ಹಲವು ಶಿವಲೀಲೆಗಳನ್ನು ಕವಿಯು ಭಕ್ತಿಪುರ ಸರವಾಗಿ ಬಣ್ಣಿಸಿದ್ದಾನೆ.

ಅಲ್ಲದೆ ಕವಿಯ ಶಿವತತ್ವಜ್ಞಾನವು ಈ ಕೆಳಗಿನ ವಿಶಿಷ್ಟವರ್ಣನೆಯಲ್ಲಿ ಮೂಡಿ ಬಂದಿದೆ.

ಶಿವನ ಪದ್ಮ ಪೀಠಕ್ಕೆ ಫಣಿಪತಿಯಾದ ಶೇಷನೇ ನಾಳ. ಇಲ್ಲಿ ಪದ್ಮಾಸನಸ್ಥನಾಗಿ ಪರಶಿವಯೋಗಿಯು ಕುಳಿತುದರ ಧ್ವನಿಯಿದೆ.

ಸಹಸ್ರಫಣಾಮಂಡಿತನಾದ ಮಹಾಶೇಷನನ್ನು ಈ ಪದ್ಮಾಸನದ ನಾಳವೆಂದು ಕವಿಯು ಬಳಸಿದ ಸಾವಯವ ರೂಪಕದ ಕಲ್ಪನೆಯು ಭವ್ಯಚಿತ್ರ ನಿರ್ಮಾಣಕ್ಕಾಗಿ ಉಪಯುಕ್ತವಾಗಿದೆ.

ಸಂಸಾರ ಸಾಗರದಲ್ಲಿದ್ದೂ ಅದನ್ನು ಮೀರಿ ಅಂಟಿಯೂ ಅಂಟದಂತೆ ಇರುವ ಹೃದಯ ಪದ್ಮ (ಇಲ್ಲಿ ಹೃತ್ ಎಂದರೆ ಮೆದುಳು) ದ ಅಷ್ಟದಳಗಳು ಅಷ್ಟೈಶ್ವರ್ಯಗಳೆಂಬ ಅಣಿಮಾದಿ ಅಷ್ಟಸಿದ್ಧಿಗಳು.

ಈ ಸಿದ್ಧಿಗಳಿಗೆ ಆಲಂಬನವಾದ ಕುಂಡಲಿನೀಶಕ್ತಿಯನ್ನು ಸರ್ಪದ ಹೋಲಿಕೆಯಿಂದ ವಿವರಿಸುತ್ತಾರೆ ಎಂಬ ಸಂಗತಿ ಈ ವಿಷಯ ಬಲ್ಲವರ ಅರಿವಿಗೆ ಬಂದಿರುತ್ತದೆ.

ಏಕ ಈಶ್ವರನಿಂದಾಗಿಯೇ ಈ ಸಿದ್ಧಿಗಳಿಗೆ ಐಶ್ವರ್ಯವೆಂಬ ಸಂಜ್ಞೆ ಬಂದಿದೆ. ಶಿವಭಕ್ತನಾದ ಕಾಳಿದಾಸನು ಏಕೈಶ್ವರ್ಯೇಗ ಸ್ಥಿತೋಪಿ........(ಪ್ರಣತ ಬಹುಫಲೋ, ಭಕ್ತರಿಗೆ ಬಹುಫಲ ನೀಡುವವನು ಎಂಬಲ್ಲಿ ವಿರೋಧಾಭಾಸ ಅಲಂಕಾರವನ್ನು ಬಳಸಿದುದುಂಟು) ಎಂದು ಶಿವನ ಈಶ್ವರತ್ವವನ್ನು ಮಾಲವಿಗ್ನಿ ಮಿತ್ರನಾಟಕದ ಪ್ರಾರಂಭದಲ್ಲಿಯೇ ಸೂಚಿಸಿದ್ದಾನೆ.

ಶಕ್ತಿಯೇ ಯೋಗಶಕ್ತಿಯ ಹೃದಯ ಕಮಲದ ಕರ್ಣಿಕೆ ಎಂದು ಬಣ್ಣಿಸಿರುವಲ್ಲಿ ಶಿವನಿಗೆ ಅವಿನಾಭಾವಿಗಳ ಶಕ್ತಿಯ ಆ ಕಮಲದ ಮಧ್ಯಸ್ಥಾನವನ್ನು ಅಲಂಕರಿಸಿದೆ ಎಂಬುದನ್ನು ಕವಿ ಸೂಕ್ಷ್ಮವಾಗಿ ತಿಳಿಸಿದ್ದಾನೆ.

ಹೀಗೆ ಯೋಗೇಶ್ವರನಾದ ಶಿವನ ಮುಂದೆ ಮಾಯೆ ಪರಾಜಿತವಾಗಿ ಕೈಕಟ್ಟಿ ನಿಂತುದರಲ್ಲಿ ಆಶ್ಚರ್ಯವಿಲ್ಲ.

ಯೋಗಿಗಳ ಹೃದಯ ಸ್ಥಿತನಾಗಿರುವ ಶಿವನು ಯೋಗದಲ್ಲಿ ನಿಂತು ಧ್ಯಾನಿಸುವುದೇನನ್ನು?

ತನ್ನ 'ಕುಮಾರ ಸಂಭವ'ದಲ್ಲಿ ಕವಿಕುಲ ಗುರುವು ಶಿವನು ತನ್ನ ಮೂರ್ತಿ ಒಂದಾದ ಅಗ್ನಿಯನ್ನು ಸಮಿಧೆಯನ್ನು ಉರಿಸಿ ಜ್ವಲನಗೊಳಿಸಿ.

ಸ್ವಯಂ ವಿಧಾತಾ ತಪಸಃ ಫಲಾನಾಂ
ಕೇನಾಪಿ ಕಾಮೇನ ತಪಶ್ಚಚಾರ॥

ಎಂದು ಆ ಸಂದರ್ಭದಲ್ಲಿ ಬಹಳ ಧ್ವನಿರಮ್ಯವಾಗಿ ಶಿವ ತಪಸ್ಸನ್ನು ಉಚಿತವಾಗಿ ಬಣ್ಣಿಸಿದ್ದಾನೆ. ತಪಸ್ಸುಗಳ ಫಲಗಳಿಗೆ ತಾನೇ ವಿಧಾತನಾಗಿದ್ದು ಯಾವುದೋ "ಕಾಮ" ದಿಂದ ತಪಸ್ಸನ್ನಾಚರಿಸಿದನು. ಎಂಬುದು ಅಲ್ಲಿ ಉಚಿತವಾಗಿದೆ.

ಇಲ್ಲಿ ಕೈಲಾಸಪರ್ವತದಲ್ಲಿ ತನ್ನ ಎಲ್ಲಾ ದೇವತೆಗಳ ಗಡಣದಿಂದ ಕೂಡಿರುವ ಈಶ್ವರನು ಏನನ್ನು ಯೋಗದಲ್ಲಿ ಧ್ಯಾನಿಸುತ್ತಿರುವನು ?

"ಗಿರಿಜಾಕಲ್ಯಾಣದಲ್ಲಿ ವರಕವಿ ಹರಿಹರನು ಬರೆದಂತೆ "ತನ್ನಂ ತಾನೆ ಜಾನಿಸುತಿರ್ದಂ"

ಇರುವೆ (ಸಹಿತ) ಎಂಬತ್ತು ಕೋಟಿ ಜೀವರಾಶಿಗಳಿಗೆ ಅನ್ನವನ್ನು ಅಳೆಯುವುದಕ್ಕಾಗಿ ಪಾರ್ವತೀ ಪರಮೇಶ್ವರರು ಆಕಾಶದಲ್ಲಿ ಸಂಚಾರ ಮಾಡುತ್ತಿದ್ದರು. ಎಂದು ಮನೋಹರವಾಗಿ ಜನಪದ ಕತೆಗಾರನು ನುಡಿದ ಸಂದರ್ಭವೇ ಬೇರೆಯಾಗಿದೆ. To every one his or her due. ಪ್ರತಿಯೊಬ್ಬರ ಪಾತ್ರತೆಗೆ ಸರಿ ಯಾಗಿ ಅಳೆದುಕೊಡುವುದು ಅಲ್ಲಿ ಅವರ ಕಾರ್ಯ.

ಷಡಕ್ಷರಿಯು ಮುಂದೆ "ತತ್ವಾತೀತನಾಗಿಯೂ ತತ್ವಕಾರನು. ತತ್ ತ್ವಂ ಅಸಿ, ಆ ಆತ್ಮ ನೀನೇ ಇರುವಿ.) ತತ್ತ್ವನಿಯಂತೃವು ಪರತಂತ್ರರಹಿತನಾಗಿ ಸರ್ವ ಸ್ವತಂತ್ರನು ಅವನ ಕಂಠದಲ್ಲಿ ಕರೆಯಿದೆಯಲ್ಲದೆ ಚರಿತದಲ್ಲಿ ಇಲ್ಲ. ಅವನ ಜಟಾ ಸಮೂಹದಲ್ಲಿ ರಾಗ (ಕೆಂಬಣ್ಣ) ವಿದೆಯಲ್ಲದೆ ಅವನ ಮನದಲ್ಲಿ ರಾಗವಿಲ್ಲ. (ರಾಗ–ದ್ವೇಷ–ಇತ್ಯಾದಿ) ವಿಷಮ ಸ್ಥಿತಿಯು ಅವನ ನೇತ್ರಗಳಲ್ಲಿದೆ ಮರೆಯಲಿಲ್ಲ. ಅವನ ಶಿರದಲ್ಲಿ ಜಡ (ಜಲ) ಸಂಗತಿಯಿದೆ; ಅವನಲ್ಲಿ ಜಡತೆಯಿಲ್ಲ." ಎಂದು ಅಪಹ್ನುತಿ ಪೂರ್ವಕವಾಗಿ ಶ್ಲೇಷದಿಂದ ಹೇಳಿರುವಲ್ಲಿಯೂ ತತ್ವಜ್ಞಾನವಿದೆ.

ತುಮಕೂರು ವೀರಶೈವ ಸಹಕಾರ ಬ್ಯಾಂಕ್ ನಿಯಮಿತ,
ಶ್ರೀ ಜಯಚಾಮರಾಜೇಂದ್ರ ರಸ್ತೆ, ತುಮಕೂರು-1

ಸಿರಿಯ ಬೆಳೆ ಬೆಳೆಯಿರಿ ! ಸುಖದ ಫಲ ಪಡೆಯಿರಿ !!

○ ಅಭಿವೃದ್ಧಿಯ ಹಾದಿಗೊಂದು ನಾಂದಿ !
○ ಸಮೃದ್ಧ ಜೀವನಕ್ಕೊಂದು ನೆಮ್ಮದಿ !
○ ಉಪಯುಕ್ತ ಠೇವಣಿ !

ವರಲಕ್ಷ್ಮಿ ಕ್ಯಾಷ್ ಸರ್ಟಿಫಿಕೇಟ್

ಈ ಯೋಜನೆಯಲ್ಲಿ ರೂ. 100-00 ಅಥವಾ ಅದರ ಗುಣಾಂಕಗಳಲ್ಲಿ 1 ವರ್ಷ ಅವಧಿಯಿಂದ 10 ವರ್ಷ ಅವಧಿಯವರೆಗೆ ಠೇವಣಿ ಇಡಬಹುದು. ನೀವಿಟ್ಟ ಹಣಕ್ಕೆ ಬಡ್ಡಿ ಕೊಡುತ್ತದೆ. ಶರವೇಗದಲ್ಲಿ ನಿಮ್ಮ ಹಣ ಅಧಿಕಗೊಳ್ಳುತ್ತದೆ. ಮತ್ತು ಈ ಠೇವಣಿಗೆ ಇತರೆ ಎಲ್ಲಾ ಬ್ಯಾಂಕುಗಳಿಗಿಂತ ಶೇಕಡ 1 ರಷ್ಟು ಬಡ್ಡಿ ಜಾಸ್ತಿ ಇರುತ್ತೆ.

ಈ ಕೆಳಗೆ ಕಾಣಿಸಿರುವಂತೆ ನಿಮ್ಮ ಹಣ ಮತ್ತು ಬಡ್ಡಿ ಸಹಿತ ಮರಳಿ ಪಡೆಯಿರಿ.

26-10-1982 ರಿಂದ

ತಿಂಗಳು	ರೂ. 100 00	ರೂ. 1,000 00	ರೂ. 5,000 00	ರೂ. 10,000 00
12	109 30	1,093 00	5.465 00	10,930 00
24	121 80	1,218 00	6.090 00	12,180 00
36	138 31	1,384 10	6,920 50	13,841 00
39	142 21	1,422 10	7,110 50	14,221 00
48	154 25	1,542 50	7,712 50	15,425 00
60	180 50	1,805 00	9,025 00	18,050 00
63	185 91	1,859 10	9,295 50	18,591 00
72	203 13	2,031 30	10,156 50	20,313 00
84	228 60	2,286 60	11,430 00	22,860 00
96	257 27	2,572 70	12,863 50	25,727 00
108	289 53	2,895 30	14,476 50	28,953 00
120	325 85	3,258 50	16,292 50	32,585 00

ಗ್ರಾಮಾಂತರ ಬಸವ ಜಯಂತಿ

—ಹೆಚ್. ವಿ. ವೀರಭದ್ರಯ್ಯ

ಆತ್ಮೀಯ ಶರಣಬಂಧು,

ಸುಗ್ಗನಹಳ್ಳಿಗೂ ರಘುವನ ಹಳ್ಳಿಗೂ ಬಾಂಧವ್ಯದ ಬಳ್ಳಿ ಹಬ್ಬಿದೆ. ಬಸವ
ಜಯಂತಿ ಉತ್ಸವವನ್ನು ರಘುವನಹಳ್ಳಿ ಮೂರು ವರ್ಷದಿಂದ ಆಚರಿಸುತ್ತ ಬಂದಿದೆ.
ಬೆಂಗಳೂರು ಜಿಲ್ಲೆಯ, ಕನಕಪುರ ರಸ್ತೆಯಲ್ಲಿರುವ ರಘುವನಹಳ್ಳಿ ನಗರ ಸಂಸ್ಕೃತಿ
ಗ್ರಾಮ ಸಂಸ್ಕೃತಿಗಳೆರಡನ್ನೂ ಮೇಳೈಸಿಕೊಂಡಿದೆ. ಅಲ್ಲಿನ ಶರಣಬಂಧು ಶ್ರೀ ಚಿಕ್ಕೀ
ರಪ್ಪನವರ ಮತ್ತು ಅವರ ಬಂಧುಗಳ ಭಕ್ತಿ, ಶ್ರದ್ಧೆಗಳಿಂದಾಗಿ ಬಸವ ಜಯಂತಿ ಆಚ
ರಣೆಯಲ್ಲಿ ಉಳಿದುಬಂದಿದೆ. ಉತ್ಸವಕ್ಕಾಗಿ ಅವರು ವಿಶೇಷ ಆಸಕ್ತಿವಹಿಸುತ್ತಾರೆ.

ತಾ. 13-6-85 ರಂದು ಗುರುವಾರ ಈ ವರ್ಷದ ಬಸವ ಜಯಂತಿ ಅಲ್ಲಿ
ನಡೆಯಿತು.

ಕೈವಲ್ಯಾನಂದದಿಂದ ಶಿಕ್ಷ್ಯವ ಸಮವಸರಣ ಮಂಟಪ-ಗಂಧಕುಟಿ-ಜೈನ ಧರ್ಮ
ದಲ್ಲಿ ಕಾಣಬರುತ್ತದೆ. ಅಲ್ಲಿಂದ ಧರ್ಮಪ್ರಸಾರ ನಡೆಯುತ್ತದೆ. ಅಂತೆಯೇ ನಡೆದಿರುವ
ಗ್ರಾಮಾಂತರ ಬಸವ ಜಯಂತಿಯ ಗಂಧಕುಟಿ ಶ್ರೀ ಸಿದ್ಧಗಂಗಾ ಮಠ ಅಲ್ಲಿನ ಸಮ
ವಸರಣ ಪರಮ ಪೂಜ್ಯರ ತಪೋಗದ್ದುಗೆ, ಮಹೋನ್ನತ ವ್ಯಕ್ತಿತ್ವದ ಶ್ರೀ ಶ್ರೀಗಳವರು
ಅಖಂಡ ಭಾರತದಲ್ಲಿ ಕಾಣಬರುವ ಏಕೈಕ ಮೂರ್ತಿಗಳು. ನಿದ್ದೆ-ಎಚ್ಚರಗಳ ಮೇಲೆ
ಪ್ರಭುತ್ವ ಸಂಪಾದಿಸಿರುವ ಸಿದ್ಧಿಪುರುಷರು. ಮುಗ್ಧ ಮನಸ್ಸಿನಮೇಲೆ ಒಂದು ದೊಡ್ಡ
ವ್ಯಕ್ತಿತ್ವದ ಮುದ್ರೆಯೊತ್ತುತ್ತ ಹೊರಟಿದ್ದಾರೆ-ಬಸವ ಸಂದೇಶದ ಹರಿಕಾರರಾಗಿ.

ಬಸವಣ್ಣ ಯಾರು? ಉತ್ತರ ಅವರವರ ದೃಷ್ಟಿಗೆ ತಕ್ಕಹಾಗೆ, ಅವರವರ ಬೆಳೆ
ಬಸವಣ್ಣ ಯಾರು? ಉತ್ತರ ಅವರವರ ದೃಷ್ಟಿಗೆ ತಕ್ಕಹಾಗೆ, ಅವರವರು ಬೆಳೆ
ದೆತ್ತರಕ್ಕೆ ಎದುರಾಗುತ್ತದೆ. ಅಲ್ಲಮಪ್ರಭು ನಡೆದಾಡುವ ಬೆಳಕಿನ ರಾಶಿ, ಆತ ಹೇಳು
ತ್ತಾನೆ-'ಎನ್ನ ಬಸವನಾಗಿ ಹುಟ್ಟಿಸದೆ ಪ್ರಭುದೇವನಾಗಿ ಹುಟ್ಟಿಸಿದೆಯಲ್ಲಾ'-ಎಂಬು
ದಾಗಿ-ಅಂಥ ವ್ಯಕ್ತಿತ್ವ ಬಸವಣ್ಣನದು. ಮೋಳಿಗೆಯ ಮಾರಯ್ಯನ ಭಕ್ತಿವಾಣಿ
ನುಡಿಯುತ್ತದೆ-ಬಸವಣ್ಣನೆಂಬ ಬಳ್ಳಿ ಎತ್ತಿದರೆ ಲಿಂಗವೆಂಬ ಗೊಂಚಲು, ಅದನ್ನು
ಹಿಂಡಿದರೆ ಭಕ್ತಿರಸವಯ್ಯ-ಎಂಬುದಾಗಿ. ಹಾಗಿದ್ದವರು ಬಸವಣ್ಣ. ಕಲ್ಯಾಣವೆಂಬ
ಪ್ರಣತಿಯಲ್ಲಿ ಬಸವಣ್ಣ ಬೆಳಗಿಸಿದ್ದು "ಶಿವನ ಪ್ರಕಾಶ". ಮಹಾತ್ಮ ಗಾಂಧಿ-
ಮಹಾತ್ಮನಾದ, ಗಾಂಧಿಯೇ ಗೌಣವಾದ, ಅಣ್ಣ ಬಸವಣ್ಣ-ಅಣ್ಣನಾದ ಇಡೀ ಹನ್ನೆ

ರಡನೆ ಶತಮಾನದ ಬದುಕಿಗೆ. ಅಲ್ಲಿ ಬಸವಣ್ಣ ಗೌಣವಾದ, ನೀಲಮ್ಮ ಹೇಳಿದಳು “ಅಲ್ಲಿ–ಇಲ್ಲಿ ಎಂಬ ಉಭಯ ಸಂಶಯವೇಕೆ?” ಎಂಬುದಾಗಿ. ಬಸವಣ್ಣ ಹೀಗೆ ಬೆಳೆದವನು; ಬೆಳಗಿದವನು. ಜೀವನದುದ್ದಕ್ಕೂ ಬಿಡುಗಣ್ಣಾಗಿ ಬದುಕಿದಾತ ಬಸವಣ್ಣ. ವಚನಸಾಹಿತ್ಯಕ್ಕೆ ಒಂದು ಗಟ್ಟಿಯಾದ ರೂಪಕೊಟ್ಟ ಕಾಲ ಬಸವಣ್ಣನ ಕಾಲ. ಆತನ ಮಾತು ಜೇನುತುಪ್ಪವಿದ್ದಂತೆ, ಜೇನು ರಕ್ತಶೋಧಕ ಹಾಗೂ ರಕ್ತವೃದ್ಧಿಕ. ತಮ್ಮನ್ನು ತಾವು ಪರೀಕ್ಷಿಸಿಕೊಂಡ ಮಹಾ ವ್ಯಕ್ತಿತ್ವ ಬಸವಣ್ಣನವರದು. ಆಸ್ತಿಯಿಲ್ಲದೆ, ಮಹಾಮನೆಯ ಗೃಹಸ್ಥ ಅಣ್ಣ. ಅವರದು ಹೈಮಾಚಲದೆತ್ತರಕ್ಕೆ ಬೆಳೆದ ವ್ಯಕ್ತಿತ್ವ ಅದಕ್ಕಿಟ್ಟ ಬಂಗಾರದ ಕಲಶ ಅದರೊಂದಿಗೇ ಬೆಳೆದು “ಸದುವಿನಯ”–ಎಂದು ಉಪನ್ಯಾಸ ಮಾಡಿದರು ಪ್ರಾಧ್ಯಾಪಕ ಶ್ರೀ ಜಿ. ಎಸ್. ಸಿದ್ಧಲಿಂಗಯ್ಯನವರು.

ಸಮಾರಂಭದಲ್ಲಿ ಬಂಡೇಮಠದ ಪೂಜ್ಯ ಶ್ರೀ ಶ್ರೀ ಶಿವರುದ್ರ ಸ್ವಾಮಿಗಳು, ನೆಲಮಂಗಲ ಪವಾಡದ ಬಸವಣ್ಣ ದೇವರ ಮಠದ ಪೂಜ್ಯ ಶ್ರೀ ಶ್ರೀ ಸದಾಶಿವ ಸ್ವಾಮಿಗಳು ಆಶೀರ್ವಚನ ಮಾಡಿದರು. ತುಮಕೂರು ಶ್ರೀ ಸಿದ್ಧಗಂಗಾ ಕಾಲೇಜಿನ ಕನ್ನಡ ವಿಭಾಗದ ಉಪ ಪ್ರಾಧ್ಯಾಪಕರಾದ ಶ್ರೀ ಹೆಚ್. ವಿ. ವೀರಭದ್ರಯ್ಯನವರು ಗ್ರಾಮಾಂತರ ಬಸವ ಜಯಂತಿಯ ಸಂಕ್ಷಿಪ್ತ ಪರಿಚಯ ಹಾಗೂ ಜನಪದ ಹಾಡುಗಳಲ್ಲಿ ಮೂಡಿಬಂದಿರುವ ಬಸವಣ್ಣನವರ ಸುಂದರ ಜೀವನವನ್ನು ಕುರಿತು ಮಾತನಾಡಿದರು.

ಜೀವನದ ಕಷ್ಟ ಕಾರ್ಪಣ್ಯಗಳ ನಿವಾರಣೆಗೆ ಬೇಕು ಬಸವ ಸಂದೇಶ. ಸ್ವಾವಲಂಬನಕ್ಕಿಂತ ಶ್ರೇಷ್ಠ ಮಾರ್ಗ ಬೇರೊಂದಿಲ್ಲ. ಸ್ವಾವಲಂಬನ ತತ್ವದ ತಾಯಿಬೇರು ಕಾಯಕ. ಕಾಯಕದಿಂದ ಆರ್ಥಿಕ ಭದ್ರತೆ, ಸಮಾನತೆ ಸಾಧ್ಯ. ರಾಷ್ಟ್ರದ ಆಡಳಿತ ಇಂದು ಬಡತನದ ಅನುಭವವಿಲ್ಲದವರ ಕೈಗೆ ಸಿಕ್ಕಿದೆ. “ನೊಂದ ನೋವ ನೋಯದವರೆತ್ತ ಬಲ್ಲರು?” ಮತ್ತೊಂದು ದೌರ್ಭಾಗ್ಯ ಬಡತನದಿಂದಲೇ ಬೆಳೆದು ಅಧಿಕಾರಕ್ಕೆ ಬಂದವರು ತಮ್ಮ ಪೂರ್ವ ಜೀವನದ ಸ್ಮರಣೆ ಮಾಡುತ್ತಿಲ್ಲ; ತಮ್ಮ ಹಾಗೆ ಇರುವವರ ಜೀವನದ ಬಗ್ಗೆ ಅನುಕಂಪವಿಲ್ಲ. ಇದಕ್ಕಿಂತ ದೊಡ್ಡ ದುರಂತ ಯಾವುದಿದೆ? ಮನುಷ್ಯ ಅದ್ಭುತವಾದ ದೈವಸೃಷ್ಟಿ. ವ್ಯಕ್ತಿಯ ಉದ್ಧಾರ ತನ್ನಿಂದಲೇ ಹೊರತು ಅನ್ಯರಿಂದಲ್ಲ. ಆತ್ಮವಿಶ್ವಾಸ ಬೇಕು ಇಂದು, ಬಸವಣ್ಣನವರು ಅದನ್ನು ಕಲಿಸಿಕೊಟ್ಟಿದ್ದಾರೆ. “ಕೊಲುವೆನೆಂಬ ಭಾಷೆ ದೇವನದು; ಗೆಲುವೆನೆಂಬ ಭಾಷೆ ಭಕ್ತನದು”. ಇಂಥ ಜೀವನಸಿದ್ಧಿ ಅಣ್ಣನವರದು. ನಮಗಿಂದು ಆ ಮಂತ್ರ ಬೇಕು. ಶರಣರ ಕಾಯಕ ತತ್ವದಿಂದ ಜೀವನ ಉದಾತ್ತವಾಯಿತು. ಮೌಲ್ಯಗಳ ಬೆಳಗಾಯಿತು. ದುಃಖವೂ ಉದಾತ್ತವೆನಿಸಿತು. ಮೇದರ ಕೇತಯ್ಯನಂಥ ಶರಣನ ಜೀವನ ಅದಕ್ಕೆ ಜ್ವಲಂತ ನಿದರ್ಶನ. ಇಂದು ಎಲ್ಲೆಲ್ಲೂ ಕಾರ್ಲ್‌ಮಾರ್ಕ್ಸ್‌ನ ವಾದ ಕೇಳಿಬರುತ್ತಿದೆ. ಅದು

(50 ನೇ ಪುಟ ನೋಡಿ)

ತಳಿರು-ತೋರಣ

(ಸಾಮಾಜಿಕ ಕಿರು ಕಾದಂಬರಿ)

—ಎನ್. ಎಸ್. ಗದಗಕರ, ಶುಕ್ರವಾರ ಪೇಟೆ. ನವಲೂರು ಅಗಸೆ, ಧಾರವಾಡ.

ಅನೇಕ ಜನ ಹಿತ ಚಿಂತಕರು ತಿಲೋತ್ತಮೆಯ ಚಿತ್ತ ವಿಭ್ರಮದ ಪರಿಹಾರಕ್ಕಾಗಿ ಅನೇಕ ಉಪಾಯಗಳನ್ನು ಸೂಚಿಸಿದರು ಕೆಲವರಂತೂ ಮಾನಸಿಕ ರೋಗಿಗಳ ಆಸ್ಪತ್ರೆಗೆ ಕಳಿಸಿರೆಂದು ಸೂಚಿಸಿದರು. ಆದರೆ ಗೌರವಸ್ಥ ಮನೆತನದ ಬ್ರಾಹ್ಮಣ ಹೆಣ್ಣು ಮಗಳನ್ನು ಅಲ್ಲಿಗೆ ಕಳಿಸುವುದು ಮೋಹನರಾಯರಿಗೆ ಸರಿಕಾಣಲಿಲ್ಲ; ಹಾಗೆ ನೋಡಿದರೆ, ತಿಲೋತ್ತಮೆಯ ಪತಿ ಅದೇ ಖಾತೆಯಲ್ಲಿ ಅಧಿಕಾರಿಯಾಗಿದ್ದರು ಅಲ್ಲಿಯ ವೈದ್ಯ ಜನರೆಲ್ಲ ಒಂದಿಲ್ಲೊಂದು ಆಫೀಸಿನ ಕೆಲಸದಲ್ಲಿ ಪರಿಚಿತರೇ ಆಗಿದ್ದರು ಹೀಗಿದ್ದರೂ ಆಸ್ಪತ್ರೆಗೆ ಸೇರಿಸುವ ವಿಚಾರ ರಾಯರಿಗೆ ಸರಿಬರಲಿಲ್ಲ. ತಮಗೆ ಹೊಳೆದ ಹಲವಾರು ಉಪಾಯಗಳನ್ನು ಮಾಡಬೇಕೆಂದು ತೀರ್ಮಾನಿಸಿದರು. ಅವುಗಳಲ್ಲಿ ಮೊಟ್ಟ ಮೊದಲಿನದೆಂದರೆ, ಭದ್ರಗಿರಿಯಿಂದ 6 ಮೈಲಿ ದೂರದಲ್ಲಿರುವ ನಂದಿಹಳ್ಳಿಗೆ ಕರೆದುಕೊಂಡು ಹೋಗುವ ವಿಚಾರ ಮಾಡಿದರು. ಅಲ್ಲಿ ಒಬ್ಬ ಅನುಭವಿ ಹಳ್ಳಿಯ ವೈದ್ಯನಿದ್ದ. ಅವನು ಹೋಮಿಯೊಪಥಿ ಔಷಧ ಕೊಡುತ್ತಿದ್ದ. ಆದರೆ ಪಥ್ಯ ಬಹಳ ವಿಚಿತ್ರವಾಗಿತ್ತು. ರೋಗಿಯ ತಲೆ ಶಾಂತ ಉಳಿಯಲೆಂದು ದಿನಾಲು ಮಧ್ಯಾಹ್ನಕ್ಕೆ ಗಂಭೀರ ಕೊಡ ಬಾವಿಯ ತಣ್ಣೀರು ಹಾಕುವುದು ನಿಯೋಜಿತವಾಯಿತು. ಊಟ ಸಾದಾ, ಖಾರ ತೀರಾ ಕಡಿಮೆ. ಮೊಸರು ಮಜ್ಜಿಗೆಯೇ ಹೆಚ್ಚು. ಹದಿನೈದು ದಿನ ಹೊಟ್ಟೆ ಇಲ್ಲ. ಈ ಉಪಾಯ ಮಾಡುವುದೂ ಸುಲಭ ಇರಲಿಲ್ಲ. ಮೋಹನರಾಯರು, ವಿಶ್ವನಾಥ ದಿನಾಲು ೧೫–೨೦ ಕೊಡ ನೀರು ಸೇದಿ ಹಾಕುತ್ತಿದ್ದರು. ಎಂಟು ದಿನ ಹೀಗೆಯೇ ನಡೆಯಿತು. ಊಟದ ವಿಷಯ ಖಟ್ಟು ನಿಟ್ಟಾಗಿ ಪಥ್ಯೆಯಂತೆ ಸಾಗಿತು. ಎರಡು ಮೂರು ದಿನಗಳಲ್ಲಿ ಗುಣ ಮುಖತೆಯ ಲಕ್ಷಣ ಕಂಡು ಬಂದವು. ಆದರೆ ಶ್ರಾವಣ ಮಾಸದ ಎಂಟು ದಿನದಷ್ಟೆ ಆ ವೀರಭದ್ರ ದೇವರ ವಿಸ್ತಾರವಾದ ದೇವಸ್ಥಾನದಲ್ಲಿ ಇರುಳು ಮೂರೇ ಜನರು ಇದ್ದು ಕಾಲ ಕಳೆಯುದು ಕಠಿಣವಾಯಿತು. ತಮ್ಮ ಊಟ, ಚಹದ ಚಿಂತೆ ಬೇರೆ! ಏನು ತಿಳಿಯಿತೋ ಏನೊ! ಈ ಪ್ರಯೋಗ ಹದಿನೈದು ದಿನ ನಡೆಯಲಿಲ್ಲ. ನಡುವೆಯೇ ಎಂಟು ದಿನಗಳ ನಂತರ ಮೂವರು

ಮರಳಿ ಭದ್ರಗಿರಿಗೆ ಬಂದರು. 'ಪುನಶ್ಚ ಹರಿಃ ಓಂ' ಎಂಬಂತೆ ತಿಲೋತ್ತಮೆಯ ಪರಿಸ್ಥಿತಿಯಾಯ್ತು. ರಾಯರು, ವಿಶ್ವನಾಥ ಮತ್ತೆ ಚಿಂತಾಕ್ರಾಂತರಾದರು.

ಏತನ್ಮಧ್ಯೆ ಒಂದು ಮೋಜಿನ ಸಂಗತಿ ನಡೆಯಿತು. ತಿಲೋತ್ತಮೆಯ ಬಳಗದವರು ಬಂದು ಆಕೆಯ ತಂಗಿ ಸತ್ಯಭಾಮೆಯ ಲಗ್ನವಿದೆ ವಿಶ್ರಮ ಪುರದಲ್ಲಿ ಇನ್ನು ಎಂಟು ದಿನಗಳ ನಂತರ ಎಂದು ತಿಳಿಸಿದರು. ಒಂದು ವೇಳೆ ತಾಯಿಯ ಬಳಿಯಲ್ಲಿ ಕೆಲದಿನ ಇದ್ದರೆ ಹುಚ್ಚು ಹೋದೀತೆಂದು ತಂದೆ, ಮಗ ವಿಚಾರಿಸಿದರು. ಮರು ದಿನವೇ ಹಾಗೆ ಹೊರಡುವುದೆಂದು ನಿರ್ಧಾರವಾಯ್ತು. ಒಳಗಿನ ಉದ್ದೇಶ ತಾಯಿಯ ಬಳಿಗೆ ಬಿಟ್ಟು ಬರುವುದು. ಹೊರಗಿನ ನೆಪ ಮದುವೆಗಾಗಿ ಹೊರಡುವದು. ಹೊರಗಿನ ಕಾರಣ ನಂಬಿ ತಿಲೋತ್ತಮೆ ತನ್ನ ಎರಡು ವರ್ಷದ ಮಗುವಿನೊಡನೆ ಹೊರಬಂದಳು. ಆ ಮೂಲಕ ಸಂಗಡ ಶ್ರೀಕಾಂತನು ಸಹಾಯಕ್ಕೆಂದು ನಡೆದನು. ಒಂದು ಕಾರನ್ನು ಇದಕ್ಕಾಗಿ ಬಾಡಿಗೆ ಹಿಡಿಯಲಾಯ್ತು. ಬರು ಹೋಗುವ ಅಂತರ ನೂರು ಮೈಲು ಎಂದು ಗೊತ್ತು ಮಾಡಿದ್ದಾಯಿತು.

(ಮುಂದುವರಿಯುತ್ತದೆ.)

---

48 ನೇ ಪುಟದಿಂದ (ಗ್ರಾಮಾಂತರ ಬಸವ ಜಯಂತಿ)

ಜಗತ್ತಿಗೇ ಬೇಕಾಗಿರುವಂಥ ಶ್ರೇಷ್ಠ ತತ್ವ ಎಂದು ಕೊಂಡಾಡುತ್ತಿದ್ದಾರೆ. ಲೋಚಿಸಿ ನೋಡಿದರೆ ತಿಳಿಯುತ್ತದೆ ಅದರಲ್ಲಿರುವ ದೌರ್ಬಲ್ಯ, ಕೊರತೆ. ಬಸವಣ್ಣ ಅದಕ್ಕಿಂತಲೂ ಉತ್ತಮವಾದ, ಸಾರ್ವಕಾಲಿಕವಾದ, ಸಾರ್ವತ್ರಿಕವಾದ, ಸಿದ್ಧಾಂತ ಮಂಡಿಸಿ ಹೋಗಿದ್ದಾನೆ ಅದರ ಆಚರಣೆಗಾಗಿ ನಾವಿಂದು ಸಂಕಲ್ಪ ಮನಸ್ಕರಾಗಿ ಮುಂದುವರಿಯಬೇಕಾಗಿದೆ, ನಮ್ಮತನವನ್ನಿಂದು ಅರ್ಥ ಮಾಡಿಕೊಳ್ಳಬೇಕಾಗಿದೆ. ಅದೇ ಬಸಸವಣ್ಣನವರಿಗೆ ನಾವು ಸಲ್ಲಿಸಬಹುದಾದ ಕೃತಜ್ಞತೆ, ಕಾಣಿಕೆ. ಅದಕ್ಕಾಗಿ ಗ್ರಾಮಾಂತರ ಬಸವ ಜಯಂತಿಯ ಮಣಿಹ ಮುಂದೆ ಸಾಗಿದೆ"—ಎಂದು ಅಧ್ಯಕ್ಷ ಪೀಠದಿಂದ ಪರಮ ಪೂಜ್ಯ ಶ್ರೀ ಶ್ರೀ ಗಳವರು ಆಶೀರ್ವಚನ ನೀಡಿದರು.

"ಕಳೆದ ಸಾರಿಗಿಂತ ಈ ಸಾರಿ ನಾಟಕ ತುಂಬಾ ಚೆನ್ನಾಗಿ ಬಂತು, ಇದು ಎಷ್ಟನೇ ಪ್ರಯೋಗ"—ಎಂದು ಕೇಳಿದರು ಗ್ರಾಮದ ಹಿರಿಯರೊಬ್ಬರು. ನಿಮಗೆ ಚೆನ್ನಾಗಿ ಕಂಡದ್ದು ನಮ್ಮ ಪುಣ್ಯ"–ಎಂದು ವರದಿಗಾರ ಉತ್ತರಿಸಿದ– ಜಗಜ್ಯೋತಿ ಬಸವೇಶ್ವರ ನಾಟಕದ ಯಶಸ್ಸು ಶ್ರೀ ಸಿದ್ಧಲಿಂಗೇಶ್ವರ ನಾಟಕ ಮಂಡಳಿಯವರಿಗೆ ಸಲ್ಲುತ್ತದಲ್ಲವೆ? (ಮತ್ತೆ ಬರೆಯುತ್ತೇನೆ)

ವೀರಶೈವ ಸಹಕಾರ ಬ್ಯಾಂಕ್ ನಿಯಮಿತ

ಅಕ್ಕಮಹಾದೇವಿ ರಸ್ತೆ, ಅಕ್ಕಿಪೇಟೆ
ಬೆಂಗಳೂರು-53

ರಿಸರ್ವ್ ಬ್ಯಾಂಕಿನ ನಿಯಮಾವಳಿಗೆ ಒಳಪಟ್ಟಿದೆ
ಸೇಫ್ ಡಿಪಾಜಟ್ ಲಾಕರುಗಳ ವ್ಯವಸ್ಥೆ ಇದೆ.
ಠೇವಣಿಗಳಿಗೆ ವಿಮಾ ಸೌಲಭ್ಯ ಒದಗಿಸಲಾಗಿದೆ.

ಠೇವಣಿಗಳ ಮೇಲೆ ವಾಣಿಜ್ಯ ಬ್ಯಾಂಕುಗಳಿಗಿಂತ ಶೇಕಡ 1 ರಷ್ಟು ಅಧಿಕ ಬಡ್ಡಿ ದೊರೆಯುತ್ತದೆ. ನೀವು ತೊಡಗಿಸುವ ಹಣಕ್ಕೆ ಸುರಕ್ಷೆ ಒದಗಿಸುವ ಸಂಸ್ಥೆ. ನೀವು ತೊಡಗಿಸುವ ಹಣವನ್ನು ಇಮ್ಮಡಿಯಾಗಿ ಅಥವಾ ಮುಮ್ಮಡಿಯಾಗಿ ಹೆಚ್ಚಿಸುವ ಅವಕಾಶವಿರುವ ಸಂಸ್ಥೆ–ನಿಮ್ಮ ಮಕ್ಕಳ, ನಿಮ್ಮ ಆಶ್ರಿತರ ಹಾಗೂ ನಿಮ್ಮ ಭವಿಷ್ಯದ ಹಿತರಕ್ಷಣೆ ಮಾಡುವ ಸಂಸ್ಥೆ.

(30–6–84 ಕ್ಕೆ ರೂ. ಲಕ್ಷಗಳಲ್ಲಿ)

ಷೇರು ಬಂಡವಾಳ	: 1412
ಸಾಲಗಳು ಮತ್ತು ಮುಂಗಡಗಳು	: 6896
ಠೇವಣಿಗಳು	: 9775
ನಮ್ಮ ಹೂಡಿಕೆಗಳು (ಇನ್‌ವೆಸ್ಟ್‌ಮೆಂಟ್)	: 5121

ನಮ್ಮಲ್ಲಿ ನಿಮ್ಮ ಹಣ ತೊಡಗಿಸಿ–ನಿಮ್ಮ ನೆರವಿಗೆ ನಮ್ಮೊಡನೆ ಸಹಕರಿಸಿ.

ಶ್ರೀ ಬಿ. ಎಂ. ಶ್ರೀಕಂಠಸ್ವಾಮಿ, ಎಲ್.ಇ.ಇ.
ಅಧ್ಯಕ್ಷರು

ಶ್ರೀ ಜಿ. ಶಿವಕುಮಾರ್, ಡಿ.ಎಂ.ಇ.
ಉಪಾಧ್ಯಕ್ಷರು

ಶ್ರೀ ಆರ್. ನೀಲಕಂಠಯ್ಯ
ಕಾರ್ಯನಿರ್ವಾಹಕ ನಿರ್ದೇಶಕರು

ಶ್ರೀ ಜಿ ಎನ್. ರಾಜಶೇಖರ್, ಎಲ್.ಇ.ಇ.
ಕೋಶಾಧಿಕಾರಿಗಳು

ಶ್ರೀ ಎಸ್. ಆರ್. ಸಿದ್ಧರಾಜು, ಡಿಪ್.ಇನ್.ಸ್ಟೆನೋ
ಅಂತರಿಕ ಲೆಕ್ಕ ಪರಿಶೋಧಕರು

ನಿರ್ದೇಶಕರುಗಳು
ಶ್ರೀ ಬಿ. ಎಸ್. ಪರಮಶಿವಯ್ಯ, ಎಂ.ಎ., ಶ್ರೀ ವೈ. ಟಿ. ಮಹದೇವಪ್ಪ,
ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, ಶ್ರೀ ಕೆ. ರಾಚಪ್ಪ,
ಶ್ರೀ ಬಿ. ಬಸವರಾಜು, ಬಿ.ಎಸ್ಸಿ.,ಬಿ.ಎಲ್., ಶ್ರೀಮತಿ ಎಸ್. ಗಿರಿಜಾ, ಬಿ.ಎಸ್ಸಿ.
ಶ್ರೀ ಎಂ. ಶಿವಪ್ಪ, ಬಿ.ಎಸ್ಸಿ.,ಬಿ.ಎಲ್. ಶ್ರೀ ಎಲ್. ರಾಜಪ್ಪ
ಶ್ರೀ ಬಿ. ಟಿ. ಉಮೇಶ್, ಶ್ರೀ ಹೆಚ್. ಡಿ. ರೇಣುಕುಮಾರ್.

ವ್ಯವಸ್ಥಾಪಕರು :

ಶ್ರೀ ಟಿ. ಎನ್. ಮಹದೇವಸ್ವಾಮಿ, ಬಿ.ಕಾಂ.,ಎಲ್.ಎಲ್.ಬಿ.

 Reg No. K R N Q-9

COMFORTABLE
LUXURIOUS &
PEACEFUL
STAY
AT

KENCHAMBA LODGE



SUBEDAR CHATRAM ROAD CROSS
NEAR KAPALI THEATRE
GANDHINAGAR
BANGALORE-9
Ph. 27082 GRAM : KENCHMLODG

ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಮುದ್ರಣಾಲಯ, ಶ್ರೀ ಸಿದ್ಧಗಂಗಾ ಕ್ಷೇತ್ರ.